ಸುದ್ದಿಗಳ ಹೊನಲು

# ಸಂಜೆ ಮುಗಿಲು

ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ

ಸಂಪುಟ: 21, ಸಂಚಿಕೆ: 200, ಪುಟಗಳು: 8, ಸೋಮವಾರ, 29 ಏಪ್ರಿಲ್ 2024 RNI NO. KARKAN/2002/08054

epaper: www.sanjemugilu.com

ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ



ವೇಣು ಸಾರಥ್ಯದಲ್ಲಿ...

ಸುಭಾಷಿತ

**ಸ್ವಲ್ಪ ಉಳ್ಳವನು ಬಡವನಲ್ಲ; ಇನ್ನೂ ಬೇಕೆನ್ನುವವನು ಬಡವ**

। ಸೆಬೇಕಾ

## ಪಂಚಾಂಗ

(ಸೋಮವಾರ 29, ಏಪ್ರಿಲ್ -2024)

- ಶ್ರೀಕ್ರೋಧಿ ನಾಮ ಸಂವತ್ಸರ,
- ಉತ್ತರಾಯಣ, ವಸಂತ ಋತು,
- ಚೈತ್ರ ಮಾಸ,
- ಕೃಷ್ಣ ಪಕ್ಷ/ ಪಂಚಮಿ, ಷಷ್ಠಿ
- ಜೇಷ್ಠ ನಕ್ಷತ್ರ
- ರಾಹುಕಾಲ: 04:59 PM 06 : 30 PM
- ಗುಳಿಕಕಾಲ: 03:28 PM04 : 59 PM
- ಯಮಗಂಡಕಾಲ: 12:27 PM 01 : 58 PM

## ಸಂಕ್ಷಿಪ್ತ ಸುದ್ದಿ

### ಮಾಜಿ ಗೆಳತಿಯ ಕುತ್ತಿಗೆಗೆ 9 ಬಾರಿ ಇರಿದ ಪ್ರೇಮಿ



**ಲಂಡನ್:** ನಮ್ಮ ತಂತ್ರಜ್ಞಾನಗಳು ಎಷ್ಟು ಮುಂದುವರಿದೆ ಎಂದರೆ, ಅದರಲ್ಲೂ ಸೋಶಿಯಲ್ ಮೀಡಿಯಾ ಎಲ್ಲವನ್ನು ತಲುಪಿಸುವುದರಲ್ಲಿ ಮುಂದು, ಅದು ಕೆಟ್ಟದಾಗಿರಲಿ, ಒಳ್ಳೆಯದಾಗಿರಲಿ. ಇಲ್ಲಿ ಒಬ್ಬ ಗೂಗಲ್ ನೋಡಿಕೊಂಡು ತನ್ನ ಗೆಳತಿಗೆ ಚಾಕುವಿನಿಂದ ಒಂಬತ್ತು ಬಾರಿ ಇರಿದಿದ್ದಾನೆ. ಈ ಘಟನೆ 2022ರಲ್ಲಿ ನಡೆದಿದೆ. ಆದರೆ ಕೊಲೆ ಮಾಡಲು ಆತನು ಗೂಗಲ್ ನಲ್ಲಿ ಹುಡುಕಿದ್ದಾನೆ ಎಂಬ ಸತ್ಯ ಈಗ ಬೆಳಕಿಗೆ ಬಂದಿದೆ. 2022 ರಲ್ಲಿ ಲಂಡನ್ ರೆಸ್ಟೋರೆಂಟ್‌ನಲ್ಲಿ ತನ್ನ ಮಾಜಿ ಗೆಳತಿಯನ್ನು ಒಂಬತ್ತು ಬಾರಿ ಇರಿದಿದ್ದಾನೆ. ಈ ಕೃತ್ಯ ಮಾಡಲು ಆತ ಗೂಗಲ್ ಸಹಾಯ ತೆಗೆದುಕೊಂಡಿದ್ದಾನೆ. ಈ ಬಗ್ಗೆ ಆತನ ಆನ್ ಲೈನ್ ಹಿಸ್ಟರಿ ನೋಡಿದಾಗ ಗೊತ್ತಾಗಿದೆ. ಪುಟ 2

### ಮದುವೆಗೊಪ್ಪದ ಅಪ್ರಾಪ್ತೆಯ ಮೇಲೆ ಅತ್ಯಾಚಾರ

**ಉತ್ತರ ಪ್ರದೇಶ:** ನಿಜವಾದ ಪ್ರೀತಿ ಎಂದರೆ ಜೀವ ತೆಗೆಯುವುದಲ್ಲ ಜೀವ ಉಳಿಸುವಂಥದ್ದು, ಇಲ್ಲೊಬ್ಬ ಹುಚ್ಚು ಪ್ರೇಮಿ ಮದುವೆಗೊಪ್ಪಲಿಲ್ಲ ಎಂದು ಅಪ್ರಾಪ್ತ ಬಾಲಕಿ ಮೇಲೆ ಮೂರು ದಿನಗಳ ಕಾಲ ಅತ್ಯಾಚಾರವೆಸಗಿ ಬಳಿಕ ಕಾದ ಕಬ್ಬಿಣದ ರಾಡ್ ನಿಂದ ಮುಖದ ಮೇಲೆ ಆಕೆಯ ಮುಖದ ಮೇಲೆ ತನ್ನ ಹೆಸರನ್ನು ಬರೆದಿರುವ ವಿಚಿತ್ರ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ. ಉತ್ತರ ಪ್ರದೇಶದ ಲಖಿಂಪುರ ಖೇರಿ ಜಿಲ್ಲೆಯಲ್ಲಿ ಅಪ್ರಾಪ್ತ ಬಾಲಕಿಯನ್ನು ಮೂರು ದಿನಗಳ ಕಾಲ ಸೆರೆಯಲ್ಲಿಟ್ಟುಕೊಂಡು ಪದೇ ಪದೇ ಲೈಂಗಿಕ ಕಿರುಕುಳ ನೀಡಿದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. 7 ವರ್ಷದ ಬಾಲಕಿಯನ್ನು ಥಳಿಸಿ, ಬಿಸಿ ಕಬ್ಬಿಣದ ರಾಡ್ ನಿಂದ ಆಕೆಯ ಮುಖದ ಮೇಲೆ ಅಮನ್ ಎಂದು ಬರೆದಿದ್ದಾನೆ. ಪೊಲೀಸರ ಪ್ರಕಾರ, ಆರೋಪಿಯನ್ನು ಹೈದರಾಬಾದ್ ನ ಸಲೂನ್ ನಲ್ಲಿ ಕೆಲಸ ಮಾಡುವ 22 ವರ್ಷದ ಯುವಕ ಎಂದು ಹೇಳಲಾಗಿದೆ. ಸಿಆರ್‌ಪಿಸಿಯ ಸೆಕ್ಷನ್ 164 ರ ಅಡಿಯಲ್ಲಿ ಮ್ಯಾಜಿಸ್ಟ್ರೇಟ್ ಮುಂದೆ ದಾಖಲಿಸಿದ ನಂತರ, ಪೋಕ್ಸೊ ಕಾಯ್ದೆಯ ಜೊತೆಗೆ ಅತ್ಯಾಚಾರಕ್ಕೆ ಸಂಬಂಧಿಸಿದ ಪುಟ 2



ತೀವ್ರ ಸ್ವರೂಪ ಪಡೆದುಕೊಂಡ ಪ್ರಜ್ವಲ್ ರೇವಣ್ಣ ವಿಡಿಯೋ ಕೇಸ್

# ಸಂತ್ರಸ್ತೆಯಿಂದ ಮೊದಲ ದೂರು ದಾಖಲು

**ಬೆಂಗಳೂರು/ಹಾಸನ:** ಹಾಸನ ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ಪೆನ್ ಡ್ರೈವ್‌ಪ್ರಕರಣಕ್ಕೆ ಸಂಬಂಧಿಸಿದಂತೆ ಮೊದಲ ದೂರು ದಾಖಲಾಗಿದೆ. ನೊಂದ ಸಂತ್ರಸ್ತೆ ಕೊನೆಗೂ ಮಹಿಳಾ ಆಯೋಗಕ್ಕೆ ದೂರುನೀಡಿದ್ದಾರೆ.

ನಿನ್ನೆ ಓರ್ವ ಸಂತ್ರಸ್ತೆ ಫೋನ್ ಕಾಲ್‌ಮೂಲಕ ದೂರು ನೀಡಿದ್ದರೆ, ಇಂದು ಮಹಿಳಾ ಆಯೋಗಕ್ಕೆ ವಾಟ್ಸಾಪ್ ಮೂಲಕ ದೂರು ನೀಡಿದ್ದಾರೆ. ಇನ್ನು ಮತ್ತೊಂದೆಡೆ ಇದೇಪ್ರಜ್ವಲ್ ರೇವಣ್ಣ ಅಶ್ಲೀಲ ವಿಡಿಯೋ ವೈರಲ್ ಗೆ ಸಂಬಂಧಿಸಿದಂತೆ ಜೆಡಿಎಸ್ ಚುನಾವಣಾ ಏಜೆಂಟ್ ಹಾಸನದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದಾರೆ.



## ರೇವಣ್ಣ ವಿರುದ್ಧವೂ ಎಫ್‌ಐಆರ್!

**ಹಾಸನ:** ಸಂಸದ ಪ್ರಜ್ವಲ್ ರೇವಣ್ಣ ರದ್ದು ಎನ್ನಲಾದ ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಲೈಂಗಿಕ ದೌರ್ಜನ್ಯ ಆರೋಪದಲ್ಲಿ ಪ್ರಜ್ವಲ್ ರೇವಣ್ಣ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಇದೀಗ ತಂದೆ ಹೆಚ್.ಡಿ.ರೇವಣ್ಣ ವಿರುದ್ಧವೂ ಹೊಳೆನರಸೀಪುರ ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಪ್ರಕರಣದ ಎ1 ಆರೋಪಿ ಹೆಚ್.ಡಿ.ರೇವಣ್ಣ, ಎ2 ಪ್ರಜ್ವಲ್‌ರೇವಣ್ಣ ಆಗಿದ್ದು, ಈ ಹಿಂದೆರೇವಣ್ಣ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸಂತ್ರಸ್ತ ಮಹಿಳೆ ದೂರು ಆಧರಿಸಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

ಐಪಿಸಿ ಸೆಕ್ಷನ್ 354ಎ (ಲೈಂಗಿಕ ಕಿರುಕುಳ ಆರೋಪ), 354ಆ (ಮಹಿಳೆಗೆ ಮುಜುಗರಆಗುವಂತೆ ಮಾಡುವುದು), 506 (ಬೆದರಿಕೆ), 509 (ಮಹಿಳೆ ಮಾನಕ್ಕೆ ಹಾನಿ) ರಡಿ ಎಫ್‌ಐಆರ್ ದಾಖಲಿಸಲಾಗಿದೆ. ಹಲವು ಮಹಿಳೆಯರ ಮೇಲೆ ದೌರ್ಜನ್ಯವೆಸಗಿದ ದೃಶ್ಯಗಳು ಹರಿದಾಡಿದ್ದವು. ಪುಟ 2

# ರಾಮ ಮಂದಿರ ನಿರ್ಮಾಣ ಮಾಡದಂತೆ ಕಾಂಗ್ರೆಸ್ ಹಿಂಬಾಲಕರಿಂದ ಕುತಂತ್ರ

**ಕಾರವಾರ:** ಕಾಂಗ್ರೆಸ್ ಪಕ್ಷ ಸೇರಿದಂತೆಅವರ ಹಿಂಬಾಲಕರು ನ್ಯಾಯಾಲಯಕ್ಕೆ ಹೋಗಿ ರಾಮಮಂದಿರ ನಿರ್ಮಾಣ ಮಾಡದಂತೆ ಕುತಂತ್ರ ಮಾಡಿದ್ದರು ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದ್ದಾರೆ.

ಶಿರಸಿಯಲ್ಲಿ ಪಕ್ಷದ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಆಯೋಧ್ಯೆಯಲ್ಲಿ ನಮ್ಮರಾಮಮಂದಿರ ನಿರ್ಮಾಣಕ್ಕೆ ನಮ್ಮ ಪೂರ್ವಜರು 500 ವರ್ಷ ಹೋರಾಡಬೇಕಾಯಿತು. ರಾಮಮಂದಿರ ನಿರ್ಮಾಣಕ್ಕೆ ಹಲವರು ಪ್ರಾಣತ್ಯಾಗ ಮಾಡಿದ್ದಾರೆ.ದೇಶ ಸ್ವತಂತ್ರವಾದತಕ್ಷಣವೇ ಈ ಕಾರ್ಯ ಮಾಡಬೇಕಾಗಿತ್ತು.ಆದರೆಅಂದು ಆಡಳಿತ ನಡೆಸಿದವರು ಮಾಡಲಿಲ್ಲ. ಈ ಕಾರ್ಯ ಮಾಡಲು 56 ಇಂಚಿನದೇಹ ಬೇಕಾಯಿತುಎಂದುಕಾಂಗ್ರೆಸ್ ವಿರುದ್ಧಕುಟುಕಿದರು.

ರಾಮಮಂದಿರ ಸರ್ಕಾರ ಹಣದಿಂದ ನಿರ್ಮಾಣವಾಗಲಿಲ್ಲ. ನಿಮ್ಮದಾನ-ಧರ್ಮದಿಂದ ಈ ಮಂದಿರ ನಿರ್ಮಾಣವಾಯಿತು.ಈ ಹಿಂದೆ ಮಾಡಿದಎಲ್ಲಾ ಪಾಪ ಕೃತಗಳನ್ನು ಮರೆತು ರಾಮಮಂದಿರ ಉದ್ಘಾಟನೆಗೆ ಕಾಂಗ್ರೆಸ್ ಪಕ್ಷದ ಸೇರಿದಂತೆ ಇತರಿಗೆ ಆಹ್ವಾನ ನೀಡಲಾಗಿತ್ತು. ಆದರೆ ಅವರು ರಾಮಮಂದಿರ ಲೋಕಾರ್ಪಣೆ ಕಾರ್ಯಕ್ರಮಕ್ಕೆ ಬರಲಿಲ್ಲ ಎಂದು ಹೇಳಿದರು.

ರಾಮಜನ್ಮಭೂಮಿ ಬಾಬರಿ ಮಸೀದಿ ಪ್ರಕರಣದ ಪ್ರಮುಖ ದೂರುದಾರರಲ್ಲಿ ಒಬ್ಬರಾದ ಇಕ್ಬಾಲ್ ಅನ್ಸಾರಿ ಅವರನ್ನು ಉಲ್ಲೇಖಿಸಿದ ಮೋದಿ, ಅನ್ಸಾರಿಕುಟುಂಬ ಮೂರು ತಲೆಮಾರುಗಳಿಂದ ಹೋರಾಟ ಮಾಡುತ್ತಾ ಬಂದಿತ್ತು. ಅನ್ಸಾರಿ ಕುಟುಂಬಕ್ಕೂ ಆಹ್ವಾನ ನೀಡಲಾಗಿತ್ತು. ಅವರು ರಾಮಮಂದಿರ ಉದ್ಘಾಟನೆ ದಿನ ಇಡೀ ದಿನ ಉಪಸ್ಥಿತರಿದ್ದರು. ಇಷ್ಟೇ ಅಲ್ಲದೇ ಅವರ ರಕ್ಷಣೆಗೆ ಇದ್ದ ಹಿಂದೂಗನ್ ಮ್ಯಾನ್‌ಗೆರಾಮ ಮಂದಿರ ಮೂರ್ತಿಯನ್ನು ಕೊಡುಗೆ ನೀಡಿದ್ದರು ಎಂದರು.



ಹುಬ್ಬಳ್ಳಿಯ ನೇಹಾ ಪ್ರಕರಣವನ್ನು ಪ್ರಸ್ತಾಪಿಸಿದ ಮೋದಿ, ಕರ್ನಾಟಕದಲ್ಲಿ ಒಂದು ಮಗಳು ಹತ್ಯೆಯಾಗಿದ್ದು ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಕಾಂಗ್ರೆಸ್ ಮತಬ್ಯಾಂಕ್ ತುಷ್ಟೀಕರಣ ಮಾಡುತ್ತಿದೆ. 2014ರ ಮೊದಲು ಬಾಂಬ್ ಸ್ಫೋಟಗಳ ಸುದ್ದಿಗಳು ಬರುತ್ತಿದ್ದವು. ಆದರೆ 2014ರ ನಂತರ ಈ ಪ್ರಕರಣಗಳಿಗೆ ಕಡಿವಾಣ ಹಾಕಲಾಯಿತು. ಕರ್ನಾಟಕದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುತ್ತಿದ್ದಂತೆ ಐಟಿ ಹಬ್ ಬೆಂಗಳೂರಿನಲ್ಲಿ ಬಾಂಬ್ ಸ್ಫೋಟವಾಗಿದೆ. ಮೊದಲು ದೇಶಕ್ಕೆ ನುಗ್ಗಿ ಬಾಂಬ್ ಸ್ಫೋಟ ಮಾಡುತ್ತಿದ್ದರು.ಆದರೆಇಂದು ಹೊಸ ಹಿಂದೂಸ್ತಾನ ಶತ್ರುಗಳ ಮನೆಗೆ ನುಗ್ಗಿ ಹೊಡೆಯುತ್ತಿದೆ ಎಂದು ಹೇಳಿದರು.

# ಎನ್‌ಡಿಎ ಅಧಿಕಾರಕ್ಕೆ ಬಂದರೆ ಹಜ್ ಯಾತ್ರೆಗೆ 1 ಲಕ್ಷ ರೂ. ನೆರವು

**ಆಂಧ್ರಪ್ರದೇಶ:** ಆಂಧ್ರಪ್ರದೇಶದಲ್ಲಿ ಲೋಕಸಭಾ ಚುನಾವಣೆ ಜತೆಗೆ ವಿಧಾನಸಭೆ ಚುನಾವಣೆಯೂ ನಡೆಯುತ್ತಿದ್ದು, ರಾಜಕೀಯ ಬಿಸಿ ಹೆಚ್ಚಿದೆ. ಆಡಳಿತಾರೂಢ ವೈಎಸ್‌ಆರ್‌ಸಿಪಿ ಮತ್ತು ವಿರೋಧ ಪಕ್ಷ ಟಿಡಿಪಿ ನಡುವೆ ಆರೋಪ-ಪ್ರತ್ಯಾರೋಪಗಳ ಸುತ್ತು ಮುಂದುವರೆದಿದೆ. ಟಿಡಿಪಿ ಮುಖ್ಯಸ್ಥ ಎನ್ ಚಂದ್ರಬಾಬು ನಾಯ್ಡು ಅವರು ಆಂಧ್ರಪ್ರದೇಶದಲ್ಲಿ ಟಿಡಿಪಿ, ಬಿಜೆಪಿ ಮತ್ತು ಜನಸೇನಾ ಸರ್ಕಾರ ಅಧಿಕಾರಕ್ಕೆ ಬಂದರೆ ಹಜ್ ಯಾತ್ರಿಕರಿಗೆ 1 ಲಕ್ಷ ರೂಪಾಯಿ ನೀಡಲಾಗುವುದು ಎಂದು ಹೇಳಿದ್ದಾರೆ.

ನೆಲ್ಲೂರು ಜಿಲ್ಲೆಯ ಮುಸ್ಲಿಂ ಸಮುದಾಯವನ್ನುದ್ದೇಶಿಸಿ ಮಾತನಾಡಿದ ಅವರು ಈ ಹೇಳಿಕೆ ನೀಡಿದ್ದಾರೆ. ಆಂಧ್ರಪ್ರದೇಶದಲ್ಲಿ ಟಿಡಿಪಿ, ಬಿಜೆಪಿ ಮತ್ತು ಜನಸೇನೆ ಒಳಗೊಂಡ ಎನ್‌ಡಿಎ ಸರ್ಕಾರ ರಚನೆಯಾದ ತಕ್ಷಣ ಮೆಕ್ಕಾಗೆ ಹೋಗುವ ಮುಸ್ಲಿಮರಿಗೆ 1 ಲಕ್ಷ ರೂಪಾಯಿ ಆರ್ಥಿಕ ನೆರವು ನೀಡಲಾಗುವುದು ಎಂದು ನಾಯ್ಡು ಹೇಳಿದರು.



ಹೈದರಾಬಾದಿನ ಮುಸ್ಲಿಮರು ತಮ್ಮ ಸಮುದಾಯದ ಇತರ ಪ್ರದೇಶಗಳಿಗೆ ಹೋಲಿಸಿದರೆ ಬಹಳ ಮುಂದಿದ್ದಾರೆ. ಇದಕ್ಕೆ ಅವರು ತಮ್ಮ ಪಕ್ಷದ ನೀತಿಗಳಿಗೆ ಮನ್ನಣೆ ನೀಡುತ್ತಾರೆ ಎಂದಿದ್ದಾರೆ.ಹೈದರಾಬಾದ್‌ನಲ್ಲಿ ಟಿಡಿಪಿ ಉರ್ದು ವಿಶ್ವವಿದ್ಯಾಲಯವನ್ನು ಸ್ಥಾಪಿಸಿದೆ ಮತ್ತು ಹಜ್ ಹೌಸ್ ಅನ್ನು ಸಹ ನಿರ್ಮಿಸಿದೆ.

ವೈಎಸ್‌ಆರ್‌ಸಿಪಿ ಮುಖ್ಯಸ್ಥ ಮತ್ತು ಮುಖ್ಯಮಂತ್ರಿ ವೈಎಸ್ ಜಗನ್ ಮೋಹನ್ ರೆಡ್ಡಿ ಅವರು ಕಳೆದ ಐದು ವರ್ಷಗಳಲ್ಲಿ ಒಂದೇ ಒಂದು ಮಸೀದಿಯನ್ನು ನಿರ್ಮಿಸುವ ಪ್ರಯತ್ನವನ್ನೂ ಮಾಡಿಲ್ಲ. ಅಂತೆಯೇ, ವೈಎಸ್‌ಆರ್‌ಸಿಪಿ ಸರ್ಕಾರವು ರಾಷ್ಟ್ರೀಯ ನಾಗರಿಕರ ನೋಂದಣಿ (ಎನ್‌ಆರ್‌ಸಿ) ಮತ್ತು ಕೇಂದ್ರ ಸರ್ಕಾರದ ಇತರ ಉಪಕ್ರಮಗಳಿಗೆ ಬೇಷರತ್ತಾದ ಬೆಂಬಲವನ್ನು ನೀಡಿದೆ ಎಂದು ನಾಯ್ಡು ಒತ್ತಿ ಹೇಳಿದರು. ಮುಸ್ಲಿಂ ಸಮುದಾಯವು ನಂಬಿಕೆ, ಧೈರ್ಯ ಮತ್ತು ಕಠಿಣ ಪರಿಶ್ರಮಕ್ಕೆ ಹೆಸರುವಾಸಿಯಾಗಿದೆ ಎಂದು ಹೇಳಿದರು.

ಕಳೆದ ಐದು ವರ್ಷಗಳಲ್ಲಿ ಜಾರಿಗೆ ತಂದ ಯಾವುದೇ ಒಂದು ಯೋಜನೆಯನ್ನು ನಿಲ್ಲಿಸಲು ಪ್ರಯತ್ನಿಸಲಿ ಎಂದು ಸವಾಲು ಹಾಕಿದರು. ವೈಎಸ್‌ಆರ್‌ಸಿಪಿ ಮತ್ತೆ ಅಧಿಕಾರಕ್ಕೆ ಬಂದರೆ ಅಸ್ತಿತ್ವದಲ್ಲಿರುವ ಎಲ್ಲಾ ಯೋಜನೆಗಳು ಮುಂದುವರಿಯುತ್ತವೆ. ಪುಟ 2

ಪ್ರಜ್ವಲ್ ರೇವಣ್ಣ ಪೆನ್ ಡ್ರೈವ್ ಪ್ರಕರಣ

# ಪಕ್ಷದಿಂದ ಅಮಾನತುಗೊಳಿಸುವಂತೆ ಜೆಡಿಎಸ್ ಶಾಸಕ ಒತ್ತಾಯ

**ಬೆಂಗಳೂರು:** ಹಾಸನ ಸಂಸದ, ಲೋಕಸಭೆ ಚುನಾವಣೆಯಲ್ಲಿ ಎನ್ ಡಿಎ ಅಭ್ಯರ್ಥಿಯಾಗಿರುವ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವಿಡಿಯೋ ಪ್ರಕರಣಕ್ಕೆ ಸಂಬಂಧಿಸಿದ್ದಂತೆ ಜೆಡಿಎಸ್ ಶಾಸಕ ಶರಣಗೌಡ ಕಂದಕೂರು ಅವರು ವರಿಷ್ಠ, ಮಾಜಿ ಪ್ರಧಾನಿ ಹೆಚ್ ಡಿ ದೇವೇಗೌಡರಿಗೆ ಪತ್ರ ಬರೆದು, ಪ್ರಜ್ವಲ್ ರೇವಣ್ಣರನ್ನು ಪಕ್ಷದಿಂದ ಅಮಾನತುಗೊಳಿಸುವಂತೆ ಆಗ್ರಹಿಸಿದ್ದಾರೆ.



ಕೆಲ ದಿನಗಳಿಂದ ಹರದಾಡುತ್ತಿರುವ ವಿಡಿಯೋದಿಂದ ಮುಜುಗರವಾಗಿದೆ. ಈ ವಿಡಿಯೋಗಳಲ್ಲಿ ಪ್ರಜ್ವಲ್ ರೇವಣ್ಣ ಕಾಣಿಸಿಕೊಂಡಿದ್ದಾರೆ. ಮೇಲ್ನೋಟಕ್ಕೆ ಪ್ರಜ್ವಲ್ ತಪ್ಪಿತಸ್ಥರು ಎಂಬ ಭಾವನೆ ಉಂಟಾಗಿದೆ. ದೇವೇಗೌಡರು, ಹೆಚ್ ಡಿ ಕುಮಾರಸ್ವಾಮಿ ಅವರು ಹೆಣ್ಣು ಮಕ್ಕಳಿಗೆ ಗೌರವ ನೀಡುತ್ತಾ ಬಂದಿದ್ದಾರೆ. ಹೆಚ್ ಡಿ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಲಾಟರಿ ನಿಷೇಧ ಮಾಡಿದ್ದರು. ಲಾಟರಿ ನಿಷೇಧಿಸಿ ಹೆಣ್ಣು ಮಕ್ಕಳ ಪುಣ್ಯಕ್ಕೆ ಪಾತ್ರರಾಗಿದ್ದಾರೆ. ಪಕ್ಷದ ಚಿಹ್ನೆಯಲ್ಲಿ ಭತ್ತದ ತೆನೆಹೊತ್ತ ಮಹಿಳೆಯ ಚಿತ್ರ ಇದೆ. ಭತ್ತದ ತೆನೆಹೊತ್ತ ಮಹಿಳೆಯ ಚಿತ್ರ ಹೆಣ್ಣಿನ ಗೌರವವನ್ನ ಪ್ರತಿಪಾದಿಸುತ್ತೆ. ಇಂತಹ ಪರಂಪರೆ ಹೊಂದಿರುವ ಪಕ್ಷಕ್ಕೆ ಮುಜುಗರ ತಂದಿರುವುದು ಸುಳ್ಳಲ್ಲ. ಹೀಗಾಗಿ ಪ್ರಜ್ವಲ್ ರೇವಣ್ಣರನ್ನು ಕೂಡಲೇ ಅಮಾನತು ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯ ಸರ್ಕಾರ ಪ್ರಕರಣದ ತನಿಖೆ ನಡೆಸಲು ಎಸ್ ಐಟಿ ರಚಿಸಿದೆ. ಪಕ್ಷ ಕೂಡ ಆಂತರಿಕ ಸಮಿತಿ ರಚನೆ ಮಾಡಿ ಸತ್ಯಾಸತ್ಯ ತಿಳಿಸಬೇಕು. ಪುಟ 2

# ಯಾರೇ ಇದ್ದರೂ ಕ್ರಮ ಕೈಗೊಳ್ಳುತ್ತೇವೆ

**ಬೆಂಗಳೂರು:** ಹಾಸನ ಹಾಲಿ ಸಂಸದ ಪ್ರಜ್ವಲ್ ರೇವಣ್ಣ ಮತ್ತು ಮಾಜಿ ಸಚಿವ ಹಾಗೂ ಹಾಲಿ ಶಾಸಕ ಹೆಚ್ ಡಿ ರೇವಣ್ಣ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿದಂತೆ, ಹೆಚ್ ಡಿ.ರೇವಣ್ಣ ಇರಲಿ, ಯಾರೇ ಇದ್ದರೂ ಕ್ರಮ ಕೈಗೊಳ್ಳುತ್ತೇವೆ. ದೂರುದಾರರು ಯಾರ ಹೆಸರು ಉಲ್ಲೇಖಿಸಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು. ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಸಂತ್ರಸ್ತರಿಗೆ ಭಯ ಹುಟ್ಟಿಸಿದರೇ ಅವರಿಗೆ ನಾವು ಭದ್ರತೆ ನೀಡುತ್ತೇವೆ ಎಂದರು.



ಪ್ರಕರಣದ ತನಿಖೆಯನ್ನು ಎಸ್ ಐಟಿಗೆ ವಹಿಸಿದ್ದೇವೆ. ತನಿಖಾ ತಂಡದಲ್ಲಿ ಎಸ್ ಪಿ ಮಟ್ಟದ ಅಧಿಕಾರಿಗಳು ಇದ್ದಾರೆ. ಎಸ್ ಐಟಿ ಅಧಿಕಾರಿಗಳ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುತ್ತೆ. ಅಧಿಕಾರಿಗಳು ಪೆನ್ ಡ್ರೈವ್, ಸಾಕ್ಷಿ ಎಲ್ಲವನ್ನೂ ಕಲೆ ಹಾಕುತ್ತಿದ್ದಾರೆ. ವಿದೇಶದಿಂದ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ವಾಪಸ್ ಕರೆಸಿಕೊಳ್ಳುತ್ತೇವೆ. ಎಸ್ ಐಟಿ ಅಧಿಕಾರಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಎಲ್ಲ ವಿಡಿಯೋಗಳನ್ನು ಎಫ್ ಎಸ್ ಲ್ ಗೆ ಕಳುಹಿಸುತ್ತೇವೆ ಎಂದು ಹೇಳಿದರು.

**ಬಂಧನಕ್ಕೆ ಒತ್ತಾಯ:** ಹಾಸನ ಜಿಲ್ಲೆಯ ಹಲವು ಮಹಿಳೆಯರ ಜೊತೆಗಿನ ಅಶ್ಲೀಲ ವೀಡಿಯೋ ಚಿತ್ರೀಕರಿಸಿದ ಪ್ರಭಾವಿ ವ್ಯಕ್ತಿಯನ್ನು ಬಂಧಿಸುವಂತೆ ಹಾಸನ ಜಿಲ್ಲಾ ಜನಪರ ಚಳುವಳಿಗಳ ಒಕ್ಕೂಟ ಆಗ್ರಹಿಸಿದೆ. ಅಲ್ಲದೆ ಪೆನ್ ಡ್ರೈವ್ ಮೂಲಕ ಮಹಿಳೆಯರ ಅಶ್ಲೀಲ ವೀಡಿಯೋ ಹಂಚಿ ಅವರ ಖಾಸಗಿ ಜೀವನಕ್ಕೆ ಧಕ್ಕೆ ತಂದವರ ವಿರುದ್ಧವೂ ಕಠಿಣ ಕ್ರಮಕ್ಕೆ ಆಗ್ರಹಿಸಿ ವಿವಿಧ ರೈತಪರ ಸಂಘಟನೆಗಳು, ಜನಪರ, ದಲಿತ, ಮಹಿಳಾ ಸಂಘಟನೆಗಳು ಇಂದು ಪ್ರತಿಭಟನೆ ನಡೆಸಲಿವೆ.

**ಜೆಡಿಎಸ್‌ನಿಂದಲೂ ದೂರು:** ಏಪ್ರಿಲ್ 21ರಂದು ಪೆನ್ ಡ್ರೈವ್, ಸಿಡಿ ಮೂಲಕ ಹಾಸನ ಲೋಕಸಭಾ ಕ್ಷೇತ್ರದ ಎನ್ ಡಿಎ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವಿಡಿಯೋಗಳನ್ನು ವೈರಲ್ ಮಾಡಲಾಗಿತ್ತು. ಇದರ ಬೆನ್ನಲ್ಲೇ ಜೆಡಿಎಸ್ ಚುನಾವಣಾ ಏಜೆಂಟ್, ಏಪ್ರಿಲ್ 23ರಂದು ಅರೇಹಳ್ಳಿ ನವೀನ್ ಗೌಡ ಎಂಬುವರ ವಿರುದ್ಧ ಹಾಸನದ ಸೈಬರ್ ಕ್ರೈಂ ಠಾಣೆಗೆ ದೂರು ನೀಡಿದ್ದರು. ಪುಟ 2

### ದತ್ತಪೀಠದಲ್ಲಿ ಪ್ರವಾಸಿ ಬಸ್ ಪಲ್ಟಿ ಬಾಲಕ ಸಾವು



**ಚಿಕ್ಕಮಗಳೂರು:** ಚಾಲಕನ ನಿಯಂತ್ರಣ ತಪ್ಪಿ ಪ್ರವಾಸಿ ಬಸ್ 100 ಅಡಿ ಎತ್ತರದಿಂದ ಪಲ್ಟಿಯಾದ ಪರಿಣಾಮ ಬಸ್ಸಿನಲ್ಲಿದ್ದ 20ಕ್ಕೂ ಹೆಚ್ಚು ಮಂದಿಗೆ ಗಾಯವಾಗಿದ್ದು, 6 ವರ್ಷದ ಬಾಲಕನೋರ್ವ ಸಾವನ್ನಪ್ಪಿದಘಟನೆತಾಲೂಕಿನದತ್ತಪೀಠದಲ್ಲಿ ನಡೆದಿದೆ.

ತುಮಕೂರುಜಿಲ್ಲೆ ಶಿರಾ ತಾಲೂಕಿನಿಂದ ಮಿನಿ ಬಸ್ ಮಾಡಿಕೊಂಡು 23 ಜನ ಚಿಕ್ಕಮಗಳೂರು ಜಿಲ್ಲೆಗೆ ಪ್ರವಾಸಕ್ಕೆ ಬಂದಿದ್ದರು. ಮುಳ್ಳಯ್ಯನಗಿರಿ, ಸೀತಾಳಯ್ಯನಗಿರಿ ಸೇರಿದಂತೆ ಪಶ್ಚಿಮ ಘಟ್ಟಗಳ ಸೌಂದರ್ಯ ಸವಿದು ಪುಟ 2

# ಹಿರಿಯ ನಾಯಕ ಶ್ರೀನಿವಾಸ ಪ್ರಸಾದ್ ನಿಧನ

**ಬೆಂಗಳೂರು:** ಕರ್ನಾಟಕದ ಹಿರಿಯ ನಾಯಕ, ಚಾಮರಾಜನಗರ ಬಿಜೆಪಿ ಸಂಸದ ಹಾಗೂ ಕೇಂದ್ರದ ಮಾಜಿ ಸಚಿವ ಶ್ರೀನಿವಾಸ ಪ್ರಸಾದ್ (76) ಅವರು ನಿಧನರಾಗಿದ್ದಾರೆ. ಶ್ರೀನಿವಾಸ ಪ್ರಸಾದ್ ಅವರು ಮೂಲತಃ ಮೈಸೂರಿನವರು. ಎಂ.ವೆಂಕಟಯ್ಯ ಮತ್ತು ಪುಟ್ಟಮ್ಮ ದಂಪತಿಗೆ 1947ರಲ್ಲಿ ಜನಿಸಿದರು. ರಾಜ್ಯ ಶಾಸ್ತ್ರದಲ್ಲಿ ಎಂಎ ಪದವಿ ಪಡೆದಿದ್ದ ಶ್ರೀನಿವಾಸಪ್ರಸಾದ್ ಅವರು 1974ರಲ್ಲಿ ಚುನಾವಣಾ ರಾಜಕೀಯಕ್ಕೆ ಪ್ರವೇಶಿಸಿ 1974ಲ್ಲಿ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಉಪಚುನಾವಣೆ ಹಾಗೂ 1978ರಲ್ಲಿ ಟಿ.ನರಸೀಪುರ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಸೋತಿದ್ದರು.

ಬಳಿಕ 1980ರಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಕಾಂಗ್ರೆಸ್ (ಐ) ಅಭ್ಯರ್ಥಿಯಾಗಿ, ಹಾಗೂ 1984, 1989, 1991 ರಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಹಾಗೂ 1999 ರಲ್ಲಿ ಜೆ.ಡಿ.ಯು ಅಭ್ಯರ್ಥಿಯಾಗಿ ಮತ್ತು 2019ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದಿದ್ದರು. ಇದರೊಂದಿಗೆ ಈ ಕ್ಷೇತ್ರದಿಂದ ಆರು ಬಾರಿ ಆಯ್ಕೆಯಾದ ಹೆಗ್ಗಳಿಕೆಗೂ ಪಾತ್ರರಾಗಿದ್ದರು. 1999ರಲ್ಲಿ ವಾಜಪೇಯಿ ಸಂಪುಟದಲ್ಲಿ ಆಹಾರ ಮತ್ತು ನಾಗರಿಕ ಇಲಾಖೆ ರಾಜ್ಯ ಸಚಿವರೂ ಆಗಿದ್ದರು. ಅಲ್ಲದೆ ನಂಜನಗೂಡು ವಿಧಾನಸಭಾ ಕ್ಷೇತ್ರದಿಂದ 2008 ಹಾಗೂ 2013 ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಕಂದಾಯ ಸಚಿವರಾಗಿದ್ದ ಶ್ರೀನಿವಾಸ ಪ್ರಸಾದ್ ಅವಿವಾಹಿತ ಮಹಿಳೆಯರಿಗೆ ಮಾಶಾಸನ ನೀಡುವ ಮಹತ್ವದ ಮನಸ್ವಿನಿ ಯೋಜನೆಯನ್ನು ಜಾರಿಗೆ ತಂದಿದ್ದರು. ಪುಟ 2



## ಗಣ್ಯರ ಸಂತಾಪ

**ಬೆಂಗಳೂರು:** ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದ ಶ್ರೀನಿವಾಸ ಪ್ರಸಾದ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ. ''ಹಿರಿಯ ನಾಯಕ ಹಾಗೂ ಚಾಮರಾಜನಗರದ ಸಂಸದರಾದ ವಿ.ಶ್ರೀನಿವಾಸ ಪ್ರಸಾದ್ ಅವರ ನಿಧನದಿಂದ ನನಗೆ ಅತೀವ ನೋವಾಗಿದೆ. ಅವರು ಸಾಮಾಜಿಕ ನ್ಯಾಯದ ಹೋರಾಟಗಾರರಾಗಿದ್ದರು, ಬಡವರು, ದೀನದಲಿತರು ಮತ್ತು ಅಂಚಿನಲ್ಲಿರುವವರ ಕಲ್ಯಾಣಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಅವರು ತಮ್ಮ ವಿವಿಧ ಸಮಾಜ ಸೇವೆಗಾಗಿ ಬಹಳ ಜನಪ್ರಿಯರಾಗಿದ್ದರು. ಓಂ ಶಾಂತಿ'' ಎಂದು ಪ್ರಧಾನಿ ಮೋದಿ ಟ್ವೀಟ್ ಮೂಲಕ ಸಂತಾಪ ಸೂಚಿಸಿದ್ದಾರೆ.

**ಸಿಎಂ ಸಿದ್ದರಾಮಯ್ಯ ಸಂತಾಪ:** ''ದಲಿತ ದಮನಿತರ ಪರವಾದ ದಿಟ್ಟ ದನಿ ಮಾಜಿ ಸಚಿವ ಮತ್ತು ಹಿರಿಯ ಮುತ್ಸದ್ದಿ ನಾಯಕ ಶ್ರೀನಿವಾಸ ಪ್ರಸಾದ್ ಅವರ ಸಾವು ನನ್ನನ್ನು ಆಘಾತಕ್ಕೀಡು ಮಾಡಿದೆ. ಅನ್ಯಾಯ-ಅಸಮಾನತೆಯ ವಿರುದ್ಧದ ಹೋರಾಟವನ್ನೇ ಬದುಕಾಗಿಸಿಕೊಂಡಿದ್ದ ಅವರ ಅಗಲಿಕೆ ರಾಜ್ಯದ ಸಾಮಾಜಿಕ ನ್ಯಾಯದ ಪರವಾದ ರಾಜಕೀಯ ಹೋರಾಟಕ್ಕೆ ದೊಡ್ಡ ಹಿನ್ನಡೆಯಾಗಿದೆ.



ದೀರ್ಘಕಾಲ ಕಾಂಗ್ರೆಸ್ ಪಕ್ಷದ ಪ್ರಮುಖ ನೇತಾರರಾಗಿ ಕೆಲಸ ಮಾಡಿದ್ದ ಶ್ರೀನಿವಾಸ ಪ್ರಸಾದ್ ಸಚಿವರಾಗಿ ಮತ್ತು ಲೋಕಸಭಾ ಸದಸ್ಯರಾಗಿ ದೀರ್ಘ ಕಾಲ ಜನ ಸೇವೆ ಮಾಡಿದ್ದಾರೆ. ಪುಟ 2

# ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು: ಡಾ.ಜೆ.ಎನ್.ರಾಮಕೃಷ್ಣೇಗೌಡ

ಚಾಮರಾಜನಗರ: ಮಕ್ಕಳು ತಮ್ಮ ಪ್ರತಿಭೆ ಹೊರಹೊಮ್ಮಿಸಲು ವೇದಿಕೆಗಳು ಸಿಗುತ್ತಿದೆ. ಜತೆಗೆ ವಿಪುಲ ಅವಕಾಶಗಳು ಲಭ್ಯವಿದೆ. ಇಂತಹ ಬೇಸಿಗೆ ಶಿಬಿರಗಳ ಸದ್ಬಳಕೆ ಮಾಡಿಕೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಬಿಜಿಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ ಹೇಳಿದರು

ತಾಲೂಕಿನ ಚಿನಕುರಳಿ ಗ್ರಾಮದಲ್ಲಿರುವ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಬೇಸಿಗೆ ಶಿಬಿರಗಳು ಮಕ್ಕಳ ಪಠ್ಯೇತರ ಶಿಕ್ಷಣಗಳಿಗೆ ಸಹಕಾರಿಯಾಗಲಿವೆ ಎಂದರು.

ತರಗತಿಯಲ್ಲಿ ಮಕ್ಕಳಿಗೆ ವಿಷಯವಾರು ಒತ್ತಡಗಳಿರುತ್ತವೆ. ಆದರೆ ತರಗತಿಯಿಂದ ಹೊರಬಂದ ನಂತರ ಮಕ್ಕಳಿಗೆ ಬೇಸಿಗೆ ರಜೆಗಳು ಸಿಕ್ಕ ಬಳಿಕ ಮಕ್ಕಳ ಆಟೋಟಗಳ ಜತೆಗೆ ಪಠ್ಯ ಮತ್ತು ಪಠ್ಯೇತರ ಚಟಿವಟಿಕೆಗಳಿಗೆ ಅನುಕೂಲವಾಗುವಂತೆ ಬೇಸಿಗೆ ಶಿಬಿರಗಳು ಸಹಕಾರಿಯಾಗುತ್ತಿವೆ ಎಂದು ತಿಳಿಸಿದರು.

ಮಕ್ಕಳ ಭವಿಷ್ಯ ರೂಪಿಸಲು ಪೋಷಕರು ನಿರಂತರ ಶ್ರಮವಹಿಸುತ್ತಾರೆ. ಶ್ರೀಮಂತರ ಮಕ್ಕಳಿಗೆ ಸರಿಸಮಾನವಾಗಿ



ಖಾಸಗಿ ಶಾಲೆಗಳಲ್ಲಿ ಮಕ್ಕಳನ್ನು ದಾಖಲಿಸಿ ಎಲ್ಲಾ ಸೌಲಭ್ಯಗಳನ್ನು ಒದಗಿಸುತ್ತಾರೆ. ಮಕ್ಕಳು ಅದನ್ನು ಅರ್ಥೈಸಿಕೊಂಡು ಬದುಕು ನಡೆಸಬೇಕು, ಗುರು-ಹಿರಿಯರಿಗೆ, ತಂದೆ-ತಾಯಂದಿರಿಗೆ ಹೆಚ್ಚಿನ ಗೌರವ ನೀಡಬೇಕು. ಅವರನ್ನು ನೋಯಿಸದೆ ಪ್ರೀತಿ-ವಿಶ್ವಾಸದಿಂದ ಕಾಣಬೇಕು ಎಂದು ಕಿವಿಮಾತು ಹೇಳಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಬೇಕಾಗಿದೆ. ಉತ್ತಮ ಶಿಕ್ಷಣ ಪಡೆದರೆ ಮಾತ್ರ ಜೀವನದಲ್ಲಿ ಸಾಧನೆ ಮಾಡಬಹುದು. ಅದನ್ನು ಅರಿತು ವಿದ್ಯಾರ್ಥಿಗಳು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಹಿರಿಯ ಪತ್ರಕರ್ತ ಎನ್.ಕೃಷ್ಣೇಗೌಡ ಮಾತನಾಡಿ, ಮಕ್ಕಳಲ್ಲಿ ಸಾಕಷ್ಟ ಪ್ರತಿಭೆ ಇರುತ್ತದೆ. ಅವರ ಪ್ರತಿಭೆ ಪ್ರದರ್ಶನಕ್ಕೆ ಬೇಸಿಗೆ ಶಿಬಿರದಂತಹ ಸೂಕ್ತ ವೇದಿಕೆಗಳು ಲಭ್ಯವಾಗಬೇಕು. ಈ ಹಿಂದೆ ಮಕ್ಕಳು ಬೇಸಿಗೆ ರಜೆಯಲ್ಲಿ ಅಜ್ಜಿ, ದೊಡ್ಡಮ್ಮ, ಚಿಕ್ಕಮ್ಮ ಮನೆಗೆ ತೆರಳಿ ಬೇಸಿಗೆಯನ್ನು ಚಿನ್ನಿದಾಂಡು, ಮರಕೋತಿ, ಕುಂಟೆಬಿಲ್ಲೆ, ಗೋಲಿ, ಗೆಜ್ಜಗ, ಬುಗುರಿ ಸೇರಿದಂತೆ ಇತರೆ ಆಟೋಟಗಳಲ್ಲಿ ಉತ್ಸಾಹದೊಂದಿಗೆ ಪಾಲ್ಗೊಳ್ಳುವ ಮೂಲಕ ಕಳೆಯುತ್ತಿದ್ದರು. ಆದರೆ ಇದೀಗ ಬೇಸಿಗೆ ಬಂತೆಂದರೆ ಸಾಕು ಮಕ್ಕಳನ್ನು ಹಿಡಿದಿಟ್ಟುಕೊಳ್ಳುವುದೇ ಪೋಷಕರಿಗೆ ಸಾಹಸದ ಕೆಲಸ. ಹೀಗಾಗಿ ಮಕ್ಕಳು ಇಂತಹ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದರೆ ನೃತ್ಯ, ಕರಾಟೆ, ಕೋಲಾಟ, ಜಾನಪದ ನೃತ್ಯ, ಭರತನಾಟ್ಯ, ಸಂಗೀತ, ನಾಟಕ ಸೇರಿದಂತೆ ಹತ್ತು ಹಲವು ಚಟುವಟಿಕೆಗಳನ್ನು ಕಲಿಯಬಹುದಾಗಿದೆ ಎಂದರು. ಇದೇ ವೇಳೆ ಕಿರುತೆರೆಯ ಹಾಸ್ಯ ಕಲಾವಿದರಾದ ಮನು ಮತ್ತು ಮಿಂಚು ಅವರು ನಡೆಸಿಕೊಟ್ಟ ಹಾಸ್ಯ ಕಾರ್ಯಕ್ರಮ ನೆರೆದಿದ್ದ ಎಲ್ಲಾ ವಿದ್ಯಾರ್ಥಿಗಳು ಹಾಗೂ ಪೋಷಕರನ್ನು ನಗೆಗಡಲಲ್ಲಿ ತೇಲುವಂತೆ ಮಾಡಿತ್ತು. ಬಳಿಕ ಬೇಸಿಗೆ ಶಿಬಿರದ ವಿದ್ಯಾರ್ಥಿಗಳಿಂದ ಭರತನಾಟ್ಯ, ನೃತ್ಯ, ಕೋಲಾಟ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಮೂಡಿಬಂದವು. ಬಿಜಿಎಸ್ ಪ್ರಾಂಶುಪಾಲ ಬಿ.ಕೆ.ಚಿದಂಬರ್, ಮುಖ್ಯಶಿಕ್ಷಕಿ ಮೇರಿ ಸೆಲ್ವ, ಭಾಗ್ಯ, ಪತ್ರಕರ್ತರಾದ ಎನ್. ಕೃಷ್ಣೇಗೌಡ, ಎಸ್.ನಾಗಸುಂದರ ಸೇರಿದಂತೆ ಹಲವರು ಹಾಜರಿದ್ದರು. ಇದೇ ವೇಳೆ ಎಲ್ ಕೆಜಿ ಹಾಗೂ ಯುಕೆಜಿ ಪೂರ್ಣಗೊಳಿಸಿ 1ನೇ ತರಗತಿಗೆ ಮುಂಬಡ್ತಿ ಪಡೆದ ವಿದ್ಯಾಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು.

## ಲೈಂಗಿಕ ದೌರ್ಜನ್ಯ: ಯುವಕನಿಗೆ ಕಠಿಣ ಜೈಲು ಶಿಕ್ಷೆ

**ಚಾಮರಾಜನಗರ:** ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಯುವಕನಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ನಗರದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್, ವಿಶೇಷ ಪೋಕ್ಸೊ ನ್ಯಾಯಾಲಯ ಆದೇಶಿಸಿದೆ. ತಾಲ್ಲೂಕಿನ ವಡ್ಗಲ್ಪುರ ಗ್ರಾಮದ ನಾಗೇಂದ್ರ (22) ಶಿಕ್ಷೆಗೆ ಗುರಿಯಾದವನು. ಯುವಕನು ಬಾಲಕಿಯ ಮನೆಗೆ ನುಗ್ಗಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಮಾಡಿದ್ದ. 2021ರ ಜುಲೈ 20 ರಂದು ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖಾಧಿಕಾರಿ ಬಿ. ಪುಟ್ಟಸ್ವಾಮಿ ನಾಗೇಂದ್ರನ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ್ದರು. ಆರೋಪ ಸಾಬೀತಾಗಿರುವುದರಿಂದ ನ್ಯಾಯಾಧೀಶರಾದ ಎನ್. ಆರ್. ಲೋಕಪ್ಪ ಅವರು ನಾಗೇಂದ್ರನಿಗೆ 20 ವರ್ಷಗಳ ಕಠಿಣ ಜೈಲು ಶಿಕ್ಷೆ, 35 ಸಾವಿರ ರೂ. ದಂಡ ವಿಧಿಸಿ ಗುರುವಾರ ಆದೇಶ ಹೊರಡಿಸಿದ್ದಾರೆ. ಸಂತ್ರಸ್ತ ಬಾಲಕಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರವು ತಿಂಗಳ ಒಳಗಾಗಿ ?3 ಲಕ್ಷ ಪರಿಹಾರ ನೀಡಬೇಕು ಎಂದೂ ಅವರು ಆದೇಶದಲ್ಲಿ ಹೇಳಿದ್ದಾರೆ. ಪ್ರಾಸಿಕ್ಯೂಷನ್ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ. ಯೋಗೇಶ್ ವಾದಿಸಿದ್ದರು.

## ಪರಿಹಾರ ವಿತರಣೆ

ಕೋಲಾರ: ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಟೇಕಲ್ ಗ್ರಾಮದಲ್ಲಿ ದೌರ್ಜನ್ಯ ಪ್ರಕರಣದಡಿ ಮೃತಪಟ್ಟ ಪರಿಶಿಷ್ಟ ಜಾತಿಯ ಲೋಕೇಶ್ ಬಿನ್ ವೆಂಕಟೇಶಪ್ಪ ಅವರ ಕುಟುಂಬದ ಅವಲಂಬಿತರಾದ ತಾಯಿ ಶ್ರೀಮತಿ ನಾಗಮ್ಮ ಕೋಂ ವೆಂಕಟೇಶಪ್ಪ ರವರಿಗೆ ಇಂದು ಮಾನ್ಯ ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಮೊದಲನೇ ಕಂತಿನ 4.12 ಲಕ್ಷಗಳ ಚೆಕ್ ಅನ್ನು ಪರಿಹಾರವಾಗಿ ನೀಡಲಾಯಿತು. ಸದರಿ ಮೃತಪಟ್ಟ ಲೋಕೇಶನ ಸ್ನೇಹಿತ ದರ್ಶನ್ ಅವರಿಗೂ ಹಲ್ಲೆಯನ್ನು ಮಾಡಿ ದೌರ್ಜನ್ಯ ವೆಸಗಿದ್ದು ಸದರಿಯವರಿಗೆ 50 ಸಾವಿರಗಳ ಚೆಕ್ ಅನ್ನು ಪರಿಹಾರವಾಗಿ ವಿತರಿಸಲಾಯಿತು. ಸದರಿ ಮೃತಪಟ್ಟ ಲೋಕೇಶ್ ಕುಟುಂಬದಲ್ಲಿ ನೌಕರಿಯನ್ನು ಪಡೆಯಲು ಅರ್ಹರಿದ್ದರೆ ಅವರಿಗೆ ನೌಕರಿಯನ್ನು ನೀಡಲು ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಅಥವಾ ಮಾಸಿಕ ಪಿಂಚಣಿಯ ಸೌಲಭ್ಯವನ್ನು ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು . ಈ ಸಂದರ್ಭದಲ್ಲಿ ಮಾನ್ಯ ಅಪರ ಜಿಲ್ಲಾಧಿಕಾರಿಗಳು,ಸ.ಕ.ಇ ಜಂಟಿ ನಿರ್ದೇಶಕರಾದ ಶ್ರೀ ನಿವಾಸನ್. ಎಂ ಹಾಗೂ ಸಿಬ್ಬಂದಿಗಳಾದ ಪ್ರಕಾಶ್ ಹಾಜರಿದ್ದರು.

## ಮಾರಾಕಾಸ್ತ್ರಗಳಿಂದ ದಾಳಿ: ಇಬ್ಬರು ಗಂಭೀರ

**ಮಧುಗಿರಿ:** ಐದು ಜನ ಯುವಕರ ನಡುವೆ ಮಾರಾಕಾಸ್ತ್ರಗಳಿಂದ ದಾಳಿ ನಡೆದು ಇಬ್ಬರು ಗಂಭೀರವಾಗಿ ಘಾಯಗೊಂಡಿರುವ ಘಟನೆ ಶನಿವಾರ ಸಂಜೆ ನಡೆದಿದೆ. ಕಸಬಾ ಹೋಬಳಿಯ ಸ್ವಾಗೇನಹಳ್ಳಿಯ ತೋಪೊಂದರಲ್ಲಿ ಯುವಕರ ನಡುವೆ ಹಳೆಯ ವೈಷಮ್ಯ ಕ್ಕೆ ಮಾರಾ ಮಾರಿಯಾಗಿ ಗಲಾಟೆ ನಡೆದು ಕಿರಣ್ ಕುಮಾರ್ (24) , ಮಧುಸೂಧನ್ (23) ಎನ್ನುವ ಇಬ್ಬರಿಗೆ ರಾಡಿನಿಂದ ತಲೆ ಹಾಗೂ ಕಾಲು ಭಾಗಗಳಿಗೆ ಗಂಭೀರ ವಾಗಿ ಘಾಯಗೊಳಿಸಲಾಗಿದೆ. ನಿರಂಜನ್ ( 24) ಶ್ರೀನಿವಾಸ್ (26) ಮತ್ತೊಬ್ಬನ ಹೆಸರು ತಿಳಿದು ಬಂದಿಲ್ಲ ಈ ಮೂವರಿಗೆ ಸಣ್ಣಪುಟ್ಟ ಘಾಯಗಳಾಗಿದ್ದು. ಗಂಭೀರವಾಗಿ ಘಾಯಗೊಂಡವರನ್ನು ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಮಧುಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸ್ವ ಗ್ರಾಮ ತಲುಪಿದ ಅಲೆಮಾರಿ ಜನಾಂಗದ ನಂದಿನಿ ಪಾರ್ಥಿವ ಶರೀರ

ಹುಣಸೂರು: ಈಶಾನ್ಯ ಆಫ್ರಿಕಾದ ಸೂಡಾನ್ ದೇಶಕ್ಕೆ ವ್ಯಾಪಾರಕ್ಕಾಗಿ ತೆರಳಿ ಅನಾರೋಗ್ಯಕ್ಕೆ ತುತ್ತಾಗಿ ಸಾವನ್ನಪ್ಪಿದ ಅಲೆಮಾರಿ ಜನಾಂಗದ (ಹಕ್ಕಿಪಿಕ್ಕಿ) ನಂದಿನಿ ಯವರ ಪಾರ್ಥಿವ ಶರೀರ ಸ್ವ ಗ್ರಾಮ ಪಕ್ಷಿರಾಜಪುರಕ್ಕೆ ಭಾನುವಾರ ಸಂಜೆ ತಲುಪಿತು.



ಹುಣಸೂರು ತಾಲೂಕಿನ ಹನಗೋಡು ಹೋಬಳಿಯ ಪಕ್ಷಿರಾಜಪುರ 2ನೇ ಕಾಲೋನಿಯ ಅಲೆಮಾರಿ ಜನಾಂಗದ (ಹಕ್ಕಿಪಿಕ್ಕಿ) ನಂದಿನಿ ಕಳೆದೆರಡು ವರ್ಷಗಳ ಹಿಂದೆ ಉದ್ಯೋಗ ಆರಸಿ ತಮ್ಮ ಪತಿಯೊಂದಿಗೆ ಸೂಡಾನ್ ದೇಶ ಕ್ಕೆ ತೆರಳಿದ್ದು ಏ 14ರಂದು ಅನಾರೋಗ್ಯದಿಂದ ಸೂಡಾನ್ ದೇಶದ ಆಸ್ಪತ್ರೆಯೊಂದರಲ್ಲಿ ಮೃತರಾದರು. ಮೃತರ ಪಾರ್ಥಿವ ಶರೀರವನ್ನು ತಮ್ಮ ತಾಯ್ನಾಡಿಗೆ ತರಲು ಪಕ್ಷಿರಾಜ ಪುರದ ನಿವಾಸಿಗಳು ಏ.14ರಂದು ಹುಣಸೂರಿನ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ರವರನ್ನು ಭೇಟಿ ಮೃತದೇಹವನ್ನು ಸ್ವಗ್ರಾಮಕ್ಕೆ ತರಲು ಮನವಿ ಮಾಡಿದಕೊಂಡ ಮೇರೆಗೆ ಎಚ್ ಪಿ ಮಂಜುನಾಥ್ ರವರು ಅಂದೇ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಹಾಗೂ ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯಕಾರ್ಯದರ್ಶಿಗಳಾದ ರಜನೀಶ್ ಗೋಯಲ್ ರವರಿಗೆ ಮಾಹಿತಿ ನೀಡಿದ್ದರು. ತಕ್ಷಣವೇಮುಖ್ಯಕಾರ್ಯದರ್ಶಿ ರಜನೀಶ್ ಗೋಯಲ್ ರವರು ಸೂಡಾನ್ ನಲ್ಲಿರುವ ಭಾರತದ ರಾಯಬಾರಿ ಕಚೇರಿ ಅಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿ ಮೃತೆ ನಂದಿನಿಯವರ ಶವ ತರಲು ಎಲ್ಲಾ ರೀತಿಯ ವ್ಯವಸ್ಥೆ ಮಾಡಿದ್ದರು. ನಂದಿನಿಯವರ ಮೃತದೇಹವು ಸೂಡಾನ್ ದೇಶದಿಂದ ವಿಮಾನದಲ್ಲಿ ಮುಂಬೈಗೆ ಶನಿವಾರ ತಲುಪಿದ್ದು ಇಂದು ಮಧ್ಯಾಹ್ನ ಪಕ್ಷಿರಾಜಪುರಕ್ಕೆ ತಲುಪಿದೆ.

**ಕೃತಜ್ಞತೆ ಸಲ್ಲಿಕೆ**

**ಸೂಡಾನ್ ದೇಶದಿಂದ ಮೃತ ದೇಹ ತರಲು ಎಲ್ಲಾ ರೀತಿಯ ಸಹಾಯ ಹಾಗೂ ಸಹಕಾರ ನೀಡಿದ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ರವರಿಗೆ ಹಾಗೂ ಕರ್ನಾಟಕ ಸರ್ಕಾರಕ್ಕೆ ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಕೃತಜ್ಞತೆ ಸಲ್ಲಿಸಿದ್ದಾರೆ.**

## ಇಂಡಿಗನತ್ತ ಪ್ರಕರಣ, ರಕ್ಷಣೆ ನೀಡಲು ಗಿರಿಜನರ ಆಗ್ರಹ



**ಮಹದೇಶ್ವರ ಬೆಟ್ಟ:** ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮೆಂದಾರೆ ಗ್ರಾಮದ ಬುಡಕಟ್ಟು ಜನರ ಮೇಲೆ ಶುಕ್ರವಾರ ನಡೆದ ದೌರ್ಜನ್ಯ ಖಂಡಿಸಿ ಜಿಲ್ಲಾ ಗಿರಿಜನ ಬುಡಕಟ್ಟು ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಆದಿವಾಸಿ ಸಮುದಾಯದವರು ಬೆಟ್ಟದಲ್ಲಿ ಪ್ರತಿಭಟನೆ ನಡೆಸಿದರು. ಪಟ್ಟ ಭದ್ರ ಹಿತಾಶಕ್ತಿಗಳು ದೌರ್ಜನ್ಯ ಎಸಗಿದ್ದು, ಸಮುದಾಯದ ಹಕ್ಕುಗಳನ್ನು ಕಸಿದುಕೊಂಡಿದ್ದಾರೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಬೆಟ್ಟದ ಬಸ್ ನಿಲ್ದಾಣದಲ್ಲಿ ಸೇರಿದ ಪ್ರತಿಭಟನಕಾರರು, ಅಲ್ಲಿಂದ ಪೊಲೀಸ್ ಠಾಣೆಯವರೆಗೆ ಮೆರವಣಿಗೆ ಸಾಗಿ ಕೆಲ ಕಾಲ ಧರಣಿ ನಡೆಸಿ ಮನವಿ ಸಲ್ಲಿಸಿದರು. ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಅಧ್ಯಕ್ಷ ದೊಡ್ಡಸಿದ್ದ ಮಾತನಾಡಿ, ಮೆಂದಾರೆ ಗ್ರಾಮದವರು ಶುಕ್ರವಾರ ಮತದಾನ ಮಾಡಲು ಇಂಡಿಗನತ್ತ ಬೂತ್‌ಗೆ ತೆರಳಿದ್ದು, ಈ ಸಂದರ್ಭದಲ್ಲಿ ಮತ ಹಾಕಬಾರದು ಎಂದು ಬುಡಕಟ್ಟು ಜನಾಂಗಯೇತರರು ಕಲ್ಲುಗಳಿಂದ ಹೊಡೆದು ಗಾಯಗೊಳಿಸಿದ್ದಾರೆ. ಇದರಿಂದ ಸಮುದಾಯದ ಹಲವರು ಗಾಯಗೊಂಡಿದ್ದಾರೆ. ಕೆಲವರಿಗೆ ತೀವ್ರವಾಗಿ ಏಟು ಬಿದ್ದಿದ್ದು, ಅಂಗವಿಕಲರಾಗುವವ ಸಾಧ್ಯತೆಯೂ ಇದೆ ಎಂದು ದೂರಿದರು.

ಹಲ್ಲೆ ನಡೆಸಿದವರು ಜಾತಿ ನಿಂದನೆ ಮಾಡಿರುವುದಲ್ಲೆ ಅವಾಚ್ಯ ಶಬ್ದಗಳನ್ನು ಆಡಿದ್ದು ದೌರ್ಜನ್ಯ ಎಸಗಿದ್ದಾರೆ. ಇದರಿಂದಾಗಿ ಬುಡಕಟ್ಟು ಜನರು ಭಯಭೀತರಾಗಿದ್ದು ಅವರಿಗೆ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಕಾರ್ಯದರ್ಶಿ ಸಿ.ಮಾದೇಗೌಡ, ಮುಖಂಡರಾದ ಮುತ್ತಯ್ಯ, ಮಹದೇವಸ್ವಾಮಿ, ಯು.ರಂಗೇಗೌಡ, ಗಿರಿಯ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಸಿಲಿಂಡರ್ ಸ್ಫೋಟ: ಹಣ, ಆಸ್ತಿಪತ್ರ ಭಸ್ಮ

ಯಳಂದೂರು: ತಾಲ್ಲೂಕಿನ ಮದ್ದೂರು ಗ್ರಾಮದಲ್ಲಿ ಭಾನುವಾರ ಅಡುಗೆ ಅನಿಲದ ಸಿಲಿಂಡರ್ ಸ್ಫೋಟಗೊಂಡು ಮನೆ ಸಂಪೂರ್ಣ ಸುಟ್ಟುಭಸ್ಮವಾಗಿದೆ. ಮಧ್ಯಾಹ್ನ ಬಿಸಿಲ ತಾಪ ಹೆಚ್ಚಾದ ಕಾರಣ ನಿವಾಸಿ ಸಾಕಮ್ಮ ಮನೆ ಮಂದಿ ಹೊರಗೆ ಕುಳಿತಿದ್ದರು. ಈ ವೇಳೆ ಮನೆ ಒಳ ಭಾಗದಿಂದ ಶಬ್ದ ಕೇಳಿ ಬಂದ ತಕ್ಷಣ ಬೆಂಕಿ ಆವರಿಸಿತು. ಅಕ್ಕಪಕ್ಕದ ನಿವಾಸಿಗಳು ತಕ್ಷಣ ನೀರು, ಮಣ್ಣು ಸುರಿದು ಬೆಂಕಿ ಇತರೆಡೆ ವ್ಯಾಪಿಸದಂತೆ ತಡೆದರು. ತಕ್ಷಣ ಅಗ್ನಿ ಶಾಮಕ ದಳದ ಸಿಬ್ಬಂದಿ ಮುಂದಾಗುವ ಅನಾಹುತ ತಪ್ಪಿಸಿದರು. ದೇವರ ಪಟದ ಮುಂದೆ ಉರಿಯುತ್ತಿದ್ದ ದೀಪಕ್ಕೆ ತಗುಲಿ ಬೆಂಕಿ ಆವರಿಸಿರುವ ಸಾಧ್ಯತೆ ಇದೆ.

### ಹಾಲು ಉತ್ಪಾದನೆಯಲ್ಲಿ ಕುಂಠಿತ : ಕಲ್ಪತರು ನಾಡಿನ ರೈತರ ಆಕ್ರೋಶ

# ಕಳಪೆ ಪಶು ಆಹಾರ ವಿತರಣೆ

ತಿಪಟೂರು: ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಕರ್ನಾಟಕ ರಾಜ್ಯ ಹಾಲು ಮಹಾಮಂಡಳಿಯಿಂದ ವಿತರಿಸುವ ಪಶು ಆಹಾರವು ಕಳಪೆ ಗುಣಮಟ್ಟದಿಂದ ಕೂಡಿದ್ದು ಯಾವುದೇ ಪೋ?ಕಾಂಶಗಳು ಇಲ್ಲದೆ ಇರುವುದರಿಂದ ಹಾಲು ಉತ್ಪಾದನೆಯಲ್ಲಿ ಕುಂಟಿತಗೊಂಡಿದೆ ಎಂದು ರೈತರು ಆರೋಪಿಸಿದ್ದಾರೆ.

ಕೆಎಂಎಫ್ ವತಿಯಿಂದ ಸಹಕಾರ ಸಂಘಗಳ ಮೂಲಕ ರೈತರಿಗೆ ಹಾಗೂ ಹಾಲು ಉತ್ಪಾದಕರಿಗೆ ವಿತರಣೆಯಾಗುವ ಪಶುಆಹಾರವು ಉತ್ತಮ ಗುಣಮಟ್ಟದಿಂದ ಕೂಡಿರುತ್ತದೆ ಎಂದು ತಿಳಿದು, ಸಂಘಗಳ ಮೂಲಕ ರೈತರು ಖರೀದಿಸಿ ಹಾಲು ಉತ್ಪಾದನೆಯಲ್ಲಿ ಹೆಚ್ಚಳವನ್ನು ಕಾಣಲು ಬಯಸಿರುತ್ತಾರೆ. ಆದರೆ ಜಾನುವಾರುಗಳಿಗೆ ಪಶು ಆಹಾರವನ್ನು ಮಿಶ್ರಣ ಮಾಡಿ ತಿನ್ನಲು ನೀಡಿದಾಗ ಪಶು ಆಹಾರವನ್ನು ಜಾನುವಾರುಗಳು ಸೇವನೆ ಮಾಡದೆ, ಬಿಡುತ್ತಿದ್ದು ಸುಮಾರು ಒಂದು ತಿಂಗಳ ಕಾಲದಿಂದ ಹಾಲು ಉತ್ಪಾದನೆಯಲ್ಲಿ ಗಣನೀಯವಾಗಿ ಕಡಿಮೆಯಾಗುತ್ತಾ ಬಂದಿದೆ. ರೈತರು ಬರಗಾಲದಲ್ಲಿ ಮಳೆಯಿಲ್ಲದೆ ಮೇವಿನ ಅಭಾವದಲ್ಲಿ ಮತ್ತೊಂದು ಸಂಕಷ್ಟ ಎದುರಾದಂತಾಗಿದೆ. ಪ್ರಸ್ತುತ ಒಂದು ಲೀಟರ್ ಹಾಲಿನ ಬೆಲೆ ರೂ.32.78 ರೂಪಾಯಿಯಿದ್ದು, 50 ಕೆಜಿಯ ನಂದಿನಿ ಪಶು ಆಹಾರವು 1,226=00 ರೂಪಾಯಿಗಳಾಗಿದ್ದು ಪ್ರತಿ ಕೆಜಿಗೆ ರೂ.24.52 ಗಳಾಗಿದೆ.

ಪಶು ಆಹಾರವು ಮೆಕ್ಕೆಜೋಳ, ಭತ್ತದ ತೌಡು, ಧಾನ್ಯಗಳು, ಇಂಡಿ, ಕಾಕಂಬಿ, ಖನಿಜ ಮಿಶ್ರಣಗಳನ್ನು ಮಾಡಿ ಮಾಡಲಾಗುತ್ತಿದ್ದು ಕಳೆದ ಒಂದು ತಿಂಗಳಿಂದ ಗುಣಮಟ್ಟದಲ್ಲಿ ವ್ಯತ್ಯಯವಾಗಿರುವುದು ಕಂಡು ಬಂದಿದೆ. ಹಸುಗಳು ಇಷ್ಟಪಟ್ಟು ತಿನ್ನುತ್ತಿದ್ದ ಪಶು ಆಹಾರವನ್ನು ತಿರಸ್ಕರಿಸುತ್ತಿರುವುದು ರೈತರಿಗೆ ತಲೆನೋವು ತರಿಸಿದೆ.

ಕಡಿಮೆ ಗುಣಮಟ್ಟದ ಹಾಲನ್ನು ನೀಡಿದರೆ ತತ್ ಕ್ಷಣವೇ ಹಾಲಿನ ದರದಲ್ಲಿ ಕಡಿತ ಮಾಡಿ ರೈತರಿಗೆ ಹಾಗೂ ಉತ್ಪಾದಕ ಸಂಘಗಳಿಗೆ ನಷ್ಟ ಮಾಡುವ ಅಧಿಕಾರಿಗಳು ಅದೇ ಮಾದರಿಯಲ್ಲಿ ಪಶು ಆಹಾರದಲ್ಲಿ ಕಳಪೆ ಗುಣಮಟ್ಟದಿಂದ ಕೂಡಿರುವುದನ್ನು ರೈತರು ಆರೋಪಿಸಿದಾಗ ತಕ್ಷಣವೇ ಸರಿಪಡಿಸುವ ಕಾರ್ಯವನ್ನು ಮಾಡಬೇಕಿದೆ. ಆದರೆ ಇದರ ಬಗ್ಗೆ ಯಾವುದೇ ಅಧಿಕಾರಿಗಳು ಕ್ರಮ ಕೈಗೊಳ್ಳಲು ಮುಂದಾಗದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಕಳೆದ 6-7 ತಿಂಗಳುಗಳಿಂದ ರೈತರಿಂದ ಆಯ್ಕೆಯಾಗಿರುವ ಆಡಳಿತ ಮಂಡಳಿ ಇಲ್ಲದೆ ಇದ್ದು, ಅಧಿಕಾರಿಗಳು ಆಡಳಿತವನ್ನು ಮಾಡುತ್ತಿದ್ದಾರೆ. ಒಕ್ಕೂಟದಿಂದ ಆಗೊಮ್ಮೆ ಈಗೊಮ್ಮೆ ಹಾಲಿನ ಗುಣಮಟ್ಟದಲ್ಲಿ ವ್ಯತ್ಯಾಸ ಮಾಡುತ್ತಾ ದಿನದಿಂದ ದಿನಕ್ಕೆ ಹಾಲಿನ ದರವು ಕಡಿಮೆಗೊಳಿಸುತ್ತಾ, ಪಶು ಆಹಾರದ ದರವನ್ನು ದಿನದಿಂದ ದಿನಕ್ಕೆ ಹೆಚ್ಚಳ ಮಾಡಿ ರೈತರಿಗೆ ಒಂದಲ್ಲ ಒಂದು ತೊಂದರೆಗಳನ್ನು ಕೆಎಂಎಫ್ ಅಧಿಕಾಗಳು ನೀಡುತ್ತಾ ಬರುತ್ತಿದ್ದಾರೆ ಎಂದು ತಾಲ್ಲೂಕಿನ ರೈತರು ಆರೋಪಿಸಿದ್ದಾರೆ.

ಈಗಲಾದರೂ ಎಚ್ಚೆತ್ತು ಅಧಿಕಾರಿಗಳು ಪಶು ಆಹಾರದ ಗುಣಮಟ್ಟವನ್ನು ಪರೀಕ್ಷೆಗೆ ಒಳಪಡಿಸಿ ಗುಣಮಟ್ಟದ ಪಶು ಆಹಾರವನ್ನು ನಿಡುವಂತಾಗಬೇಕಿದೆ.




**ಕಳಪೆ ಗುಣಮಟ್ಟದ ಪಶು ಆಹಾರವನ್ನು ಜಾನುವಾರುಗಳು ಸೇವನೆಯಿಂದ ಜಾನುವಾರಗಳ ಆರೋಗ್ಯದಲ್ಲಿ ವ್ಯತ್ಯಾಸವು ಕಂಡುಬರುತ್ತಿದ್ದು, ಹೈನುಗಾರಿಕೆಯನ್ನು ನಂಬಿ ಜೀವನವನ್ನು ನೆಡೆಸುತ್ತಿರುವ ರೈತರಲ್ಲಿ ಜಾನುವಾರಗಳು ಪಶು ಆಹಾರದಿಂದ ಮರಣ ಸಂಭಂವಿಸಿದರೆ ಇದಕ್ಕೆ ನೇರ ಹೊಣೆಯನ್ನು ಒಕ್ಕೂಟ ಹಾಗೂ ಕೆಎಂಎಫ್ ಬರಿಸಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರವು ಗಮನ ಹರಿಸಬೇಕು.**

**। ಹರೀಶ್**
ಗ್ರಾ, ಪಂ ಸದಸ್ಯರು

**ಹಿಂದೆ ಒಮ್ಮೆ ಒಂದು ಬಾರಿ ಪಶು ಆಹಾರ ಕಳಪೆ ಗುಣಮಟ್ಟದ ಬಗ್ಗೆ ಮಾಹಿತಿ ಬಂದಿದ್ದು ಅದನ್ನು ಸರಿಪಡಿಸಲಾಗಿದೆ. ಆದರೆ ಪ್ರಸ್ತುತ ದಿನಗಳಲ್ಲಿ ಯಾವುದೇ ಕಳಪೆ ಗುಣಮಟ್ಟದ ಮಾಹಿತಿ ಬಂದಿರುವುದಿಲ್ಲ. ಮೆಕ್ಕೆಜೋಳದ ಅಭಾವ ಇರುವುದರಿಂದ ಕಡಿಮೆ ಬಳಸುತ್ತಿದ್ದು ಬದಲಿಗೆ ಹತ್ತಿ ಬೀಜವನ್ನು ಬಳಸುತ್ತಿದ್ದು ಅದರಿಂದ ಕಹಿ ಬರುವ ಅಂಶವಿದೆ ಎಂದು ತಿಳಿದಿದೆ.**

**। ವ್ಯವಸ್ಥಾಪಕ ನಿರ್ದೇಶಕರು**
ತುಮಕೂರು ಹಾಲು ಒಕ್ಕೂಟ. ಮಲ್ಲಸಂದ್ರ

**10 ಲೀಟರ್ ಹಾಲು ಕೊಡುತ್ತಿದ್ದ ಹಸುವು ಕೆಎಂಎಫ್‌ನ ಪಶು ಆಹಾರವನ್ನು ಸೇವನೆ ಮಾಡಿದಾಗಿನಿಂದ 5-6 ಲೀಟರ್ ಹಾಲು ಕುಂಠಿತಗೊಂಡಿದೆ. ಕೂಡಲೇ ಅಧಿಕಾರಿಗಳ ಗಮನಕ್ಕೆ ವಿಷಯವನ್ನು ತರಲಾಗಿದ್ದು ಆದರೆ ಯಾವುದೇ ಕ್ರಮ ಕೈಗೊಂಡಿಲ್ಲ. ಪಶು ಆಹಾರದ ಗುಣಮಟ್ಟವನ್ನು ಪರೀಕ್ಷೆ ಮಾಡುವ ಅಗತ್ಯವಿದ್ದು ಕೂಡಲೇ ಅಧಿಕಾರಿಗಳು ಪರೀಕ್ಷೆ ಮಾಡಬೇಕು.**

**।ಶಿವಾನಂದ ಸ್ವಾಮಿ**
ಅಧ್ಯಕ್ಷರು ಮತ್ತಿಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ

### ಕರೆ ಸ್ವೀಕರಿಸಲ್ಲ

**ಗುಬ್ಬಿ ಪಶು ಆಹಾರದ ಘಟಕದ ಅಧಿಕಾರಿಗಳಿಗೆ ರೈತರು ಪೋನ್ ಕರೆ ಮಾಡಿದಾಗ ಪೋನ್ ಕರೆಯನ್ನು ಸ್ವೀಕರಿಸದೆ ಇದ್ದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ.**
**ಒಂದು ಲೀಟರ್ ಹಾಲಿನ ಬೆಲೆ ರೂ.32.78 ರೂಪಾಯಿ.**
**50 ಕೆಜಿಯ ನಂದಿನಿ ಪಶು ಆಹಾರವು 1,226=00**

## ಮತದಾನ ಕೇಂದ್ರದ ಸುತ್ತ ನಿಷೇಧಾಜ್ಞೆ

ಚಾಮರಾಜನಗರ: ಚಾಮರಾಜನಗರ (ಪ.ಜಾ) ಲೋಕಸಭಾ ಕ್ಷೇತ್ರವ್ಯಾಪ್ತಿಯ 221-ಹನೂರು ವಿಧಾನಸಭಾ ಕ್ಷೇತ್ರದ ಇಂಡಿಗನತ್ತ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮತಗಟ್ಟೆ ಸಂಖ್ಯೆ 146ರಲ್ಲಿ ಏಪ್ರಿಲ್ 29ರಂದು ಬೆಳಿಗ್ಗೆ 7 ರಿಂದ ಸಂಜೆ 6 ಗಂಟೆಯವರೆಗೆ ಮರು ಮತದಾನ ನಡೆಯಲಿದ್ದು, ಮತದಾನ ಕೇಂದ್ರದಲ್ಲಿ ಕಾನೂನು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಏಪ್ರಿಲ್ 28ರ ಮಧ್ಯರಾತ್ರಿ 12 ಗಂಟೆಯಿಂದ ಏಪ್ರಿಲ್ 29ರ ಮಧ್ಯರಾತ್ರಿ 12 ಗಂಟೆಯವರೆಗೆ ಭಾರತ ದಂಡ ಪ್ರಕ್ರಿಯೆ ಸಂಹಿತೆಯ ಕಲಂ 144 ರನ್ವಯ ಮತಗಟ್ಟೆಯ ಸುತ್ತಲು 100 ಮೀ. ಅಂತರದೊಳಗೆ ಕೆಲ ಷರತ್ತುಗಳನ್ನು ವಿಧಿಸಿ ನಿಷೇಧಾಜ್ಞೆಯನ್ನು ಜಾರಿ ಮಾಡಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಶಿಲ್ಪಾ ನಾಗ್ ಅವರು ಆದೇಶ ಹೊರಡಿಸಿದ್ದಾರೆ. ಮೆರವಣಿಗೆ ಅಥವಾ 5 ಜನರಿಗಿಂತ ಹೆಚ್ಚು ಜನ ಸೇರುವುದನ್ನು ನಿಷೇಧಿಸಿದೆ. ಯಾವುದೇ ರೀತಿಯ ಮಾರಕಾಸ್ತ್ರ, ಶಸ್ತ್ರಾಸ್ತ್ರ, ಸ್ಫೋಟಕ ವಸ್ತುಗಳನ್ನು ಒಯ್ಯುವಂತಿಲ್ಲ. ಪ್ರತಿಕೃತಿ ಪ್ರದರ್ಶನ, ದಹನ ಮಾಡುವುದು ಮತ್ತು ಬಹಿರಂಗ ಘೋಷಣೆ ಇತ್ಯಾದಿಗಳನ್ನು ನಿರ್ಬಂಧಿಸಿದೆ. ಸಾರ್ವಜನಿಕವಾಗಿ ಯಾವುದೇ ವ್ಯಕ್ತಿ ಪ್ರಚೋದನಾತ್ಮಕ ಹಾಗೂ ಉದ್ರೇಕಕಾರಿ ಹಾಡುಗಳು, ಕೂಗಾಡುವುದು, ವ್ಯಕ್ತಿಗಳ ತೇಜೋವಧೆ ಮಾಡುವಂತಹ ಚಿತ್ರಗಳು, ಚಿಹ್ನೆಗಳು, ಪ್ರತಿಕೃತಿ ಮುಂತಾದವುಗಳನ್ನು ಪ್ರದರ್ಶಿಸುವುದಾಗಲಿ, ಸಾರ್ವಜನಿಕರ ಗಾಂಭೀರ್ಯ, ನೈತಿಕತೆಗೆ ಭಂಗ ತರುವಂತಹ ಕೃತ್ಯಗಳಲ್ಲಿ ತೊಡಗುವುದನ್ನು ನಿಷೇಧಿಸಲಾಗಿದೆ. ಆದೇಶವು ಚುನಾವಣಾ ಕರ್ತವ್ಯ ನಿರತ ಮತಗಟ್ಟೆ ಅಧಿಕಾರಿ, ಸಿಬ್ಬಂದಿ, ಪೊಲೀಸ್ ಅಧಿಕಾರಿ, ನೇಮಕಗೊಂಡಿರುವ ಚುನಾವಣಾ ಏಜೆಂಟರು ಮತ್ತು ಒಬ್ಬೊಬ್ಬರಾಗಿ ಮತಗಟ್ಟೆಗೆ ತೆರಳಿ ಮತದಾನ ಮಾಡುವ ಮತದಾರರಿಗೆ ಅನ್ವಯಿಸುವುದಿಲ್ಲ. ಅಂತ್ಯಕ್ರಿಯೆ ಮೆರವಣಿಗೆ ಹಾಗೂ ಇನ್ನಿತರ ಪ್ರಾಧಿಕಾರದಿಂದ ಅನುಮತಿ ಪಡೆದ ಪ್ರಕರಣಗಳಿಗೆ ಆದೇಶವು ಅನ್ವಯಿಸುವುದಿಲ್ಲ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಶಿಲ್ಪಾ ನಾಗ್ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

## ದ್ವಿತೀಯ ವರ್ಷದ ಡಿಪ್ಲೋಮಾ ಕೋರ್ಸ್ ನೇರ ಪ್ರವೇಶಕ್ಕೆ ಅರ್ಜಿ

**ಬೆಂಗಳೂರು:** ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ 2024-25 ನೇ ಸಾಲಿನ ಶೈಕ್ಷಣಿಕ ಅವಧಿಗೆ ಲ್ಯಾಟರಲ್ ಎಂಟ್ರಿ ಮುಖಾಂತರ 2ನೇ ವರ್ಷದ ಡಿಪ್ಲೋಮಾ (ಡಿ.ಹೆಚ್.ಟಿ.ಟಿ) ಕೋರ್ಸ್ ನೇರ ಪ್ರವೇಶಕ್ಕಾಗಿ 32 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿಯ ಪ್ರಕಾರ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ರೂ.2,500/-ರಂತೆ ಶಿಷ್ಯವೇತನ ನೀಡಲಾಗುವುದು ಹಾಗೂ ಆಯ್ಕೆಯಾದ ಅಭ್ಯರ್ಥಿಗಳಿಗೆ ಆಯಾ ಐ.ಐ.ಹೆಚ್.ಟಿ. ನಿಯಮಾನುಸಾರ ವಸತಿ ನಿಲಯದ ಸೌಲಭ್ಯವನ್ನು ಕಲ್ಪಿಸಲಾಗುವುದು.

ಅಭ್ಯರ್ಥಿಗಳು ಗಣಿತ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರದೊಂದಿಗೆ 10+2 ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ ಯಾವುದೇ ಜವಳಿ ವಿಭಾಗದ ವೃತ್ತಿಪರ ವಿಭಾಗದಲ್ಲಿ 10+2 ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಅಥವಾ 10ನೇ ತರಗತಿ ತೇರ್ಗಡೆ ಜೊತೆಗೆ (2 ವರ್ಷಗಳ ಐಟಿಐ) ತೇರ್ಗಡೆ ಹೊಂದಿರಬೇಕು. ಅಥವಾ 10+2 ಪಾಸ್ ಜೊತೆಗೆ (2 ವರ್ಷಗಳ ಐಟಿಐ) ತೇರ್ಗಡೆ ಎರಡನೇ ವರ್ಷದ ಡಿಪ್ಲೋಮಾ ಕೋರ್ಸ್ಗೆ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ. ಅರ್ಜಿ ಸಲ್ಲಿಸಲು ಮೇ 31 ಕೊನೆಯ ದಿನಾಂಕವಾಗಿದೆ.

ಜವಳಿ ವಿಭಾಗದ ವೃತ್ತಿಪರ ಸ್ಟ್ರೀಮ್ನಲ್ಲಿ 10+2 ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಐ.ಐ.ಹೆಚ್.ಟಿ ನಡೆಸುವ ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರದಲ್ಲಿ ಬ್ರಿಡ್ಜ್ ಕೋರ್ಸ್ನ್ನ ಅಭ್ಯಾಸ ಮಾಡಬೇಕು. ವಯೋಮಿತಿ ದಿನಾಂಕ: 01-07-2024 ಕ್ಕೆ ಅನ್ವಯಿಸುವಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿ 25 ವರ್ಷ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ವಯೋಮಿತಿ 27 ವರ್ಷ. ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಕ್ರೂಡೀಕೃತ ಅಂಕಗಳ ಮೆರಿಟ್ನ್ನು ಪರಿಗಣಿಸಲಾಗುವುದು.

ಲ್ಯಾಟರಲ್ ಎಂಟ್ರಿ ಮುಖಾಂತರ 2 ನೇ ವರ್ಷದ ಡಿಪ್ಲೋಮಾ ಕೋರ್ಸಗೆ ನೇರ ಪ್ರವೇಶಕ್ಕಾಗಿ ಲಭ್ಯವಿರುವ ಸಂಸ್ಥೆಗಳು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ-ಬೆಟಗೇರಿ (ಕರ್ನಾಟಕ) - 13 ಅಭ್ಯರ್ಥಿಗಳು, ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ (ತಮಿಳುನಾಡು) ? 14 ಅಭ್ಯರ್ಥಿಗಳು, ಎಸ್.ಪಿ.ಕೆ. ಎಂ. ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ವೆಂಕಟಗಿರಿ (ನೆಲ್ಲೂರು ಜಿಲ್ಲೆ, ಆಂಧ್ರಪ್ರದೇಶ) ? 03 ಅಭ್ಯರ್ಥಿಗಳು, ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಕಣ್ಣೂರು (ಕೇರಳ) ? 02 ಅಭ್ಯರ್ಥಿಗಳು ಸೇರಿ ಒಟ್ಟು 32 ಅಭ್ಯರ್ಥಿಗಳಿಗೆ ಅರ್ಜಿ ಆಹ್ವಾನಿಸಿದೆ.

ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಆಯಾ ಡಿಪ್ಲೋಮಾ ಸಂಸ್ಥೆಗಳಲ್ಲಿ ಕೋರ್ಸ್ ಪ್ರವೇಶ ಕುರಿತಂತೆ ಕೌನ್ಸಿಲಿಂಗ್ಗಾಗಿ ಕರೆಯಲಾಗುವುದು. ಆಸಕ್ತಿ ಇರುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ-ಬೆಟಗೇರಿ ದೂರವಾಣಿ ಸಂ:08372-297221 ಹಾಗೂ ಮೊಬೈಲ್ ಸಂಖ್ಯೆ: 9449162822 ಅಥವಾ ಆಯಾ ಜಿಲ್ಲೆಯ ಜಂಟಿ/ಉಪ/ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಇವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ''ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ-ಬೆಟಗೇರಿ-582102'' ಇವರಿಗೆ ಸಲ್ಲಿಸಬೇಕು ಎಂದು ಕೈಮಗ್ಗ ಮತ್ತು ಜವಳಿ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರಿಯಮ್ಮ ದೊಡ್ಡಮ್ಮ ಜಾತ್ರಾಮಹೋತ್ಸವಕ್ಕೆ ಸಕಲ ಸಿದ್ದತೆ

**ಕೆ.ಆರ್.ನಗರ:** ಭೇರ್ಯ ಗ್ರಾಮದ ಪ್ರಸಿದ್ಧ ಗ್ರಾಮದೇವತೆ ಶ್ರೀಕರಿಯಮ್ಮ ದೊಡ್ಡಮ್ಮ ದೇವಿಯ ಸಿಡಿ ಮಹೋತ್ಸವವು ಇದೇ ಏಪ್ರಿಲ್ 30 ಮಂಗಳವಾರ, ಮೇ 01 ಬುಧವಾರ ಜಾತ್ರಾ ಮಹೋತ್ಸವವು ಬಹಳ ವಿಜೃಂಬಣೆಯಿಂದ ನಡೆಯಲಿದ್ದು, ಶ್ರೀಕರಿಯಮ್ಮ ದೊಡ್ಡಮ್ಮ ಟ್ರಸ್ಟ್ ವತಿಯಿಂದ ಸಕಲ ಸಿದ್ದತೆಗಳನ್ನು ಮಾಡಲಾಗುತ್ತಿದೆ.

ಗ್ರಾಮದೇವತೆ ಶ್ರೀಕರಿಯಮ್ಮ ದೊಡ್ಡಮ್ಮ ಸಿಡಿಯನ್ನು ಮಂಗಳವಾರ ಹಿರಿಯರ ಸಂಪ್ರಾದಯಂತೆ ಬಾಳೆಗೊನೆ ಕಟ್ಟಿ ಆಲಂಕೃತಗೊಳಿಸಿ ರಾತ್ರಿ ವೇಳೆ ಸಾವಿರಾರು ಭಕ್ತರ ಸಮೂಹದಲ್ಲಿ ಕೊಂಬು, ಕಹಳೆ, ಕೀಲು ಕುದುರೆ ಮತ್ತು ಮಂಗಳ ವಾದ್ಯ ದೊಂದಿಗೆ ಸುಮಾರು ಒಂದು ಕಿಲೋಮೀಟರ್ ದೂರ ಎಳದು ಕೊಂಡು ನಂತರ ಶ್ರೀಕರಿಯಮ್ಮ ದೊಡ್ಡಮ್ಮ ದೇವಸ್ಥಾನದ ಸುತ್ತಾ ಮೂರು ಸುತ್ತು ಪ್ರದಕ್ಷಣೆ ಸುತ್ತಿಸಿ ನಂತರ ಭಕ್ತಾಧಿಗಳು ತಮ್ಮ ಹರಕೆ ಕಾಣಿಕೆ,ಮುಡುಪುಗಳನ್ನು ಸಲ್ಲಿಸುತ್ತಾರೆ.

**ವಿದ್ಯುತ್ ದೀಪಾಲಂಕಾರ:** ಈಗಾಗಲೇ ಮೂರು ದಿನಗಳಿಂದ ಗ್ರಾಮದ ಹಾಸನ- ಮೈಸೂರು ರಸ್ತೆ, ಸಾಲಿಗ್ರಾಮ- ಕೆ.ಆರ್.ಪೇಟೆ ರಸ್ತೆಯ ಉದ್ದಕ್ಕೂ ಎಲ್.ಇ.ಡಿ.ಬಲ್ಪ್ ಗಳಿಂದ ವಿದ್ಯುತ್ ದೀಪಾಲಂಕಾರ ಮಾಡಲಾಗಿದ್ದಲ್ಲದೆ, ದೇವಸ್ಥಾನಕ್ಕೆ ವಿಶೇಷವಾಗಿ ದೀಪಾಲಂಕಾರ ಮಾಡಿದ್ದು ಕರಿಯಮ್ಮ ದೊಡ್ಡಮ್ಮ ದೇವಾಲಯ ವಿದ್ಯುತ್ ಬೆಳಕಿನಿಂದ ಕಂಗೊಳಿಸುತ್ತಿದೆ

ಈ ಬಾರಿ ಬಹಳ ವಿಜೃಂಬಣೆಯಿಂದ ಆಚರಣೆ ಮಾಡಲಾಗುತ್ತಿದ್ದು, ಮದುವೆಯಾದ ಹೆಣ್ಣುಮಕ್ಕಳು,ನೆಂಟರಿ?ರು,ಹಿತೈಷಿಗಳು, ಸ್ನೇಹಿತರು ಆಗಮನದ ನಿರೀಕ್ಷೆ ಇದೆ.

ಹೊರರಾಜ್ಯದಿಂದ ಭಕ್ತಾಧಿಗಳು ಬಂದು ದೇವಿಗೆ ಹರಕೆ ಕಾಣಿಕೆ ಒಪ್ಪಿಸಿ ಹೋಗುತ್ತಾರೆ, ಜೊತೆಗೆ ಇಲ್ಲಿಯೇ ಹರಕೆ ಒಪ್ಪಿಸಿ ಪರ ಮಾಡಿ ನಾಲ್ಕಾರು



ಜನರಿಗೆ ದಾಸೋಹ ಮಾಡುವುದು ಈ ದೇವಸ್ಥಾನದ ಸಂಪ್ರದಾಯವಾಗಿದೆ.

ಗ್ರಾಮವು ಮಂಗಳವಾರ ಮತ್ತು ಬುಧವಾರ ಮಧು ವೇ? ಹಿಗ್ಗಿಯತೆ ತಳಿರು ತೋರಣಗಳಿಂದ ಆಲಂಕೃತಗೊಂಡು ಹಾಗೂ ವಿದ್ಯುತ್ ದೀಪಾಲಂಕಾರದಿಂದ ನೋಡುಗರ ಕಣ್ಣುನ್ನನ ಸೆಳೆಯುತ್ತದೆ, ಯಾವುದೇ ಜಾತಿ ಭೇದವಿಲ್ಲದೆ ಎಲ್ಲಾ ಜಾತಿ ಜನಾಂಗದವರು ಒಟ್ಟಾಗಿ ಸೇರಿ ಆಚರಿಸುವ ಜಾತ್ರಾ ಮಹೋತ್ಸವವಾಗಿದ್ದು ಗ್ರಾಮದ ಹಿರಿಯರು, ಮುಖಂಡರು ಹಾಗೂ ಯುವಕರು ಹೆಚ್ಚು ಸಹಕಾರದಿಂದ ಜಾತ್ರಾಮಹೊತ್ಸವವನ್ನು ನಡೆಸಲಾಗುತ್ತದೆ.

ವಿಶೇಷವಾಗಿ ಹೊಸದಾಗಿ ಮಧುವೆಯಾದ ನವದಂಪತಿಗಳು ಶ್ರೀ ಕರಿಯಮ್ಮ ದೊಡ್ಡಮ್ಮ ದೇವಿಗೆ ಕೈಮುಗಿದು ತಮ್ಮ ಇ?ಾರ್ಥ ನೆರವೇರಿಸು ಎಂದು ಬೇಡಿ ಕೊಳ್ಳುತ್ತಾರೆ.

**ಪೌರಾಣಿಕ ನಾಟಕ:** ಗ್ರಾಮದೇವತೆ ಗ್ರಾಮಕ್ಕೆ ಒಳಿತು ಮಾಡಲಿ, ಈ ಬಾರಿ ಮಳೆಬೆಳೆ ಚೆನ್ನಾಗಿ ಆಗಲಿ ಎಂದು ಗ್ರಾಮಸ್ಥರು ಜಾತ್ರಾ ಮಹೋತ್ಸವ ದಿನವಾದ ಬುಧವಾರ ರಾತ್ರಿ 9ಗಂಟೆಗೆ ಶ್ರೀ ದೊಡ್ಡಮ್ಮ ಕರಿಯಮ್ಮ ಕೃಪಾಪೋಷಿತ ನಾಟಕ ಮಂಡಳಿಯ ಸಾಮರಸ್ಯ ಕಲಾ ಬಳಗದಿಂದ ಶನಿ ಪ್ರಭಾವ ಅಥವಾ ವಿಕ್ರಮ ವಿಜಯ ಎಂಬ ಪೌರಾಣಿಕ ನಾಟಕವನ್ನು ಪ್ರದರ್ಶಿಸಲಿದ್ದಾರೆ.

**ಓಕಳಿ ಹಬ್ಬ :** ಭೇರ್ಯದ ಶ್ರೀಕರಿಯಮ್ಮ ದೊಡ್ಡಮ್ಮ ಜಾತ್ರೆ ಮಹೋತ್ಸವ ಅಂಗವಾಗಿ ಬಟಿಗನಹಳ್ಳಿ ಗ್ರಾಮದಲ್ಲಿ ಇದೇ ಏಪ್ರಿಲ್ 29 ಸೋಮವಾರ ಶ್ರೀ ಬಸವೇಶ್ವರ ದೇವರ ಓಕಳಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುತ್ತದೆ. ಗ್ರಾಮದಲ್ಲಿ ಅಂದು ಬೆಳಗ್ಗೆಯಿಂದಲೇ ಪೂಜಾ ಕೈಂಕರ್ಯಗಳನ್ನು ನಡೆಸಲಾಗುತ್ತದೆ, ಯುವಕರ ಪಡೆ ಮತ್ತು ಚಿಕ್ಕ ಚಿಕ್ಕ ಮಕ್ಕಳು ಸೇರಿದಂತೆ ಓಕಳಿ ಆಡಿ ಸಂಭ್ರಮಿಸುತ್ತಾರೆ, ಓಕಳಿ ಕೊಂಡಕ್ಕೆ ಮುತ್ತೈದೆಯರು ಹಾಗೂ ಯುವತಿಯರು ನೀರು ತುಂಬಿ ಸಂಭ್ರಮಿಸುವುದು ವಾಡಿಕೆಯಾಗಿದ್ದು ಅಂದು ರಾತ್ರಿ ಗ್ರಾಮದ ಶ್ರೀ ಬಸವೇಶ್ವರ ದೇವರ ಮೆರವಣಿಗೆ ಮಾಡಿ ಭಕ್ತಾಧಿಗಳು ತಮ್ಮ ಇ?ಾರ್ಥ ಸೇವೆ ಸಲ್ಲಿಸುವರು.

### ಬಾಯಿಗೆ ಬೀಗ

**ದೇವಿಗೆ ಮಕ್ಕಳಾಗದವರು, ತಾವು ಅಂದು ಕೊಂಡಿದ್ದು ನೆರವೇರಿದ್ದು, ಚಿಕ್ಕಮಕ್ಕಳಿಗೆ ಆರೋಗ್ಯ ಸರಿಯಿಲ್ಲದಿದ್ದಾಗ ಬಾಯಿಗೆ ಬೀಗ ಹಾಕಿಕೊಂಡು ಸಿಡಿ ಎಳೆಯುವಾಗ ನಡೆಯುತ್ತೇನೆ ಎಂದು ಎ?ೋ ಭಕ್ತಾಧಿಗಳು ಹರಕೆ ಹೊತ್ತಿ ಕೊಂಡಿರುತ್ತಾರೆ ಅಂತಹ ಭಕ್ತಾಧಿಗಳು ತಮ್ಮ ಹರಕೆಯನ್ನು ತಿರಿಸಲು ಬೆಳಿಗ್ಗಿಯಿಂದಲೇ ಉಪವಾಸ ಇದ್ದು ಬಾಯಿಗೆ ಬೀಗ ಹಾಕಿ ಕೊಂಡು ದೇವಿಯ ಹರಕೆಯನ್ನು ತೀರಿಸುತ್ತಾರೆ.ಮಂಗಳವಾರ ರಾತ್ರಿ ಸಿಡಿ ಎಳೆಯುವಾಗ ಮುತ್ತೈದೆಯರು ತಂಬಿಟ್ಟು ಆರತಿ ಬೆಳಗುತ್ತಾರೆ, ಸುತ್ತಮುತ್ತಲಿನ ಗ್ರಾಮಗಳಿಗೆ ಸಿಡಿ ಮತ್ತು ಜಾತ್ರಾ ಮಹೋತ್ಸವ ಬಹಳ ದೊಡ್ಡ ಹಬ್ಬವಾಗಿದೆ.**

## ಮತಗಟ್ಟೆಯಲ್ಲಿ ಜೀವ ಉಳಿಸಿದ ವೈದ್ಯರು

ಬೆಂಗಳೂರು: ವೈದ್ಯಕೀಯ ಪರಿಣಿತಿ ಮತ್ತು ತ್ವರಿತ ಕ್ರಮದ ಮಹತ್ತರ ಸಂಯೋಜನೆಯಲ್ಲಿ ಬೊಮ್ಮಸಂದ್ರದ ನಾರಾಯಣ ಹೆಲ್ತ್ ಸಿಟಿಯ ನೆಫ್ರಾಲಜಿಸ್ಟ್ ಡಾ.ಗಣೇಶ್ ಶ್ರೀನಿವಾಸ ಪ್ರಸಾದ್ ಮತದಾನಕ್ಕಾಗಿ ಕಾಯುತ್ತಿರುವಾಗ ಹೃದಯಾಘಾತಕ್ಕೆ ಒಳಗಾದ ಮಹಿಳೆಯ ಜೀವ ಉಳಿಸಿ ಜೀವರಕ್ಷಕರಾಗಿದ್ದಾರೆ.

ಈ ಘಟನೆಯು ಜೆಪಿ ನಗರ 8ನೇ ಹಂತದಲ್ಲಿ ನಡೆದಿದ್ದು ಮತದಾರರು ತಮ್ಮ ಹಕ್ಕು ಚಲಾಯಿಸಲು ಕಾಯುತ್ತಿರುವಾಗ ನಡೆದಿದೆ. ಡಾ. ಪ್ರಸಾದ್ ತಮ್ಮ ಮತದಾನಕ್ಕೆ ಕಾಯುತ್ತಿದ್ದಾಗ ಐವತ್ತರ ವಯಸ್ಸಿನ ಮಹಿಳೆಯು ಬೆಳಿಗ್ಗೆ 9ರ ಸಮಯದಲ್ಲಿ ಕ್ಯೂನಲ್ಲಿ ನಿಂತಿರುವಾಗ ನೀರು ಕುಡಿಯಲು ಪ್ರಯತ್ನಿಸಿ ಕುಸಿದುಬಿದ್ದರು.

ತಕ್ಷಣವೇ ಗಮನಿಸಿದ ಡಾ.ಪ್ರಸಾದ್ ಮತ್ತು ಕ್ಯೂನಲ್ಲಿರುವ ಜನರು ಮಹಿಳೆ ಕೆಳಕ್ಕೆ ಬೀಳುವ ಮುನ್ನವೇ ಹಿಡಿದುಕೊಂಡರು. ಈ ಸೂಕ್ಷ್ಮ ಕ್ಷಣ ಕುರಿತು ಡಾ.ಪ್ರಸಾದ್, ನಾನು ಆಕೆಯ ನಾಡಿಯನ್ನು ಗಮನಿಸಿದೆ ಮತ್ತು ಅದು ಅತ್ಯಂತ ಕಡಿಮೆ ಇರುವುದನ್ನು ಕಂಡುಕೊಂಡೆ. ಆಕೆ ಕಣ್ಣುಗಳನ್ನು ಮೇಲಕ್ಕೆ ತಿರುಗಿಸುತ್ತಿದ್ದಳು. ಆಕೆಯ ದೇಹ ಯಾವುದೇ ಪ್ರತಿಕ್ರಿಯೆನೀಡುತ್ತಿರಲಿಲ್ಲ ಮತ್ತು ಆಕೆ ಉಸಿರಿಗಾಗಿ ಕಷ್ಟಪಡುತ್ತಿದ್ದಳು. ನಾನು ತಕ್ಷಣವೇ ಸಿಪಿಆರ್(ಕಾರ್ಡಿಯೊ ಪಲ್ಮನರಿ ರಿಸಸಿಟೇಷನ್) ನಡೆಸಿದೆ ಮತ್ತು ಆಕೆಯ ಪರಿಸ್ಥಿತಿ ಸುಧಾರಿಸಿತು ಎಂದರು.

ತ್ವರಿತ ಮತ್ತು ಪರಿಣಾಮಕಾರಿ ಸಿಪಿಆರ್ ಮಹಿಳೆಯ ಪರಿಸ್ಥಿತಿಯನ್ನು ಸ್ಥಿರಗೊಳಿಸುವಲ್ಲಿ ಹಾಗೂ ಮತ್ತಷ್ಟು ವೈದ್ಯಕೀಯ ನೆರವು ಒದಗಿಸುವವರೆಗೆ ಸುಧಾರಿಸಿತು. ಚುನಾವಣಾ ಕರ್ತವ್ಯದಲ್ಲಿದ್ದವರು ಮಹಿಳೆಗೆ ಜ್ಯೂಸ್ ನೀಡಿದರು ನಂತರ ಕೇವಲ ಐದೇ ನಿಮಿಷದಲ್ಲಿ ಆಂಬುಲೆನ್ಸ್ ಬಂದಿತು.

ಮಹಿಳೆಯನ್ನು ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಯಿತು, ಆಕೆ ಅಲ್ಲಿ ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆದರು. ಈ ಘಟನೆ ಕುರಿತು ಡಾ.ಪ್ರಸಾದ್ ಸಕಾಲಿಕ ಮಧ್ಯಪ್ರವೇಶದ ಪ್ರಾಮುಖ್ಯತೆಯ ಕುರಿತು ಹೇಳಿದರು, ಚಿಕಿತ್ಸೆ ತಡವಾಗಿದ್ದಲ್ಲಿ ನಾವು ಆಕೆಯನ್ನು ಕಳೆದುಕೊಳ್ಳುವ ಸಂಭವನೀಯತೆ ಇತ್ತು. ಸಮೂಹವಾಗಿ ನಾವು ರೋಗಿಗಳಿಗೆ ಅವರ ಆರೋಗ್ಯಸೇವಾಪ್ರಯಾಣದಾದ್ಯಂತ ಆರೈಕೆ ಮಾಡಲು ಬದ್ಧರಾಗಿದ್ದೇವೆ. ಪ್ರಾಮಾಣಿಕ ಮತ್ತು ಪರಿಣಾಮಕಾರಿ ಪ್ರಥಮ ಚಿಕಿತ್ಸೆಯ

ಮೂಲಕ ರೋಗಿಯ ಜೀವ ಉಳಿಸುವ ಅವಕಾಶ ಲಭಿಸಿದ್ದಕ್ಕೆ ನಾನು ಕೃತಜ್ಞನಾಗಿದ್ದೇನೆ. ಅಸಾಧಾರಣ ವೈದ್ಯಕೀಯಆರೈಕೆಯು ಆಸ್ಪತ್ರೆಯ ಗೋಡೆಗಳನ್ನು ಮೀರಿ ವಿಸ್ತರಿಸುವಲ್ಲಿ ನಮ್ಮ ಬದ್ಧತೆಯಿದೆ ಮತ್ತು ನಾವು ಸೇವೆ ಒದಗಿಸುವವರಸ್ವಾಸ್ಥ್ಯ ದೃಢೀಕರಿಸುವುದಕ್ಕೆ ನಮ್ಮ ಕ್ರೋಢೀಕೃತ ಪ್ರಯತ್ನಗಳಿಗೆ ನಾವು ಹೆಮ್ಮೆ ಪಡುತ್ತೇವೆ ಎಂದರು.ಮಹಿಳೆಗೆ ಮತದಾನ ಮಾಡುವ ಅವಕಾಶ ತಪ್ಪಿ ಹೋಗಿದ್ದರೂ ಆಕೆಯ ಜೀವ ಉಳಿಯಿತು, ಅದಕ್ಕೆ ನಾರಾಯಣ ಹೆಲ್ತ್‌ಸಿಟಿಯ ಡಾ. ಪ್ರಸಾದ್ ಅವರ ಬದ್ಧತೆ ಮತ್ತು ಪರಿಣಿತಿ ಕಾರಣವಾಗಿದೆ.

# ರೈತರಿಗೆ ಹಣ ತಲುಪಿಸುವ ಕೆಲಸ ಮಾಡಲಿ: ಸಿ.ಟಿ. ರವಿ



ಚಿಕ್ಕಮಗಳೂರು: ಕೇಂದ್ರ ಸರ್ಕಾರ ಬಿಡುಗಡೆ ಮಾಡಿರುವ ಹಣವನ್ನಾದರೂ ರಾಜ್ಯ ಸರ್ಕಾರ ಪ್ರಾಮಾಣಿಕವಾಗಿ ರೈತರಿಗೆ ತಲುಪಿಸುವ ಕೆಲಸ ಮಾಡಲಿ ಎಂದು ಮಾಜಿ ಸಚಿವ ಸಿ.ಟಿ. ರವಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರಕ್ಕೆ ರೈತರ ನೆರವಿಗೆ ಬರಲು ಆಸಕ್ತಿ ಇಲ್ಲ. ರೈತರ ವಿಷಯದಲ್ಲಿ ರಾಜಕಾರಣ ಮಾಡುವುದರಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತಿದೆ. ಈಗ ಕೇಂದ್ರ ಸರ್ಕಾರದಿಂದ ಬಿಡುಗಡೆ ಮಾಡಿದ ಹಣವನ್ನಾದರೂ ರೈತರಿಗೆ ಪ್ರಾಮಾಣಿಕವಾಗಿ ತಲುಪಿಸಲಿ ಎಂದು ಹೇಳಿದ್ದಾರೆ. ರಾಜ್ಯದಲ್ಲಿ 600ಕ್ಕೂ ಅಧಿಕ ಆತ್ಮಹತ್ಯೆ ಮಾಡಿಕೊಂಡಿರುವುದು ಸಾಮಾನ್ಯ ಸಂಗತಿಯಲ್ಲ. ರೈತರು ಸಂಕಷ್ಟಕ್ಕೊಳಗಾಗಿ ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ರೈತರ ಸಂಕಷ್ಟಗಳಿಗೆ ಸರ್ಕಾರ ಕೂಡಲೇ ಸ್ಪಂದಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಮದುವೆ ಸಂಭ್ರಮದ ನಡುವೆಯೂ ವೋಟ್ ಮಾಡಿ ಮಾದರಿಯಾದ ಧನುಷ್ ಗೌಡ



ಬೆಂಗಳೂರು: 'ಗೀತಾ' ಧಾರವಾಹಿಯ ಮೂಲಕ ಖ್ಯಾತಿ ಘಳಿಸಿರುವ ನಟ ಧನುಷ್ ಗೌಡ ಅದ್ದೂರಿಯಾಗಿ ಹಸೆಮಣೆ ಏರಿದ್ದಾರೆ. ಮದುವೆ ಸಂಭ್ರಮದ ನಡುವೆಯೂ ವೋಟ್ ಮಾಡುವ ಮೂಲಕ ಮಾದರಿಯಾಗಿದ್ದಾರೆ. ಧನುಷ್ ನಡೆಗೆ ಫ್ಯಾನ್ಸ್ ಮೆಚ್ಚುಗೆ ಸೂಚಿಸಿದ್ದಾರೆ. ಏ.26ರಂದು ನಟ ಧನುಷ್ ಅತ್ತೆಯ ಮಗಳ ಜೊತೆ ಸಪ್ತಪದಿ ತುಳಿದಿದ್ದಾರೆ. ಧನುಷ್ ಮದುವೆ ಸಂಭ್ರಮದಲ್ಲಿ ಕಿರುತೆರೆಯ ನಟ-ನಟಿಯರು ಭಾಗವಹಿಸಿ ಶುಭಹಾರೈಸಿದ್ದಾರೆ. ಮದುವೆಯ ಶಾಸ್ತ್ರದ ನಡುವೆ ಧನುಷ್ ವೋಟ್ ಮಾಡಿರೋದು ಅಭಿಮಾನಿಗಳ ಗಮನ ಸೆಳೆದಿದೆ. ಮಾಂಗಲ್ಯಧಾರಣೆ ವೇಳೆ ವಧು ಸಂಜನಾ ಕಣ್ಣೀರಿಟ್ಟರು. ಈ ವೇಳೆ, ಸಂಗಾತಿಗೆ ಧನುಷ್ ಸಿಹಿಮುತ್ತು ನೀಡಿದ್ದಾರೆ. ಇನ್ನೂ ಗ್ರ್ಯಾಂಡ್ ರಿಸೆಪ್ಷನ್ ಏರ್ಪಡಿಸಿದ್ದು ನಟಿಯರಾದ ಭವ್ಯ ಗೌಡ, ಮೌನ ಗುಡ್ಡೇಮನೆ, ಜಯಶ್ರೀ ಆರಾಧ್ಯ , ಸ್ಪಂದನಾ ಸೋಮಣ್ಣಸೇರಿದಂತೆ ಸಾಕಷ್ಟು ಮಂದಿ ಆಗಮಿಸಿ ನವ ಜೋಡಿಗೆ ಶುಭ ಹಾರೈಸಿದರು.

# ಹುಬ್ಬಳ್ಳಿ ನೇಹಾ ಕೇಸ್: ಫಯಾಜ್ ಡಿಎನ್‌ಎ ಟೆಸ್ಟ್ ನಡೆಸಿದ ಸಿಐಡಿ



ಹುಬ್ಬಳ್ಳಿ: ರಾಜ್ಯದಲ್ಲಿ ತೀವ್ರ ಕೋಲಾಹಲಕ್ಕೆ ಕಾರಣವಾಗಿದ್ದ ಹುಬ್ಬಳ್ಳಿಯ ನೇಹಾ ಹತ್ಯೆ ಕೇಸ್ನಲ್ಲಿ ಒಂದಷ್ಟು ಬೆಳವಣಿಗೆಯಾಗಿದೆ. ಪ್ರಕರಣದ ಆರೋಪಿ ಫಯಾಜ್ನ ಡಿಎನ್‌ಎ ಪರೀಕ್ಷೆಗಾಗಿ ನ್ಯಾಯಾಧೀಶರ ಮುಂದೆನೇ ಸಿಐಡಿ ಅಧಿಕಾರಿಗಳು ವೈದ್ಯರ ಸಹಾಯದಿಂದ ಆತನ ರಕ್ತದ ಮಾದರಿಯನ್ನ ಸಂಗ್ರಹಿಸಿದ್ದಾರೆ. ಅಂದ್ಹಾಗೆ ಹತ್ಯೆ ನಡೆದ ಸ್ಥಳದಲ್ಲಿ ಹಾಗೂ ಆರೋಪಿ ಕೃತ್ಯಕ್ಕೆ ಬಳಸಿದ ಚಾಕುವಿನ ಮೇಲೆ ರಕ್ತದ ಎರಡು ಗುಂಪಿನ ಮಾದರಿ ಪತ್ತೆಯಾಗಿದ್ವು. ಹೀಗಾಗಿ ಈಗ ಫಯಾಜ್ನ ಆಓಂ ಟೆಸ್ಟ್ ನಡೆಸಲಾಗ್ತಿದೆ ಎನ್ನಲಾಗಿದೆ.

# ಮೋದಿ ಮತ್ತೊಮ್ಮೆ ಪ್ರಧಾನಿ ಆದ್ರೆ ಮುಸ್ಲಿಂ ಮೀಸಲಾತಿ ತೆಗೆಯುತ್ತೇವೆ: ಯತ್ನಾಳ್



ಯಾದಗಿರಿ: ಮೋದಿ ಮತ್ತೊಮ್ಮೆ ಪ್ರಧಾನಿಯಾದರೆ ಮುಸ್ಲಿಂ ಮೀಸಲಾತಿ ತೆಗೆಯುತ್ತೇವೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದ್ದಾರೆ. ಅವರು ಯಾದಗಿರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ದಲಿತರು ಮತ್ತು ಹಿಂದುಳಿದವರಿಗೆ ಕಾಂಗ್ರೆಸ್ ಮೋಸ ಮಾಡಿದೆ. ಸಂವಿಧಾನದಲ್ಲಿ ಕೇವಲ ಎಸ್ಸಿ, ಎಸ್ಟಿ, ಅಲ್ಪಸಂಖ್ಯಾತರು, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದವರಿಗೆ ಮಾತ್ರ ಮೀಸಲಾತಿ ನೀಡಲಾಗಿದೆ. ಮುಸ್ಲಿಂ ಧರ್ಮಕ್ಕೆ ಮೀಸಲಾತಿ ಕೊಡಲು ಬರುವುದಿಲ್ಲ. ಮೂರನೇ ಬಾರಿ ಪ್ರಧಾನಿಯಾದ ಬಳಿಕ ಮೊದಲು ಮುಸ್ಲಿಂ ಮೀಸಲಾತಿ ತೆಗೆದು ಹಾಕುತ್ತೇವೆ. ಅದನ್ನು ಎಸ್ಸಿ, ಎಸ್ಟಿ ಹಾಗೂ ಹಿಂದುಳಿದ ಜನಾಂಗದವರಿಗೆ ಹಂಚಿಕೆ ಮಾಡುತ್ತೇವೆ ಎಂದರು. ಮೊದಲ ಹಂತದಲ್ಲಿ ಮತದಾನ ನಡೆದ 14 ಲೋಕಸಭಾ ಕ್ಷೇತ್ರಗಳಲ್ಲೂ ಬಿಜೆಪಿ ಗೆಲ್ಲುವ ವಾತಾವರಣವಿದೆ. ಮೇ 7ರಂದು ನಡೆಯಲಿರುವ ಉಳಿದ 14 ಕ್ಷೇತ್ರಗಳಲ್ಲೂ ಬಿಜೆಪಿ ಗೆಲ್ಲುವ ವಿಶ್ವಾಸವಿದೆ. ಎರಡನೇ ಹಂತದಲ್ಲಿಯೂ ದಿನದಿಂದ ದಿನಕ್ಕೆ ಬಿಜೆಪಿ, ಮೋದಿ ಪರ ಘೋಷಣೆ ಹೆಚ್ಚುತ್ತಿದೆ. ಇದರಿಂದ ಉಳಿದ 14 ಕ್ಷೇತ್ರಗಳಲ್ಲೂ ಬಿಜೆಪಿ ಗೆಲ್ಲಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

# ನೈಪುಣ್ಯ ಬೇಸಿಗೆ ಬಂಡಿ ಸಮಾರೋಪ



**ಬೆಂಗಳೂರು:** ಕೂಡು ಕುಟುಂಬಗಳ ಮರೆಯಾಗುವಿಕೆ ಹಾಗೂ ನಗರೀಕರಣದಿಂದ ಮಕ್ಕಳು ಸಹಜ ಬಾಲ್ಯವನ್ನು ಕಳೆದುಕೊಳ್ಳುತ್ತಿದ್ದಾರೆ, ?ಸಹಜ ಬಾಲ್ಯ' ಮಕ್ಕಳ ಬೆಳವಣಿಗೆಗೆಣಟಿಜಜಜಿಟಿಜಜಗೆ ಗಟ್ಟಿತನವನ್ನು ರೂಪಿಸುತ್ತದೆ, ಈ ನಿಟ್ಟಿನಲ್ಲಿ ನಮ್ಮ ಗ್ರಾಮೀಣ ಚಟುವಟಿಕೆಗಳು ಹಾಗೂ ಗ್ರಾಮೀಣ ಸೊಗಡು ಪರಿಚಯಿಸುವ, ಅನುಭವಿಸುವ ಅವಕಾಶ ಕಲ್ಪಿಸುವುದು ಅನಿವಾರ್ಯವಾಗಿದೆ ಎಂದು ರಂಗಾಯಣ ಉಪ ನಿರ್ದೇಶಕಿ ಶ್ರೀಮತಿ ನಿರ್ಮಲಾ ಮಠಪತಿ ಹೇಳಿದರು.

ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಆಯೋಜಿಸಿದ್ದ 'ಬೇಸಿಗೆ ಬಂಡಿ' ಹೆಸರಿನ 15 ದಿನಗಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಮಕ್ಕಳು ಮಾನಸಿಕವಾಗಿ ಸದೃಢವಾಗಲು ಹಾಗೂ ಅವರಲ್ಲಿನ ಬೌದ್ಧಿಕ ಪ್ರಜ್ಞೆ ವಿಕಸಿತಗೊಳ್ಳಲು ಮಕ್ಕಳು ನಮ್ಮ ತಲೆಮಾರುಗಳ ಪರಂಪರೆಯನ್ನು ಅನುಭವಿಸುವ ವಾತಾವರಣ ಕಲ್ಪಿಸುವುದು ಅನಿವಾರ್ಯವಾಗಿದೆ. ಆದರೆ ನಗರೀಕರಣದ ಬೆಳವಣಿಗೆಯಲ್ಲಿ ಮಕ್ಕಳು ತಮಗೆ ಬಾಲ್ಯದಲ್ಲಿ ಸಿಗಬೇಕಾದ ಅನೇಕ ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ. ವೇಗವಾಗಿ ಓಡುತ್ತಿರುವ ಆಧುನಿಕ ಜಗತ್ತಿನಲ್ಲಿ ನಮ್ಮ ಮಕ್ಕಳು ಬಾಲ್ಯಸುಖ ಕಳೆದುಕೊಂಡು ಏಕಾಕಿತನ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ,

ಈ ನಿಟ್ಟಿನಲ್ಲಿ ಪೋ?ಕರಿಗೆ ಎ?ೀ ಒತ್ತಡ, ಸಮಯ ಕೊರತೆಗಳು ಇದ್ದರೂ ಮಕ್ಕಳಿಗಾಗಿ ಸಮಯ ಮಾಡಿಕೊಂಡು ಅವರಿಗೆ ಸಹಜ ಬಾಲ್ಯ ಕಲ್ಪಿಸಬೇಕಿದೆ. ಈ ನಿಟ್ಟಿನಲ್ಲಿ ಶಿಕ್ಷಣ ಸಂಸ್ಥೆಗಳು ತಮ್ಮ ಕಾರ್ಯ ವಿಧಾನದಲ್ಲಿ ಬದಲಾವಣೆ ಮಾಡಕೊಂಡು, ನೈಜ ಶಿಕ್ಷಣವನ್ನು ಪರಿಚಯಿಸಬೇಕಿದೆ. ಈ ನಿಟ್ಟಿನಲ್ಲಿ ಮೈಸೂರಿನ ನೈಪುಣ್ಯ ಶಿಕ್ಷಣ ಸಂಸ್ಥೆ ತನ್ನ ಶಿಕ್ಷಣ ವಿಧಾನದಲ್ಲಿ ನಮ್ಮ ನೆಲದ ಸಂಸ್ಕೃತಿ ಹಾಗೂ ಗ್ರಾಮೀಣ ಪರಂಪರೆಯನ್ನು ಪರಿಚಯಿಸುವ ಕಾರ್ಯಕ್ರಮವನ್ನು ಅಳವಡಿಸಿಕೊಂಡಿದೆ. ಇದರ ಜೊತೆಗೆ ಬೇಸಿಗೆ ಶಿಬಿರ ಏರ್ಪಡಿಸಿ ಬೇಸಿಗೆ ಬಂಡಿ ಹೆಸರಿನಲ್ಲಿ ಮಕ್ಕಳಿಗೆ ದೇಶೀಯತೆಯ ಪರಿಚಯ ಮಾಡಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಮಣ್ಣಿನ ವಾಸನೆ ಹಾಗೂ ಕರುಳ ಬಂಧನದ ಸ್ಪರ್ಶಅನುಭವ ಇರುವುದೇ ನಮ್ಮ ಜನಪದ ಸಂಸ್ಕೃತಿಯಲ್ಲಿ ಹಾಗೂ ನಮ್ಮ ಗ್ರಾಮೀಣ ಬದುಕಿನ ಶೈಲಿಯಲ್ಲಿ. ವಿಪರ್ಯಾಸದ ಸಂಗತಿ ಎಂದರೆ ಗ್ರಾಮೀಣ ಪ್ರದೇಶದಲ್ಲೂ ಆಧುನಿಕತೆ ಎಂಬ ಮಾಯಾಸುರ ಆವರಿಸಿಕೊಳ್ಳುತ್ತಿದ್ದಾನೆ. ಆದರೆ ಇದನ್ನು ಮೆಟ್ಟಿ ನಿಲ್ಲುವ ದೃಢ ನಿಶ್ಚಯ ನಮ್ಮ ಪೋ?ಕ ವರ್ಗ ಹಾಗೂ ಶಿಕ್ಷಣ ಸಂಸ್ಥೆಗಳು ಜಂಟಿಯಾಗಿ ಮಾಡಬೇಕು. ಆ ಮೂಲಕ ಮಕ್ಕಳಿಗೆ ಸಹಜ ಬಾಲ್ಯ ಹಾಗೂ ಆಧುನಿಕ ತಂತ್ರಜ್ಞಾನವನ್ನೂ ಒಳಗೊಂಡ ಗುಣಮಟ್ಟದ ಶಿಕ್ಷಣವನ್ನು ನೀಡುವ ವ್ಯವಸ್ಥೆ ರೂಪಿಸಬೇಕಿದೆ. ಶಿಕ್ಷಣದಲ್ಲಿ ನಿರಂತರವಾಗಿ ಹೊಸ ಹೊಸ ಪ್ರಯತ್ನ ಮಾಡುತ್ತಿರುವ ನೈಪುಣ್ಯ ಸಂಸ್ಥೆಯ ಸಂಸ್ಥಾಪಕರೂ ಆದ ಶಿಕ್ಷಣ ತಜ್ಞ ಆರ್. ರಘು ಅವರಿಂದ ಈ ಕಾರ್ಯ ವ್ಯವಸ್ಥಿತವಾಗಿ ವಿಸ್ತರಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಸಂಸ್ಥೆಯ ಅಧ್ಯಕ್ಷ ಆರ್. ರಘು ಅವರು ನಮ್ಮ ಪರಂಪರೆಯ ಕಟ್ಟಡಗಳು ಇನ್ನೂ ತಮ್ಮ ಗಟ್ಟಿತನವನ್ನು ಉಳಿಸಿಕೊಂಡಿದೆ. ಆದರೆ ಇತ್ತೀಚಿನ ವ?ಗಳಲ್ಲಿ ನಿರ್ಮಾಣವಾದ ಕಟ್ಟಡಗಳಲ್ಲಿ ಅಸ್ಥಿರತೆ ಎದ್ದು ಕಾಣಿತ್ತಿದೆ,ಇದರ ಅರ್ಥ ಏನೆಂದರೆ ನಾವು ಮಕ್ಕಳನ್ನು ನಮ್ಮ ಆಚಾರ-ವಿಚಾರ, ಸಂಸ್ಕೃತಿಗಳ ಅನುಭವದೊಂದಿಗೆ ಬೆಳೆಸಿದರೆ ಅವರು ಗಟ್ಟಿಯಾಗುತ್ತಾರೆ. ಮಕ್ಕಳು ಗಟ್ಟಿಯಾಗಿ ರೂಪುಗೊಳ್ಳಲು ಅವರಿಗೆ ಯಾವುದೇ ನಿರ್ಬಂಧ ವಿಧಿಸದೇ ಅವರ ಆಸಕ್ತಿಯನ್ನು ಗ್ರಹಿಸಿ ಉತ್ತೇಜಿಸಬೇಕು.

ತಾಯಂದಿರು ಟಿವಿ ಧಾರಾವಾಹಿಗಳಿಂದ ಅಂತರ ಕಾಯ್ದುಕೊಂಡು ಕಥೆಗಳನ್ನು ಓದಬೇಕು, ಮಕ್ಕಳಿಗೆ ದಿನಕ್ಕೊಂದು ನೀತಿ ಕಥೆಗಳನ್ನು ಹೇಳಿದರೆ ಅದು ಮಕ್ಕಳ ಮೇಲೆ ಪ್ರಭಾವ ಬೀರಲಿದೆ, ಅವರ ಚಿಂತನೆಯ ಶಕ್ತಿ ಹೆಚ್ಚಲು ಸಹಾಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಕರೆ ನೀಡಿದರು.

ಶಿಬಿರದ ಸಂಯೋಜಕಿ ಶ್ರೀಮತಿ ದೇಚಮ್ಮ ಅವರನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು. ಸಂಸ್ಥೆಯ ಅಕಾಡೆಮಿಕ್ ಡೀನ್ ವಿಜಯಾ ಅಯ್ಯರ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿವಿಧ ಪ್ರಕಾರಗಳ ನೃತ್ಯಗಳು ಹಾಗೂ ಡಾ। ಚಂದ್ರಶೇಖರ ಕಂಬಾರರ 'ಪು?ಿರಾಣಿ'ನಾಟಕವನ್ನು ಪ್ರದರ್ಶಿಸಲಾಯಿತು.

# ಮೋದಿಯಿಂದ ಪ್ರಧಾನಿ ಹುದ್ದೆಗೆ ಮರ್ಯಾದೆ ಬರಲ್ಲ

## ಪ್ರಜಾಧ್ವನಿ - 2 ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಅಥಣಿ /ಕಾಗವಾಡ : ಪ್ರತಿ ಬಾರಿ ರಾಜ್ಯಕ್ಕೆ ಬಂದಾಗಲೆಲ್ಲಾ ಮೋದಿ ಭಯಾನಕ ಸುಳ್ಳು ಹೇಳಿ ಹೋಗ್ತಾರೆ. ಹೆಣ್ಣುಮಕ್ಕಳ ತಾಳಿ, ಕೈಬಳೆ ಬಗ್ಗೆ ಸುಳ್ಳು ಹೇಳ್ಕೊಂಡು ತಿರುಗೋ ಮೋದಿಯಿಂದ ಪ್ರಧಾನಿ ಹುದ್ದೆಗೆ ಮರ್ಯಾದೆ ಬರಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಅವರು ರವಿವಾರ ಚಿಕ್ಕೋಡಿ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾದ ಪ್ರಿಯಾಂಕ ಜಾರಕಿಹೊಳಿ ಅವರ ಗೆಲುವಿನ ಸಂದೇಶ ನೀಡಲು ಕಾಗವಾಡ ತಾಲೂಕಿನ ಉಗಾರದಲ್ಲಿ ಸಂಘಟಿಸಿದ್ದ ಪ್ರಜಾಧ್ವನಿ - 2 ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.



ಇಷ್ಟೊಂದು ಸುಳ್ಳು ಹೇಳೋ ಮೋದಿಗೆ ನಾಚಿಕೆನೂ ಆಗಲ್ಲ. ಇವರಿಗೆ ಮಾನ ಮರ್ಯಾದೆನೂ ಇಲ್ಲ. ಯಪ್ಪಾ ಯಪ್ಪಾ ಯಪ್ಪಾ ಈ ಮೋದಿ ಯಾವ ಮಟ್ಟದ ಸುಳ್ಳು ಸೃಷ್ಟಿ ಮಾಡ್ತಾರಲ್ಲಾ ನಾಲ್ಕೆನೂ ಆಗಲ್ಲ ಎಂದು ಮೋದಿ ಅವರ ಸುಳ್ಳುಗಳನ್ನು ಪಟ್ಟಿ ಮಾಡಿದ ಸಿಎಂ ಸಿದ್ದರಾಮಯ್ಯ ತೀವ್ರ ವಾಗ್ದಾಳಿ ಮುಂದುವರೆಸಿದರು.

ಕಿತ್ತೂರು ರಾಣಿ ಜಯಂತಿ ಆಚರಣೆಗೆ ಆದೇಶಿಸಿದ್ದು ನಾವು: ಬೊಮ್ಮಾಯಿ ಮಾಡ್ಲಿಲ್ಲ, ಯಡಿಯೂರಪ್ಪ ಮಾಡ್ಲಿಲ್ಲ. ನಾವು ಯಾವತ್ತೂ ಶಿವಾಜಿ ಮಹಾರಾಜರನ್ನು ಅವಮಾನಿಸಿಲ್ಲ. ಆದರೆ ಈ ಮೋದಿ ಅದೇನು ಸುಳ್ಳು ಹೇಳ್ತಾರೆ ನೋಡಿ. ಕಾಂಗ್ರೆಸ್ ನವರು ರಾಣಿ ಚನ್ನಮ್ಮರಿಗೆ ಮತ್ತು ಶಿವಾಜಿ ಮಹಾರಾಜರಿಗೆ ಅವಮಾನ ಮಾಡಿದ್ದೀವಿ ಎಂದು ಸುಳ್ಳು ಹೇಳೀರಲ್ಲಾ, ಸುಳ್ಳಿಗೆ ಒಂದು ಮಿತಿಯಾದರೂ ಬೇಡ್ವಾ ಮೋದಿ ಎಂದರು.

ಈಗ ಮೋದಿ ಹಿಂದುಳಿದ ಜಾತಿ ಸಮುದಾಯಗಳನ್ನು ಮುಸ್ಲಿಮರ ವಿರುದ್ಧ ಎತ್ತಿಕಟ್ಟಲು ಭಯನಾಕ ಸುಳ್ಳು ಸೃಷ್ಟಿಸಿದ್ದಾರೆ. ಹಿಂದುಳಿದವರ ಮೀಸಲಾತಿ ಕಿತ್ತು ಮುಸ್ಲಿಮರಿಗೆ ಕೊಡ್ತಾರೆ ಎನ್ನುವ ಭಿತಾನಕ ಸುಳ್ಳು ಹೇಳಿದ ಮೋದಿಯವರಿಗೆ ನಾಚಿಕೆ ಅನ್ನೋದೇ ಇಲ್ಲ ಎಂದರು. ಪ್ರತಿ ಭಾರತೀಯರ ಖಾತೆಗೆ 15 ಲಕ್ಷ ಹಾಕ್ತಿವಿ ಎಂದು ನಂಬಿಸಿ ಪ್ರತಿ ಭಾರತೀಯರ ಹಣೆಗೆ ಮೂರು ನಾಮ ತಿಕ್ಕಿದ್ರು. ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡ್ತೀವಿ ಎಂದು ನಂಬಿಸಿ ಕೆಲಸ ಕೇಳಿದ್ರೆ ಪಕೋಡ ಮಾರಿ ಅಂತೀರಿ. ಥ ನಿಮಗೆ ನಾಚಿಕೆನೇ ಆಗಲ್ವಾ ಎಂದು ಪ್ರಶ್ನಿಸಿದರು.

ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಸ್ತೀವಿ ಅಂದ್ರಿ, ಇಳಿಸಿದ್ರಾ? ಬೆಲೆ ಏರಿಕೆ ತಡಿತೀವಿ ಅಂದ್ರಿ. ತಡೆದ್ರಾ? ಪ್ರತೀ ಬಾರಿ ರಾಜ್ಯಕ್ಕೆ ಬರೋದು ಹೊಸ ಹೊಸ ಸುಳ್ಳು ಹೇಳಿ ಹೋಗೋದು. ಇನ್ನೂ ಎಷ್ಟು ವರ್ಷ ಹಿಂದುಳಿದ ಜಾತಿ- ಸಮುದಾಯಗಳನ್ನು ನಂಬಿಸಿ ವಂಚಿಸ್ತೀರಿ? ಸುಳ್ಳು ಹೇಳ್ಕೊಂಡು ತಿರುಗೀರಿ ಎಂದು ಕೇಳಿದರು.

ನಾವು ಭಾರತೀಯರ ಬದುಕಿನ ಬಗ್ಗೆ ಮಾತಾಡ್ತೀವಿ ಬಿಜೆಪಿ ಭಾರತೀಯರ ಭಾವನೆಗಳ ಜೊತೆ ಚೆಲ್ಲಾಟ ಆಡ್ಕೊಂಡು ಲಾಭ ಮಾಡಿಕೊಳ್ತಾರೆ. ಆದರೆ ನಾವು ಕಾಂಗ್ರೆಸ್ಸಿವರು ಜನರ ಬದುಕಿನ ಸಂಕಷ್ಟಗಳನ್ನು ಕಡಿಮೆ ಮಾಡಲು ಕಾರ್ಯಕ್ರಮ ರೂಪಿಸಿ ಜಾರಿ ಮಾಡಿದ್ದೇವೆ. ನುಡಿದಂತೆ ನಡೆದಿದ್ದೇವೆ. ಜನರಿಗೆ ಕೊಟ್ಟ ಮಾತನ್ನು ಈಡೇರಿಸಿದ ನೈತಿಕತೆಯಿಂದ ನಾವು ನಿಮ್ಮ ಮುಂದೆ ಬಂದು ಮತ ಕೇಳುತ್ತಿದ್ದೇವೆ. ಎಂದರು

ಮಹಿಳೆಯರಿಗೆ ವರ್ಷಕ್ಕೆ ಒಂದು ಲಕ್ಷ ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ತಕ್ಷಣ ಪ್ರತೀ ವರ್ಷ ಮಹಿಳಾ ಯಜಮಾನಿಯ ಖಾತೆಗೆ ಒಂದು ಲಕ್ಷ ರೂಪಾಯಿ ಜಮೆ ಆಗತ್ತೆ.ಇಡೀ ದೇಶದ ರೈತರ ಸಾಲ ಮನ್ನಾ ಆಗತ್ತೆ.ನಿರುದ್ಯೋಗಿ ಯುವಕ ಯುವತಿಯರಿಗೆ ಲಕ್ಷ ರೂಪಾಯಿ ಸಿಗತ್ತೆ.

ಸ್ವಾಮಿನಾಥನ್ ವರದಿಯಂತೆ ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಜಾರಿ ಆಗತ್ತೆ. ಇದಕ್ಕಾಗಿ ಕಾಯ್ದೆ ಮಾಡ್ತೀವಿ. ಇಂತಹ 25 ಗ್ಯಾರಂಟಿಗಳಿಗೆ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ಸಹಿ ಹಾಕಿದ್ದಾರೆ. ಸುಳ್ಳುಗಳ ಮೂಲಕ ನಿಮಗೆ ಬಕ್ರಾ ಮಾಡುವ ಮೋದಿಗೆ ಮತ ಹಾಕ್ತಿರೋ, ನುಡಿದಂತೆ ನಡೆದ ನಮಗೆ ಮತ ಹಾಕ್ತಿರೋ ತೀರ್ಮಾನಿಸಿ ಎಂದು ಕರೆ ನೀಡಿದರು.

ಕೆಪಿಸಿಸಿ ಅಧ್ಯಕ್ಷರಾದ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಸತೀಶ್ ಜಾರಕಿಹೊಳಿ, ಭೈರತಿ ಸುರೇಶ್, ಮಾಜಿ ಡಿಸಿಎಂ ಶಾಸಕ ಲಕ್ಷ್ಮಣ ಸವದಿ.ಕಾಗವಾಡ ಶಾಸಕ ರಾಜು ಕಾಗೆ. ಕುಡಚಿ ಶಾಸಕ ಮಹೇಂದ್ರ ತಮ್ಮಣ್ಣವರ. ಮಾಜಿ ಸಚಿವರಾದ ವಿಪ ಸದಸ್ಯ ಪ್ರಕಾಶ ಹುಕ್ಕೇರಿ. ವಿನಯ್ ಕುಲಕರ್ಣಿ, ಗಣೇಶ ಹುಕ್ಕೇರಿ ಸೇರಿದಂತೆ ಜಿಲ್ಲೆಯ ಶಾಸಕರು ಮತ್ತು ಮುಖಂಡರುಗಳು ಉಪಸ್ಥಿತರಿದ್ದರು.

# ಮೂರು ವರ್ಷಗಳ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಂಗಳೂರು:** ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಡಿಪ್ಲೋಮಾ (ಡಿ.ಹೆಚ್.ಟಿ.ಟಿ) ಕೋರ್ಸ್ ಕಲಿಕೆಗಾಗಿ 2024-25 ನೇ ಸಾಲಿನ ಶೈಕ್ಷಣಿಕ ಅವಧಿಗೆ ಒಟ್ಟು 44 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ವಿವಿಧ ಸಂಸ್ಥೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿಯ ಪ್ರಕಾರ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ರೂ.2,500/- ರಂತೆ ಶಿಷ್ಯವೇತನ ನೀಡಲಾಗುವುದು ಹಾಗೂ ಪುರುಷ ಅಭ್ಯರ್ಥಿಗಳಿಗೆ ವಸತಿ ನಿಲಯದ ಸೌಲಭ್ಯವನ್ನು ಹಣ ಪಾವತಿಸುವ ಆಧಾರದ ಮೇಲೆ ಕಲ್ಪಿಸಲಾಗುವುದು.

ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಇಂಗ್ಲೀಷ್ನ್ನು ಒಂದು ವಿಷಯವಾಗಿ ಅಭ್ಯಸಿಸಿ ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ದಿನಾಂಕ: 01-07-2024 ಕ್ಕೆ ಅನ್ವಯಿಸುವಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳು 15 ರಿಂದ 23 ರ ವಯೋಮಿತಿಯಲ್ಲಿರಬೇಕು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು 15 ರಿಂದ 25 ರ ವಯೋಮಿತಿಯಲ್ಲಿರಬೇಕು. ಅರ್ಹತಾ ಪರೀಕ್ಷೆಯಲ್ಲಿ ಗಳಿಸಿರುವ ಕ್ರೋಢೀಕೃತ ಅಂಕಗಳ ಮೆರಿಟ್ನ್ನು ಪರಿಗಣಿಸಲಾಗುವುದು. ಅರ್ಜಿ ಸಲ್ಲಿಸಲು ಮೇ 31 ಕೊನೆಯ ದಿನಾಂಕವಾಗಿದೆ.

ಡಿಪ್ಲೊಮಾ ಕೋರ್ಸ್ಗೆ ಲಭ್ಯವಿರುವ ಸಂಸ್ಥೆಗಳು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ-ಬೆಟಗೇರಿ (ಕರ್ನಾಟಕ)-22 ಅಭ್ಯರ್ಥಿಗಳು, ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ (ತಮಿಳುನಾಡು) -17 ಅಭ್ಯರ್ಥಿಗಳು, ಎಸ್.ಪಿ.ಕೆ.ಎಂ. ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ - 03 ಅಭ್ಯರ್ಥಿಗಳು, ವೆಂಕಟಗಿರಿ (ನೆಲ್ಲೂರು ಜಿಲ್ಲೆ, ಆಂಧ್ರಪ್ರದೇಶ), ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಕಣ್ಣೂರು (ಕೇರಳ) - 02 ಅಭ್ಯರ್ಥಿಗಳು ಸೇರಿ ಒಟ್ಟು 44 ಅಭ್ಯರ್ಥಿಗಳಿಗೆ ಅರ್ಜಿ ಆಹ್ವಾನಿಸಿದೆ.

ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳನ್ನು ಆಯಾ ಡಿಪ್ಲೋಮಾ ಸಂಸ್ಥೆಗಳಲ್ಲಿ ಕೋರ್ಸ ಪ್ರವೇಶ ಕುರಿತಂತೆ ಕೌನ್ಸಿಲಿಂಗ್ಗಾಗಿ ಕರೆಯಲಾಗುವುದು.

ಆಸಕ್ತಿ ಇರುವ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ-ಬೆಟಗೇರಿ ದೂರವಾಣಿ ಸಂ: 08372-297221 ಮೊಬೈಲ್ ಸಂಖ್ಯೆ: 9449162822 ಅಥವಾ ಆಯಾ ಜಿಲ್ಲೆಯ ಜಂಟಿ/ಉಪ/ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಇವರನ್ನು ಸಂಪರ್ಕಿಸಬಹುದಾಗಿದೆ.

ಅರ್ಜಿಗಳನ್ನು ಆನ್ಲೈನ್ನಲ್ಲಿ https://khtigadag.ac.in/AdmissionForm.pdf ಲಿಂಕ್ ಮೂಲಕ ಡೌನ್ಲೋಡ್ ಮಾಡಿಕೊಳ್ಳಬಹುದಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ "ಪ್ರಾಂಶುಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ-ಬೆಟಗೇರಿ-582102" ಇವರಿಗೆ ಸಲ್ಲಿಸಬೇಕು ಎಂದು ಕೈಮಗ್ಗ ಮತ್ತು ಜವಳಿ ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವೇಮಗಲ್ ಧರ್ಮರಾಯ ಸ್ವಾಮಿ ಕರಗ ಮಹೋತ್ಸವಕ್ಕೆ ಒಂದು ಲಕ್ಷ ದೇಣಿಗೆ ನೀಡಿದ ಮಾಜಿ ಸಚಿವ ವರ್ತೂರ್ ಪ್ರಕಾಶ್



ಕೋಲಾರ/ ವೇಮಗಲ್: ಇಲ್ಲಿನ ಪುರಾಣ ಪ್ರಸಿದ್ಧ ಶ್ರೀ ದ್ರೌಪತಮ್ಮ ದೇವಿಯ 49ನೇ ಕರಗ ಮಹೋತ್ಸವದ ಅಂಗವಾಗಿ ಮಾಜಿ ಸಚಿವರಾದ ಆರ್ ವರ್ತೂರ್ ಪ್ರಕಾಶ್ ಒಂದು ಲಕ್ಷ ರೂಗಳನ್ನು ದೇಣಿಗೆ ನೀಡಿದರು .

ನಂತರ ಮಾತನಾಡಿದ ಅವರು ವೇಮಗಲ್ ಗ್ರಾಮದ ದ್ರೌಪತಮ್ಮನವರ ದೇವಿಯ ಆಶೀರ್ವಾದ ಕಳೆದ 20 ವರ್ಷಗಳಿಂದ ನನ್ನ ಮೇಲೆ ಇದೆ ಈ ತಾಯಿಯ ಆಶೀರ್ವಾದದಿಂದ ಎರಡು ಬಾರಿ ಶಾಸಕನಾಗಿ ಸಚಿವನಾಗಿ ಆಯ್ಕೆಯಾಗಿದ್ದೇನೆ ಕೋಲಾರ ತಾಲೂಕಿನಲ್ಲಿ ವಾಹ್ನೀ ಸಮಾಜದ ಮುಖಂಡರು ಸಹ ನನ್ನನ್ನು ಎಂದು ಕೈ ಬಿಡದೆ ಮುನ್ನಡೆಸುತ್ತಿದ್ದಾರೆ ಈ ಸಮಾಜದ ಕಷ್ಟ ಸುಖಗಳಲ್ಲಿ ನಾನು ಸಹ ಭಾಗಿಯಾಗುತ್ತಿದ್ದೇನೆ ವಹ್ನಿ ಕುಲದ ಸಮಾಜದ ಮುಖಂಡರು ನನ್ನನ್ನು ತಮ್ಮ ಸ್ವಂತ ಮಗನಂತೆ ನೋಡಿಕೊಳ್ಳುತ್ತಿದ್ದಾರೆ ಕೆಲವು ರಾಜಕಾರಣಿಗಳು ಚುನಾವಣೆ ಬಂದಾಗ ಮಾತ್ರ ಗ್ರಾಮಗಳಲ್ಲಿರುವ ದೇವಾಲಯಗಳಿಗೆ ಹಣ ಕೊಟ್ಟು ಮತ ಪಡೆದು ಕಾಣೆಯಾಗುತ್ತಾರೆ ಸಾರ್ವಜನಿಕರು ಕರೆ ಮಾಡಿದರೆ ಕರೆಯನ್ನು ಸಹ ಸ್ವೀಕರಿಸುವುದಿಲ್ಲ ನಾನು ಸೋತರು ಸಹ ಯಾರೇ ಕರೆ ಮಾಡಿದರು ಸ್ವೀಕರಿಸಿ ಸಾರ್ವಜನಿಕರ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಿದ್ದೇನೆ.

ಇಂತಹ ದೇವತಾ ಕಾರ್ಯಗಳಿಗೆ ಸಹಾಯದ ನೆರವು ನೀಡಿ ದೇವತಾಕಾರ್ಯಗಳಲ್ಲಿ ಭಾಗಿಯಾಗುವುದರಿಂದ ಮನಸ್ಸಿಗೆ ನೆಮ್ಮದಿ ಮತ್ತು ಆರೋಗ್ಯವನ್ನು ಉಂಟು ಮಾಡುತ್ತದೆ ಎಂದು ತಿಳಿಸಿದರು .

ಈ ಸಂದರ್ಭದಲ್ಲಿ ಕೋಲಾರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ಬೆಗ್ಲಿ ಸೂರ್ಯ ಪ್ರಕಾಶ್ , ನಾರಾಯಣ ಮೂರ್ತಿ ,ವಾಹ್ನಿ ಕುಲಸ್ಥರು ಹಾಗೂ ಗ್ರಾಮಸ್ಥರು ಹಾಜರಿದ್ದರು.

# ಶ್ರೀರಾಮ ಪಟ್ಟಾಭಿಷೇಕ ಅದ್ದೂರಿ



**ಯಳಂದೂರು ಪಟ್ಟಣದ ದೇವಾಂಗ ಬೀದಿಯಲಿ ಭಾನುವಾರ ನಡೆದ ಶ್ರೀರಾಮ ಪಟ್ಟಾಭಿಷೇಕದ ನಿತ್ತ ನೆರೆದಿದ್ದ ಭಕ್ತರಿಗೆ ಪ್ರಸಾದ ನಿಯೋಗ ಮಾಡಲಾುತು.**

**ಯಳಂದೂರು:**ಯಳಂದೂರು ತಾಲೂಕಿನ ದೇವಾಂಗ ಬೀದಿಯಲ್ಲಿರುವ ಶ್ರೀರಾಮಮಂದಿರದಲ್ಲಿ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವವು ಭಾನುವಾರ ಸಂಭ್ರಮ ಸಡಗರಗಳಿಂದ ನೆರವೇರಿತು.

ಪಟ್ಟಣದ ದೇವಾಂಗ ಬೀದಿಯಲ್ಲಿರುವ ಶ್ರೀರಾಮಮಂದಿರ ಜಿಲ್ಲೆಯ ಪುರಾತನ ರಾಮಮಂದಿರಗಳಲ್ಲಿ ಒಂದಾಗಿದೆ. ಕಳೆದ ನೂರಾರು ವರ್ಷಗಳಿಂದಲೂ ಇಲ್ಲಿ ರಾಮೋತ್ಸವ ಆಚರಿಸುವ ವಾಡಿಕೆ ಇದೆ. ರಾಮನವಮಿಯ ದಿನ ಶ್ರೀರಾಮ ದೇವರ ಪಟವನ್ನಿಟ್ಟು ಶೇಷ ಪೂಜೆ ಮಾಡಿ ಪಟ್ಟಾಭಿಷೇಕ ಮಹೋತ್ಸವ ಹ್ಮಕೊಳ್ಳುವ ಸಂಪ್ರದಾಯ ಅನಾದಿ ಕಾಲದಿಂದಲೂ ರೂಢಿಯಲ್ಲಿದೆ.

ಈ ದೇಗುಲಕ್ಕೆ ಬೆಂಗಳೂರು, ತುಳುನಾಡು ಸೇರಿದಂತೆ ಹಲವು ಕಡೆಗಳಲ್ಲೂ ಭಕ್ತರಿದ್ದು ಪಟ್ಟಾಭಿಷೇಕದ ಸಮಯಲ್ಲಿ ಎಲ್ಲರೂ ಬಂದು ಪೂಜೆ ಸಲ್ಲಿಸುವ ವಾಡಿಕೆ ಇದೆ. ಅದರಂತೆ ಭಾನುವಾರ ನಡೆದ ಪಟ್ಟಾಭಿಷೇಕ ಕಾರ್ಯಕ್ರಮಕ್ಕೆ ದೇಗುಲದಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ದೇಗುಲವನ್ನು ಹಾಗೂ ದೇವಾಂಗ ಬೀದಿಯನ್ನು ತಳಿರು, ತೋರಣ ಸಿಂಗರಿಸಲಾಗಿತ್ತು. ಬೆಳಿಗ್ಗಿಂದಲೇ ಶೇಷ ಪೂಜೆ ಹೋಮ ಹವನಗಳನ್ನು ನೆರವೇರಿಸಲಾುತು. ಶೇಷ ಬಗೆಯ ಹಣ್ಣು, ದವಸ, ಧಾನ್ಯಗಳನ್ನಿಟ್ಟು ಪೂಜಿಸಲಾುತು. ಮಧ್ಯಾಹ್ನ ಮಹಾಮಂಗಳಾರತಿ ಮಾಡುವ ಮೂಲಕ ಪೂಜಾ ಕಾರ್ಯಕ್ರಮಗಳನ್ನು ಸಂಪನ್ನಗೊಳಿಸಲಾುತು. ನಂತರ ನೆರೆದಿದ್ದ ಭಕ್ತರಿಗೆ ಪ್ರಸಾದ ಹಾಗೂ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ನೂರಾರು ಭಕ್ತರು ಈ ಕಾರ್ಯಕ್ರಮದಲ್ಲಿ ಭಾಗವಸುವ ಮೂಲಕ ಭಕ್ತಿ ಮೆರೆದರು. ರಾಮಮಂದಿರದ ಆಡಳಿತ ಮಂಡಲಿಯ ವತಿಂದ ಅಚ್ಚುಕಟ್ಟಾಗಿ ಎಲ್ಲಾ ಧಾರ್ಮಿಕ ಧಿಗಳನ್ನು ಸಂಪನ್ನಗೊಳಿಸಲಾುತು

## ರಾಯಚೂರಿನಲ್ಲಿ ಆಯೋಜಿಸಿದ್ದ ರೈ ಸಮಾವೇಶದಲ್ಲಿ ನಟ ಪ್ರಕಾಶ ರೈ ಟೀಕೆ

# ಮೋದಿ ಜನರ ಜೀವನದ ಜೊತೆ ಆಟವಾಡ್ತಿದ್ದಾನೆ

ರಾಯಚೂರು: ಪ್ರದಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ಬಹುಭಾಷಾ ನಟ ಪ್ರಕಾಶ ರೈ ಏಕವಚನದಲ್ಲೇ ತೀವ್ರ ವಾಗ್ದಾಳಿ ನಡೆದಿದರು. ಮಹಾಪ್ರಭು ಇಲ್ಲಿಗೆ ಬಂದು ಹೇಳ್ತಾನೆ ನೇಹಾ ಪ್ರಕರಣವನ್ನ ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿಲ್ಲ. ಆದ್ರೆ ಇದನ್ನ ನೀವು ಪರಿಗಣಿಸಿಕೊಂಡು ಕೋಮುವಾದಕ್ಕೆ ಬಳಸಿಕೊಳ್ಳುತ್ತಿದ್ದೀರಿ ಥೂ ನಿಮ್ಮ ಜನ್ಮಕ್ಕೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆಗಳು ಆಯೋಜಿಸಿದ್ದ ಸಮಾವೇಶದಲ್ಲಿ ಮಾತನಾಡಿದ ಪ್ರಕಾಶ ರೈ, ರೈತರ ಬಗ್ಗೆ ಗೊತ್ತಿಲ್ಲ ಹಳ್ಳಿಗಳ ಬಗ್ಗೆ ಅವನಿಗೆ ಗೊತ್ತಿಲ್ಲ. ಹಳ್ಳಿಗಳನ್ನು ದತ್ತು ತಗೊಂಡು ಮಾಡೆಲ್ ಮಾಡ್ತಿವಿ ಅಂದ್ರು, ನಿಮ್ಮ ಜನ್ಮಕ್ಕೆ, ಕರ್ಮಕ್ಕೆ ಒಂದಾದ್ರೂ ಹಳ್ಳಿ ಮಾಡಿದಿರಾ? ನಾನು ಕ್ಯಾಮರಾ ಮುಂದೆ ನಟನೆ ಮಾಡಿದರೆ, ಇವನು ಜನರ ಜೀವನದ ಜೊತೆ ನಟನೆ ಮಾಡ್ತಾನೆ ಎಂದು ಪ್ರದಾನಿ ಮೋದಿ ವಿರುದ್ಧ ಹರಿ ಹಾಯ್ದರು. ನೀನು ಕೊಟ್ಟ ಮಾತನ್ನು ನಾವು ನೆನಪು ಮಾಡಿದ್ರೆ ಅದು ದೇಶ ದ್ರೋಹನಾ?

ಭಾರತದ 10 ಲಕ್ಷ ಎಕರೆ ಪ್ರದೇಶವನ್ನ ಚೀನಾ ಒತ್ತುವರಿ ಮಾಡಿದೆ. ಒತ್ತುವರಿ ತಡೆಯಲಾಗಿಲ್ಲ. ಇವನನ್ನು ನಾವು ಉಳಿಸಿಕೊಳ್ಳಬೇಕಾ? ಪ್ರದಾನ ಮಂತ್ರಿ ಆಗಿದ್ದಾನೆ ಇವನೇ ಓದಿಲ್ಲ, ಅ ಆ ಇ ಈ ಬರಲ್ಲ. ಇಂತವನಿಗೆ ರೈತರ ಮಹತ್ವ ಹೇಗೆ ಗೊತ್ತಾಬೇಕು ಎಂದು ವ್ಯಂಗ್ಯವಾಡಿದರು.

ಮಲ್ಲಿಗೆ ಹೂವಿನ ಹತ್ರ ಹೋದ್ರೆ ಪರಿಮಳ ಸುವಾಸನೆ ಬರುತ್ತೆ ಇವನತ್ರ ಹೋದ್ರೆ ಗಬ್ಬು ನಾಥ ಬರುತ್ತೆ. ದೇಶದ ಇವತ್ತಿನ ಸ್ಥಿತಿಗೆ ಈ ಸರ್ಕಾರ ಮಾತ್ರವಲ್ಲ, ಈ ಹಿಂದಿನ ಸರ್ಕಾರಗಳು ಕಾರಣಾಗಿವೆ.

ನಾವು ಕಾಯಕ ಕಲ್ಯಾಣ ಮಾಡ್ತಿವಿ. ಆದ್ರೆ ಬಿಜೆಪಿ ಅವ್ರು ಕಾವಿ ಕಲ್ಯಾಣ ಮಾಡ್ತಿದಾರೆ. ನನಗೂ ರೈತರಿಗೆ ತಾಯಿ ತಂದೆ ಮಗನಿಗೆ ಇರುವ ಸಂಬಂವಿದೆ. ಆಳಿದ ಸರ್ಕಾರಗಳು ಕಾಲ ಕಾಲದಿಂದ ರೈತರಿಗೆ ಸಹಾಯ ಮಾಡುವುದನ್ನ ಭಿಕ್ಷೆ ಅಂದುಕೊಂಡಿದ್ದಾವೆ. ಆದ್ರೆ ರೈತರು ಘನತೆ ಕೊಡಿ. ರೈತನ ಮಗ ಈಗ ರೈತನಾಗಲ್ಲ ಅಂತಿದಾನೆ ಇಷ್ಟು ದೊಡ್ಡ ಭಾರತದಲ್ಲಿ ನನಗೆ ಯಾರೂ ಇಲ್ಲ ಅಂತಾ ರೈತರು ಆತ್ಮಹತ್ಯೆ ಮಾಡಿ ಕೊಳ್ಳುತ್ತಿದ್ದಾರೆ. ಇದು ಮಹಾಪ್ರಭುಗಳಿಗೆ ಅರ್ಥ ಆಗುತ್ತಾ. ಮಹಾಪ್ರಭುವಿನ ಸರ್ಕಾರದಲ್ಲಿ ಏನೂ ಮಾಡಲ್ಲ ಅವನಲ್ಲಿ ಪರಿವಾರ ಇಲ್ಲ ಎಂದ ಹಾಗಾಗಿ ಬಿಜೆಪಿಯವರನ್ನ ಲೋಕಸಭಾ ಚುನಾವಣೆಯಲ್ಲಿ ಸೋಲಿಸುವಂತೆ ಪ್ರಕಾಶ ರೈ ಕರೆ ನೀಡಿದರು.

ಸಮಾವೇಶದಲ್ಲಿ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಗೌರವಾಧ್ಯಕ್ಷ ಚಾಮರಸ ಪಾಟೀಲ, ಪಂಜಾಬಿನ ರೈತ ಮುಖಂಡ ಅವತಾರ ಸಿಂಗ್, ಕೆ ಜಿ ವೀರೇಶ, ಡಿ ಎಸ್ ಶರಣಬಸವ, ಜಾನ್ ವೆಸ್ಲಿ, ಖಾಜಾ ಅಸ್ಲಾಂ, ಮಾರೆಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವರನಟ ಡಾ.ರಾಜ್‌ಕುಮಾರ್‌ಗೆ 'ಆಸ್ಕರ್' ಪ್ರಶಸ್ತಿ ಬರಬೇಕಿತ್ತು

ಮೈಸೂರು: ಪ್ರಪಂಚದ ಎಂಥಾ ಅದ್ಭುತ ನಟರ ಸಾಲಿನಲ್ಲಿ ಬೇಕಾದರೂ ನಿಲ್ಲಬಲ್ಲ, ನಿಂತು ಅವರನ್ನೆಲ್ಲಾ ಮೀರಿಸಬಲ್ಲ ಮಹದದ್ಭುತ ಪ್ರಚಂಡ ಪ್ರತಿಭಾ ಶಕ್ತಿಯಿದ್ದ ನಮ್ಮ ಕನ್ನಡದ ಅಣ್ಣ ಜಗದ್ವಿಖ್ಯಾತ ಮೇರುನಟ ಡಾ. ರಾಜ್ ಕುಮಾರ್ ಅವರಿಗೆ ವಿಶ್ವ ಚಿತ್ರರಂಗದ ಅತ್ಯುನ್ನತ ಗೌರವ ಪುರಸ್ಕಾರವಾದ ಜಾಗತಿಕ ಮನ್ನಣೆಯ ಪ್ರತಿಷ್ಠಿತ ಆಸ್ಕರ್ ಪ್ರಶಸ್ತಿ ಬರಬೇಕಿತ್ತೆಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯ ಪಟ್ಟರು.

ನಗರದ ಕೃಷ್ಣಮೂರ್ತಿಪುರಂನ ನಮನ ಕಲಾ ಮಂಟಪದಲ್ಲಿ ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನಡೆದ ಕರ್ನಾಟಕ ರತ್ನ, ಪದ್ಮಭೂಷಣ, ವರನಟ ಡಾ. ರಾಜ್ ಕುಮಾರ್ ಅವರ 95 ನೇ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹಳ್ಳಿಗಮಾರ, ಹುಚ್ಚ, ಬೆಪ್ಪ, ರೈತ, ಕಾರ್ಮಿಕ, ವೈದ್ಯ, ಕಳ್ಳ, ಪೊಲೀಸ್, ಪೆದ್ದ, ವಿಜ್ಞಾನಿ, ಸಂತ, ಭಗವಂತ, ಮಹಾಂತ, ಯೋಧ, ಜೇಮ್ಸ್ ಬಾಂಡ್ ಹೀಗೆ ಚಮ್ಮಾರನಿಂದ ಹಿಡಿದು ಚಕ್ರವರ್ತಿಯವರೆಗೆ ಬೆಳ್ಳಿ ತೆರೆಯಲ್ಲಿ ರಾಜ್ ಕುಮಾರ್ ಅವರಷ್ಟು ವೈವಿಧ್ಯಮಯ ಪಾತ್ರಗಳನ್ನು ಮಾಡಿದ ನಟ ಜಗತ್ತಿನಲ್ಲಿ ಮತ್ತೊಬ್ಬ ಸಿಗಲಾರರೆಂದರು.

ಮೂಲತಃ ವೃತ್ತಿರಂಗ ಭೂಮಿ ಮೂಲಕ ಚಿತ್ರರಂಗಕ್ಕೆ ಬಂದ ರಾಜ್ ಕುಮಾರ್ ರವರು ಉಭಯ ಕ್ಷೇತ್ರಗಳಲ್ಲೂ ಚಿರಸ್ಥಾಯಿಯಾಗುಳಿಯುವ ಅಮೋಘ ಅಭಿನಯ ನೀಡಿ



ಕಲಾರಸಿಕರೆದೆಯಲ್ಲಿ ಶಾಶ್ವತವಾಗಿ ನಿಂತವರು. ರಂಗಭೂಮಿಯೂ ಸೇರಿದಂತೆ ಅಭಿನಯ ಜಗತ್ತಿನಲ್ಲಿ ವರನಟ ಡಾ.ರಾಜ್ ಕುಮಾರ್ ಸಾಧನೆ ಚಾರಿತ್ರಿಕವಾದದ್ದು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ಜಾನಪದ, ಬಾಂಡ್ ಶೈಲಿಯ ಪತ್ತೇದಾರಿ ಚಿತ್ರಗಳು ಒಳಗೊಂಡಂತೆ 'ಬೇಡರ ಕಣ್ಣಪ್ಪ' ಚಿತ್ರದಿಂದ ಆರಂಭಿಸಿ ಶಬ್ದವೇಧಿ ತನಕ ಸುಮಾರು ಇನ್ನೂರೆಂಟು ಚಲನ ಚಿತ್ರಗಳಲ್ಲಿ ನಟಿಸಿ ದಾಖಲೆ ನಿರ್ಮಿಸಿರುವ ಡಾ. ರಾಜಕುಮಾರ್ ಅವರ ಪ್ರತಿಯೊಂದು ಸಿನಿಮಾಗಳೂ ಸಮಾಜಕ್ಕೆ ಒಂದೊಂದು ಜೀವನ ಸಂದೇಶ ನೀಡುವ ಜನೋಪಯೋಗಿ ಚಿತ್ರಗಳೇ ಆಗಿವೆ. ಕಾಯಕದ ಮಹತ್ವ ಸಾರುವ 'ಬಂಗಾರದ ಮನುಷ್ಯ', ಕುಡಿತದ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸುವ 'ಜೀವನ ಚೈತ್ರ' ಮುಂತಾದ ಸಿನಿಮಾಗಳು ಡಾ.ರಾಜ್ ನಟನೆಯಲ್ಲಿ ತೆರೆಗೆ ಬಂದ ಮೇಲಂತೂ ನಮ್ಮ ಸಮಾಜದಲ್ಲಿ ಅನೇಕ ಬದಲಾವಣೆಗಳಾಗಿವೆ. ಜನಪರ ಕಾಳಜಿಯುಳ್ಳ ಒಬ್ಬ ಶ್ರೇಷ್ಠ ನಟ ತಮ್ಮ ನಟನೆಯ ಚಲನ ಚಿತ್ರಗಳಿಂದ ಸಮಾಜವನ್ನು ಪರಿವರ್ತನೆ ಮಾಡಬಲ್ಲ ಎಂಬುದಕ್ಕೆ ರಾಜ್ ಕುಮಾರ್ ರವರು ಕಣ್ಣ ಮುಂದಿನ ಸಾಕ್ಷಿಗಲ್ಲಿನಂತಿದ್ದರೆಂದು ಹೇಳಿದ ಬನ್ನೂರು ರಾಜು ಅವರು, ರಾಜ್ ಕುಮಾರ್ ರವರು ತಮ್ಮ ನಟನೆ ಮತ್ತು ಬದುಕಿನ ರೀತಿಯಿಂದ ಎಲ್ಲರಿಗೂ ಮಾದರಿಯಾಗಿದ್ದರೆಂದು ತಿಳಿಸಿದರು.

ಇದಕ್ಕೂ ಮುನ್ನ ಸಂಸ್ಕೃತಿ ಚಿಂತಕ ಡಾ.ಕೆ.ರಘು ರಾಮ್ ವಾಜಪೇಯಿ ಅವರು ಡಾ.ರಾಜ್ ಕುಮಾರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು, ನಮ್ಮ ಕರ್ನಾಟಕ ರತ್ನ ಡಾ.ರಾಜ್ ಕುಮಾರ್ ಅವರ ಕಲಾಸೇವೆಗೆ ಎಂದೋ ಭಾರತ ರತ್ನ ಪ್ರಶಸ್ತಿ ಬರಬೇಕಿತ್ತು. ಆದರೆ ಅವರು ಬದುಕಿದ್ದಾಗಲಂತೂ ಬರಲಿಲ್ಲ. ಹಾಗಾಗಿ ಈಗಲಾದರೂ ನಮ್ಮ ಕೇಂದ್ರ ಸರ್ಕಾರ ಮರಣೋತ್ತರವಾಗಿ ಡಾ.ರಾಜ್ ಕುಮಾರ್ ಅವರಿಗೆ ಭಾರತರತ್ನ ಪ್ರಶಸ್ತಿ ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಖ್ಯಾತ ರಂಗಕರ್ಮಿ ರಾಜಶೇಖರ ಕದಂಬ ಅವರನ್ನು ಅಭಿನಂದಿಸಿ ಸನ್ಮಾನಿಸಲಾಯಿತು. ಶ್ರೀಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವ ರಾಜೇಂದ್ರಸ್ವಾಮಿ ಅವರು ಪ್ರಾರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿದರು. ಮೈಸೂರು ಜಿಲ್ಲಾ ಚಿನ್ನ ಬೆಳ್ಳಿ ಕೆಲಸಗಾರರ ಅಭಿವೃದ್ಧಿ ಸಂಘದ ಅಧ್ಯಕ್ಷ ಲಯನ್ ಟಿ. ಸುರೇಶ್ ಹಾಗೂ ಪದ್ಮಶ್ರೀ ಜೈನ ಮಹಿಳಾ ಸಮಾಜದ ಅಧ್ಯಕ್ಷೆ ಲತಾ ಸುದರ್ಶನ್ ಅವರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮ ಕುರಿತು ಮಾತನಾಡಿದರು. ಅನೇಕ ಮಂದಿ ಡಾ.ರಾಜ್ ಕುಮಾರ್ ಅಭಿಮಾನಿಗಳು ಭಾಗವಹಿಸಿದ್ದರಲ್ಲದೆ ಎಲ್ಲರೂ ರಾಜಕುಮಾರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

## ಯದುವೀರ್ ಗೆಲುವು ನಿಶ್ಚಿತ: ನಾಗೇಂದ್ರ ವಿಶ್ವಾಸ

ಮೈಸೂರು: ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಹುಮತದಿಂದ ಗೆಲುವು ಸಾಧಿಸುವುದು ನಿಶ್ಚಿತ ಎಂದು ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ವಿಶ್ವಾಸ ವ್ಯಕ್ತಪಡಿಸಿದರು. ಎರಡೂ



ಜಿಲ್ಲೆಗಳ ಜನರು ಸ್ವಯಂ ಪ್ರೇರಣೆ ಹಾಗೂ ಉತ್ಸಾಹದಿಂದ ಮತ ಚಲಾಯಿಸಿದ್ದಾರೆ. ಅಲ್ಲದೆ ಎಲ್ಲರ ಬಾಯಲ್ಲೂ ಯದುವೀರ್ ಅವರ ಹೆಸರು ಕೇಳಿ ಬರುತ್ತಿದೆ. ಇದನ್ನು ಗಮನಿಸಿದರೆ ಬಿಜೆಪಿ ಗೆಲುವು ಸಾಧಿಸುವುದರಲ್ಲಿ ಅನುಮಾನವಿಲ್ಲ ಎಂದು ಹೇಳಿದರು. ಪಕ್ಷದ ಕಾರ್ಯಕರ್ತರು ಹಾಗೂ ಮುಖಮಡರು ಅಭ್ಯರ್ಥಿ ಗೆಲುವಿಗೆ ಹಗಲಿರುಳು ಶ್ರಮಿಸಿದ್ದಾರೆ. ಜತೆಗೆ ಜೆಡಿಎಸ್ ಕಾರ್ಯಕರ್ತರು ಹಾಗೂ ಮುಖಂಡರು ಇದಕ್ಕೆ ಸಾಥ್ ನೀಡಿರುವುದು ಮತ್ತಷ್ಟು ಬಲ ಬಂದಂತಾಗಿದೆ. ಎರಡೂ ಪಕ್ಷಗಳ ಕಾರ್ಯಕರ್ತರು ಒಗ್ಗಟ್ಟಿನಿಂದ ಶ್ರಮ ವಹಿಸಿದ್ದು, ಪೂರಕವಾದ ವಾತಾವರಣ ನಿರ್ಮಾಣವಾಗಲು ಸಾಧ್ಯವಾಯಿತು. ಇದರಿಂದ ದೊಟ್ಟ ಮಟ್ಟದ ಗೆಲುವಿಗೆ ಸಹಕಾರಿಯಾಯಿತು ಎಂದು ಅಭಿಪ್ರಾಯಪಟ್ಟಿದ್ದಾರೆ. ಅಭ್ಯರ್ಥಿ ಯದುವೀರ್ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಇಡೀ ಕ್ಷೇತ್ರವನ್ನು ಸುತ್ತಿದ್ದಾರೆ. ಅಲ್ಲದೆ, ಸಾರ್ವಜನಿಕರೊಂದಿಗೆ ಅವರು ಬೆರೆಯುತ್ತಿದ್ದ ರೀತಿ ಎಲ್ಲರನ್ನೂ ಆಶ್ಚರ್ಯ ಚಕಿತರನ್ನಾಗಿಸಿದೆ. ರಾಜಮನೆತನದವರು ಕೈಗೆ ಸಿಗುವುದಿಲ್ಲ ಎಂಬ ವಿರೋಧ ಪಕ್ಷದವರ ಹೇಳಿಕೆಯನ್ನು ಯದುವೀರ್ ಸುಳ್ಳಾಗಿಸಿದ್ದು, ಸಾಮಾನ್ಯರಲ್ಲಿ ಸಾಮಾನ್ಯರಾಗಿ ಜನರೊಂದಿಗೆ ಮತ ಕೇಳಿದ್ದು, ಸಾರ್ವಜನಿಕ ವಲಯದಿಂದ ಮೆಚ್ಚುಗೆ ವ್ಯಕ್ತವಾಗಿದೆ ಎಂದು ಅಭಿಪ್ರಾಯ ಪಟ್ಟರು.

## ನಾಯಿಯನ್ನು ಹೊತ್ತೊಯ್ದು ಚಿರತೆ

ಪಾಂಡವಪುರ: ತಾಲೂಕಿನ ಕನಗನಹಳ್ಳಿಯಲ್ಲಿ ನಾಯಿಯೊಂದನ್ನು ಹೊತ್ತೊಯ್ದು ಚಿರತೆ ತಿಂದು ಹಾಕಿರುವ ಘಟನೆ ವರದಿಯಾಗಿದೆ. ಶನಿವಾರ ಮುಂಜಾನೆ 3.30 ಗಂಟೆ ಸುಮಾರಿನಲ್ಲಿ ನಾಯಿಯನ್ನು ಚಿರತೆ ಹಿಡಿದು ಸ್ವಲ್ಪ ದೂರ ಎಳೆದೊಯ್ದು ತಿಂದು ಹಾಕಿರುವ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿದೆ. ಮೈಸೂರು– ಕೆ.ಆರ್.ಪೇಟೆ ಮುಖ್ಯ ರಸ್ತೆಯಲ್ಲಿರುವ ಅಂಗಡಿಯೊಂದರ ಮುಂದೆ ಅಳವಡಿಸಿರುವ ಸಿಸಿ ಕ್ಯಾಮೆರಾದಿಂದ ಚಿರತೆ ಇರುವುದು ಧೃಡಪಟ್ಟಿದೆ. ಅಲ್ಲದೆ ಶನಿವಾರ ಸಂಜೆ 6 ಗಂಟೆ ಸುಮಾರಿನಲ್ಲಿ ಜಮೀನಿನ ಬಳಿ ತೆರಳಿದ್ದ ರೈತರಿಗೆ ಚಿರತೆ ಕಾಣಿಸಿಕೊಂಡು ಜೀವಭಯ ಹುಟ್ಟಿಸಿದೆ. ಕಳೆದ ಒಂದು ತಿಂಗಳಿನಿಂದ ಗ್ರಾಮದ ಅಸುಪಾಸಿನಲ್ಲಿ ಕಾಣಿಸಿಕೊಂಡಿರುವ ಚಿರತೆ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ನೀಡಿದರೂ ಪ್ರಯೋಜನವಾಗಿಲ್ಲ. ಈ ಕೂಡಲೇ ಅರಣ್ಯ ಇಲಾಖಾಧಿಕಾರಿಗಳು ಬೋನು ಇರಿಸಿ ಚಿರತೆ ಹಿಡಿಯುವಂತೆ ಗ್ರಾಮಸ್ಥರು ಮನವಿ ಮಾಡಿದ್ದಾರೆ.

## ನೇಹಾ ಬದಲು ಮುಸ್ಲಿಂ ಸಾವಾಗಿದ್ರೆ ಸಿಎಂ ಹೆಲಿಕಾಪ್ಟರ್ ಇಳಿಸ್ತಿದ್ರು

ಕಲಬುರಗಿ: ಹುಬ್ಬಳ್ಳಿಯಲ್ಲಿ ನೇಹಾ ಬದಲು ಮುಸ್ಲಿಂ ಯಾರಾದ್ರೂ ಸಾವಾಗಿದ್ರೆ ಸಿಎಂ ಸಿದ್ದರಾಮಯ್ಯ ಹಾಗೂ ಅವರಟೀಂಅಲ್ಲಿ ಹೆಲಿಕಾಪ್ಟರ್ ಇಳಿಸುತ್ತಿದ್ದರು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.



ಚಿತ್ತಾಪೂರತಾಲೂಕಿನ ವಾಡಿ ಪಟ್ಟಣದಲ್ಲಿ ಬಿಜೆಪಿ ಸಮಾವೇಶದಲ್ಲಿ ಮಾತನಾಡಿದಅವರು, ಹುಬ್ಬಳ್ಳಿಯಲ್ಲಿ ನೇಹಾ ಹತ್ಯೆಯಾದಾಗ, ಯಾದಗಿರಿಯಲ್ಲಿದಲಿತಯುವಕನ ಹತ್ಯೆಯಾದಾಗರಾಹುಲ್‌ಗಾಂಧಿ ಬರಬೇಕಿತ್ತು. ಅದೇ ಮುಸ್ಲಿಮರ ಕೊಲೆಯಾಗಿದ್ರೆಜಿಗಿದು ಬರುತ್ತಿದ್ದರು.ಮುಂದಿನ ಐದು ವರ್ಷ ಭಾರತ ಸದೃಢವಾಗಿರಬೇಕೆಂದರೆ ನಾವು ಕಡ್ಡಾಯವಾಗಿ ಮತದಾನ ಮಾಡಬೇಕು.ಇಲ್ಲದಿದ್ದರೆದೇಶ ಭಯೋತ್ಪಾದಕರ ಕೈಗೆ ಹೋಗಲಿದೆ.ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಕಾರ್ಯಕರ್ತನನ್ನ ಬಹಿರಂಗವಾಗಿ ನೇಣಿಗೆ ಹಾಕಲಾಗಿದೆ.ನಾವು ಹಿಂದೂಗಳು ಒಂದಾಗದಿದ್ದರೆ ಭಾರತ ಸುರಕ್ಷಿತವಾಗಿರಲು ಸಾಧ್ಯವಿಲ್ಲ ಎಂದಿದ್ದಾರೆ. ಕೊರೊನಾ ಸಮಯದಲ್ಲಿ ಲಸಿಕೆ ಕಂಡುಹಿಡಿಯಲು ಮೋದಿ ಕಾರಣ.ಆ ಸಂದರ್ಭದಲ್ಲಿ ಡಿಕೆಶಿ ಹಾಗೂ ಸಿದ್ದರಾಮಯ್ಯ ಬಂದು ಮೋದಿ ಲಸಿಕೆ ಹಾಕಿಸಿಕೊಳ್ಳಬೇಡಿ ಎಂದುಅಪಪ್ರಚಾರ ಮಾಡಿದ್ದರು. ಬಳಿಕ ಅವರು ಲಸಿಕೆ ಹಾಕಿಸಿಕೊಂಡ್ರು.ಇವರ ಮಾತು ಕೇಳಿ ಎಷ್ಟೋಜನ ಲಸಿಕೆ ಪಡೆಯದೇ ಪ್ರಾಣತೆತ್ತರುಎಂದುಅವರು ಆರೋಪಿಸಿದ್ದಾರೆ. 50 ವರ್ಷಗಳಿಂದ ಗರೀಬಿ ಹಟಾವೋಎನ್ನುತ್ತಿದ್ದೀರಿ. ಆದರೆಗರೀಬಿ ಹಟಾವೋಆಗಿಲ್ಲ. ನಮ್ಮ ನಡುವೆಯೇಇದ್ದು ಪಾಕ್ ಗೆಜಿಂದಾಬಾದ್‌ಕೂಗುತ್ತಾರೆ.ನಾವು ಹಿಂದೂಗಳು ಒಂದಾಗದೇಇದ್ದರೆ, ನಮ್ಮದೇಶ ಪಾಕಿಸ್ತಾನ ಮಯವಾಗುತ್ತದೆ.ದೇಶದಲ್ಲಿ ಲವ್ ಜಿಹಾದ್ ನಡೀತಿದೆ.ದೇಶವನ್ನುಇಸ್ಲಾಂರಾಷ್ಟ್ರ ಮಾಡಲು ಪಿಎಫ್ಐ ಹೊಂಚು ಹಾಕಿದೆಎಂದುಅವರುಕಿಡಿಕಾರಿದ್ದಾರೆ.

## ಮೋದಿ ಕಾರ್ಯಕ್ರಮಕ್ಕೆ ಮುತ್ತಿಗೆ ಯತ್ನ

ದಾವಣಗೆರೆ: ಮೋದಿ ಕಾರ್ಯಕ್ರಮ ಸ್ಥಳಕ್ಕೆ ಮುತ್ತಿಗೆ ಹಾಕಲು ಎನ್‌ಎಸ್‌ಯುಐ ಯತ್ನಿಸಿದ ಘಟನೆದಾವಣಗೆರೆಯಅಂಬೇಡ್ಕರ್



ಸರ್ಕಲ್‌ನಲ್ಲಿ ನಡೆದಿದೆ. ಎನ್ ಎಸ್‌ಯುಐ ಸಂಘಟನೆಯಿಂದ ಮೋದಿಗೆ ಚೊಂಬು ಪ್ರದರ್ಶನಕ್ಕೆ ಯತ್ನಿಸಿದ್ದು, ಅಂಬೇಡ್ಕರ್ ಸರ್ಕಲ್ ನಲ್ಲಿ ಪ್ರತಿಭಟನೆ ನಡೆಸಿದ್ದಾರೆ.ಖಾಲಿ ಚೊಂಬು ಪೋಸ್ಟರ್ ಪ್ರದರ್ಶನ ಮಾಡುತ್ತಾ ಪ್ರತಿಭಟನೆ ನಡೆಸಿದ್ದಾರೆ. ಪ್ರಧಾನಿ ಮೋದಿ ದಾವಣಗೆರೆಗೆ ಆಗಮಿಸುವ ಹಿನ್ನೆಲೆಗೋಬ್ಯಾಕ್ ಮೋದಿ ಎಂದುಎನ್‌ಎಸ್ ಯುಐಕಾರ್ಯಕರ್ತರು ಧಿಕ್ಕಾರಕೂಗಿದ್ದಾರೆ.ಸದ್ಯ ಪ್ರತಿಭಟನೆ ನಡೆಸಿ ಗದ್ದಲ ಎಬ್ಬಿಸಿದ ಎನ್‌ಎಸ್‌ಯುಐಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದುಕರೆದೊಯ್ದಿದ್ದಾರೆ.

## ಉತ್ತರದಲ್ಲಿಯೂ ಮೈತ್ರಿ ಪಕ್ಷ ಸೋಲಿಸಿ ಅಭಿಯಾನ



**ಮೈಸೂರು:** ಕೇಂದ್ರ ಬಿಜೆಪಿಯ ರೈತ ವಿರೋಧೀ ಧೋರಣೆ ಖಂಡಿಸಿ ರಾಜ್ಯ ರೈತ ಸಂಘ ಚುನಾವಣೆ ವೇಳೆ ಬಿಜೆಪಿ ಮೈತ್ರಿ ಪಕ್ಷ ಸೋಲಿಸಿ, ರೈತರನ್ನು ಉಳಿಸಿ ಎಂಬ ಅಭಿಯಾನವನ್ನು ಉತ್ತರದಲ್ಲಿಯೂ ಮುಂದುವರೆಸುವುದಾಗಿ ರಾಜ್ಯ ರೈತಸಂಘದ ಅಧ್ಯಕ್ಷ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳಿದರು.

ನಮ್ಮ ಅಭಿಯಾನದ ಅಂಗವಾಗಿ ಮೊದಲನೇ ಹಂತದ ಚುನಾವಣೆ ವೇಳೆ ಸುಮಾರು ಶೇ.4 ರಷ್ಟು ರೈತರ ಮತಗಳು ಮೈತ್ರಿ ಪಕ್ಷ ವಿರುದ್ಧವಾಗಿ ಚಲಾವಣೆ ಆಗಿರುವ ಸಾಧ್ಯತೆ ಇದೆ. ಇದೇ ರೀತಿ ಎರಡನೇ ಹಂತದಲ್ಲಿಯೂ ಉತ್ತರ ಕರ್ನಾಟಕದಲ್ಲಿಯೂ ರೈತ ಸಂಘ ಅಭಿಯಾನ ಮುಂದುವರಿಸಲಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಸುಪ್ರೀಂಕೋರ್ಟ್ ಮೊರೆ ಹೋದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ 3454 ಕೋಟಿ ಬರ ಪರಿಹಾರ ಬಿಡುಗಡೆಗೊಳಿಸಿದೆ. ಆದರೆ ನಾವು ಕೇಳಿದ್ದುದು ಸುಮಾರು 18 ಸಾವಿರ ಕೋಟಿ. ಹೀಗಾಗಿ ಈಗ ಭಿಕ್ಷೆ ರೂಪದಲ್ಲಿ ಪರಿಹಾರ ನೀಡಲಾಗಿದೆ. ಆದ್ದರಿಂದ ರಾಜ್ಯ ಸರ್ಕಾರ ಕೇಂದ್ರದ ವಿರುದ್ಧ ನ್ಯಾಯಾಲಯದಲ್ಲಿನ ಹೋರಾಟ ಮುಂದುವರಿಸಬೇಕೆಂದು ರಾಜ್ಯ ರೈತ ಸಂಘ ಆಗ್ರಹಿಸುತ್ತಿರುವುದಾಗಿ ಹೇಳಿದರು.

ಬರಗಾಲದ ಕಾರಣ ಪಂಪ್‌ಸೆಟ್ ಆಧರಿಸಿ ಕೃಷಿ ಮಾಡುವವರಿಗೆ ಸಮರ್ಪಕ ವಿದ್ಯುತ್ ಸರಬರಾಜು ಮಾಡುತ್ತಿಲ್ಲ. ಇದರೊಡನೆ ವಿದ್ಯುತ್ ಸಂಪರ್ಕದ ಶುಲ್ಕ ಸುಮಾರು 28 ಸಾವಿರ ಇದ್ದುದನ್ನು ಎರಡೂವರೆ ಲಕ್ಷಕ್ಕೆ ಏರಿಸಲಾಗಿದೆ. ಈ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದು ಎಂದರು.

ಇದೇ ವೇಳೆ ಸಂಸದ ಪ್ರಜ್ವಲ್ ರೇವಣ್ಣ ಸೇರಿ ಹಲವರು ತಮ್ಮ ಸ್ಥಾನ ಕಳೆದುಕೊಳ್ಳಲಿದ್ದಾರೆಂದು ಭವಿಷ್ಯ ನುಡಿದರು. ಪದಾಧಿಕಾರಿಗಳಾದ ನೇತ್ರಾವತಿ, ಹೊಸೂರು ಕುಮಾರ್, ಪಿ. ಮರಂಕಯ್ಯ, ಕಲ್ಲಹಳ್ಳಿ ಜಯಣ್ಣ, ಹೊಸಕೋಟೆ ಬಸವರಾಜ ಇದ್ದರು.

## ಇವಿಎಂ ಕೊಠಡಿಗೆ 3 ಹಂತದ ಭದ್ರತೆ

**ಮೈಸೂರು:** ಮೈಸೂರು-ಕೊಡುಗು ಲೋಕಸಭಾ ಕ್ಷೇತ್ರದ ಸಾರ್ವತ್ರಿಕ ಚುನಾವಣೆ ಶಾಂತಿಯುತವಾಗಿ ಮುಗಿದಿದ್ದು, ಮೊಹರಾದ ಇವಿಎಂ, ವಿವಿ ಪ್ಯಾಟ್ ಹಾಗೂ ಸಂಬಂಧಿಸಿದ ಕಾಗದಪತ್ರಗಳನ್ನು ಇಲ್ಲಿನ ಪಡುವಾರಹಳ್ಳಿಯಲ್ಲಿರುವ ಮಹಾರಾಣಿ ನಿರ್ವಹಣಾ ಕಾಲೇಜಿನಲ್ಲಿ ಸಂಗ್ರಹಿಸಲಾಗಿದೆ.

ಚುನಾವಣಾ ಸಿಬ್ಬಂದಿ ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡರು. ಮತಯಂತ್ರಗಳನ್ನು ಸಂಗ್ರಹಿಸಿರುವ ಭದ್ರತಾ ಕೊಠಡಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಹಾಗೂ ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಮತಯಂತ್ರಗಳನ್ನು ಇಟ್ಟಿರುವ ಭದ್ರತಾ ಕೊಠಡಿಗೆ ಮೂರು ಹಂತದ ಭದ್ರತೆ ಒದಗಿಸಲಾಗಿದೆ. ಮೊದಲ ಹಂತದಲ್ಲಿ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ ತುಕಡಿ, 2ನೇ ಹಂತದಲ್ಲಿ ಕರ್ನಾಟಕ



ಸಶಸ್ತ್ರ ಮೀಸಲು ಪಡೆ ಹಾಗೂ 3ನೇ ಹಂತದಲ್ಲಿ ಸ್ಥಳೀಯ ಸಿವಿಲ್ ಪೊಲೀಸ್ ಸಿಬ್ಬಂದಿಯನ್ನು ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿದೆ. ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿ ನಿಗಾ ವಹಿಸಲಾಗಿದೆ? ಎಂದು ರಾಜೇಂದ್ರ ತಿಳಿಸಿದರು. ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ. ಮುತ್ತುರಾಜ್, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಮಹೇಶ್ ಪಾಲ್ಗೊಂಡಿದ್ದರು.

### ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ್ ಭರವಸೆ

# ನೂರಕ್ಕೆ ನೂರು ಗೆಲುವು

ಮೈಸೂರು: ಮತದಾರರು ನಮ್ಮ ಪರವಾಗಿ ಮತದಾನ ಮಾಡಿದ್ದಾರೆ ಎಂಬ ವಿಶ್ವಾಸ ಇದೆ. ಈ ಬಾರಿ ಶೇ 100 ಗೆಲುವಿನ ವಿಶ್ವಾಸ ಇದೆ ಎಂದು ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಹೇಳಿದರು.

ಮೈಸೂರು ನಗರ ಕಾಂಗ್ರೆಸ್ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಮೈಸೂರು ಕೊಡಗು ಮತದಾರರಿಗೆ ಅಭಿನಂದನೆ ಸಲ್ಲಿಸುತ್ತೇನೆ. 21ಲಕ್ಷ ಮತದಾರರ ಪೈಕಿ 14.15 ಲಕ್ಷ ಮತದಾರರು ಮತದಾನ ಮಾಡಿದ್ದಾರೆ. ಇಷ್ಟು ಬಿಸಿಲಿದ್ದರೂ ಕೂಡ ಹೆಚ್ಚಿನ ಮತದಾನ ಮಾಡಿದ್ದಾರೆ. ಕಾಂಗ್ರೆಸ್ ಪಕ್ಷದ ವತಿಯಿಂದ ಎಲ್ಲರಿಗೂ ಧನ್ಯವಾದಗಳನ್ನ ತಿಳಿಸುತ್ತೇನೆ. ಇದರ ಜೊತೆಗೆ ಜಿಲ್ಲಾ ಚುನಾವಣಾ ಅಧಿಕಾರಿಗಳು, ಸಿಬ್ಬಂದಿಗಳು ಭದ್ರತಾ ಸಿಬ್ಬಂದಿಗಳಿಗೂ ಧನ್ಯವಾದಗಳನ್ನ ತಿಳಿಸುತ್ತೇನೆಂದರು.

ನಾನು ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿದ್ದರೂ ನನ್ನ ಗುರ್ತಿಸಿ ನಮ್ಮ ಪಕ್ಷದ ವರಿಷ್ಠರು ನನಗೆ ಟಿಕೇಟ್ ಕೊಟ್ಟರು. ಇದಕ್ಕೆ ನಾನು ಆಭಾರಿಯಾಗಿದ್ದೇನೆ. ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಉಪಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನ ತಿಳಿಸುತ್ತೇನೆ. ನಾನು ಸಾಯುವವರೆಗೂ ಇಂತಹದೊಂದು ಅವಕಾಶವನ್ನು ಕೊಟ್ಟಿದ್ದನ್ನು ಸ್ಮರಿಸಿಕೊಳ್ಳುತ್ತೇನೆಂದರು.

ನಮಗೇನು ರಿಲ್ಯಾಕ್ಸ್ ಮೂಡು ಅಂತೇನು ಇಲ್ಲ. ಎರಡು ದಿನ ಕುಟುಂಬದ ಜತೆ ಹೊರಗಡೆ ಹೋಗಿ ಬರುತ್ತೇನೆ. ಅನಂತರ ಉಳಿದ ಚುನಾವಣಾ ಕ್ಷೇತ್ರಗಳಲ್ಲಿ ಪ್ರಚಾರಕ್ಕೆ ಹೋಗುತ್ತೇನೆ. ಬಿಜೆಪಿಯವರು ಸಾಕಷ್ಟು ಸರ್ಕಸ್ ಮಾಡಿದರು.

ಹಾಲಿ ಸಂಸದರನ್ನು ಹೊರದಬ್ಬಿ, ಚುನಾವಣೆಗೆ ನಿರಾಸಕ್ತಿ ತೋರಿದ್ದ ಯದುವೀರ್ ಅವರನ್ನ ಕಣಕ್ಕಿಳಿಸಿದರು. ಯದುವೀರ್ ಬಹುಶಃ ಬಿಜೆಪಿ ಸದಸ್ಯತ್ವ ಕೂಡ ಆಗಿರಲಿಲ್ಲ. ಈಗ ಕೊಟ್ಟಿರಬಹುದು. ಅಂತವರನ್ನು ತಂದು ನಿಲ್ಲಿಸಿದರು. ಬಹಳ ಅದ್ಬುತವಾಗಿ ಚುನಾವಣೆ ನಡೆದಿದೆ. ನಾವು ಯಾರಿಗೂ ಕಿಂಚಿತ್ತು ಚ್ಯುತಿ ಬಾರದಂತೆ ನಡೆದುಕೊಂಡಿದ್ದೇವೆಂದರು.



ಬಿಜೆಪಿಯವರು ಮೈಸೂರಲ್ಲಿ ಬೃಹತ್ ಸಮಾವೇಶ ಮಾಡಿದರೂ ಪ್ರಧಾನಿ ನರೇಂದ್ರಮೋದಿ ಅವರು ಮೈಸೂರಿಗೆ ಆಗಮಿಸಿ 47 ನಿಮಿಷ ಮಾತನಾಡಿದರು. ಇದರಲ್ಲಿ 37 ನಿಮಿಷ ಕಾಂಗ್ರೆಸ್ ಟೀಕಿಸಿದ್ದಾರೆಯೇ ಹೊರತು 10 ವರ್ಷ ಏನೂ ಕೊಟ್ಟಿದ್ದೇವೆ. ದೇಶಕ್ಕೆ ಹಾಗೂ ಮೈಸೂರಿಗೆ ತಮ್ಮ ಕೊಡುಗೆ ಏನೆಂಬುದನ್ನು ಹೇಳಿಲ್ಲ. ಕಾಂಗ್ರೆಸ್ ನ್ನು ಸಾಕಷ್ಟು ಟೀಕೆ ಮಾಡಿದ್ದಾರೆ. ಇಷ್ಟೇ ಅವರ ಸಾಧನೆ ಎಂದು ಹೇಳಿದರು.

ಎಲ್ಲರೂ ನನ್ನ ಪರವಾಗಿ ಮತ ಹಾಕಿದ್ದಾರೆ. ಅದರಲ್ಲೂ ಅಲ್ಪಸಂಖ್ಯಾತರು ನಮ್ಮ ಪರ ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿದ್ದಾರೆ ಅವರಿಗೂ ಧನ್ಯವಾದಗಳನ್ನು ತಿಳಿಸುತ್ತೇನೆ. ಎಂಟು ಕ್ಷೇತ್ರದಲ್ಲಿ ಐದು ಹಾಲಿ ಹಾಗೂ 3 ಮಾಜಿ ಶಾಸಕರು ನನ್ನ ಪರವಾಗಿ ದುಡಿದಿದ್ದಾರೆ. 20 ಬ್ಲಾಕ್ ಅಧ್ಯಕ್ಷರು, 72 ಮಂಚೂಣೆ ಘಟಕದ ಅಧ್ಯಕ್ಷರೆಲ್ಲರೂ ನನ್ನ ಪರವಾಗಿ ದುಡಿದಿದ್ದಾರೆ. ಅವರೆಲ್ಲರಿಗೂ ಅಭಿನಂದಿಸುತ್ತೇನೆಂದರು.

ನುಡಿದಂತೆ ನಡೆಯುವೆ: ಇನ್ನೂ ಕಾಂಗ್ರೆಸ್ ಪಂಚ ಗ್ಯಾರಂಟಿ ಹಾಗೂ ಸಿದ್ದರಾಮಯ್ಯ ನವರು ಜಿಲ್ಲೆಗೆ ಈ ಆರು ತಿಂಗಳಲ್ಲಿ ನೀಡಿರುವ 450 ಕೋಟಿ ರೂ. ಅನುದಾನದ ಬಗ್ಗೆ ಜನತೆಗೆ ತಿಳಿಸಿ ಮತ ಕೇಳಿದ್ದೇವೆ. ಪ್ರತಿಯೊಬ್ಬ ಕಾರ್ಯಕರ್ತರು ಮತದಾರರಿಗೆ ಗ್ಯಾರಂಟಿ ಕಾರ್ಡ್ ಅನ್ನು ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಈಗಾಗಲೇ ಕ್ಷೇತ್ರಕ್ಕೆ ಏನೂ ಮಾಡುತ್ತೇನೆಂಬುದನ್ನು ಪ್ರಣಾಳಿಕೆ ನೀಡಿದ್ದೇನೆ. ಮೈಸೂರು ಕೊಡಗಿನಲ್ಲಿ ಕಚೇರಿ ತೆರೆದು ಸ್ಥಳೀಯ ಶಾಸಕರ ಸಹಕಾರದೊಂದಿಗೆ 15 ದಿನ ಮೈಸೂರು, 15 ದಿನ ಕೊಡಗಿನಲ್ಲಿ ಜನರ ಸಮಸ್ಯೆ ಆಲಿಸುತ್ತೇನೆ. ನಿನ್ನೆ ಆರು ಕ್ಷೇತ್ರದಲ್ಲಿ 67ಕ್ಕೂ ಹೆಚ್ಚಿನ ಬೂತ್ ಗೆ ಭೇಟಿ ನೀಡಿದ್ದು, ಅಲ್ಲಿ ಜನತೆ ಕಾಂಗ್ರೆಸ್ ಪರವಾಗಿ ಮತ ಹಾಕಿದ ವಾತಾವರಣ ಕಂಡಿದ್ದು, ನೂರಕ್ಕೆ ನೂರು ನನ್ನ ಗೆಲುವು ನಿಶ್ಚಿತ ಎಂದರು.

ಮಾಜಿ ಸಂಸದರು ಕಳೆದ 25 ದಿನಗಳಿಂದ ನಾಪತ್ತೆಯಾಗಿದ್ದಾರೆ. ಫಲಿತಾಂಶದ ಬಳಿಕ ಅವರನ್ನು ಭೇಟಿ ಮಾಡಿ ಅಭಿನಂದನೆ ಸಲ್ಲಿಸುತ್ತೇನೆ. ನನ್ನನ್ನು ಟೀಕಿಸಿದ್ದು, ಸುಳ್ಳು ಹೇಳಿದ್ದೆ ಅವರ ಸಾಧನೆಯಾಗಿದೆ. ಒಕ್ಕಲಿಗನೇ ಅಲ್ಲ ಎಂದರೂ ಆದರೆ, ಹಾಲಿ ಶಾಸಕ ಹರೀಶ್ ಗೌಡ ನನ್ನ ಸಂಬಂಧಿ ಇದ್ದಾರೆ. ಹೊಸುಂಡಿ, ಕೆಜಿ ಕೊಪ್ಪಲಲ್ಲಿ ನನ್ನ ಬಳಗವಿದ್ದು, ವಿಚಾರಿಸಿ ಕೇಳಿಕೊಳ್ಳಿ. ಎರಡು ಬಾರಿ ಒಕ್ಕಲಿಗರ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿ ನಾಲ್ಕು ಮತಗಳ ಅಂತರದಿಂದ ಸೋತಿದ್ದೇನೆ. ಒಕ್ಕಲಿಗ ಸಂಘ ಸೇರಿ ದಲಿತ, ಮುಸ್ಲಿಂ, ಲಿಂಗಾಯತ, ಬ್ರಾಹ್ಮಣ ಸೇರಿ ಎಲ್ಲಾ ಸಮುದಾಯದವರು ನನಗೆ ಮತ ನೀಡಿದ್ದು, ಅವರೆಲ್ಲರ ಪರವಾಗಿ ಮುಂದೆ ದುಡಿಯುತ್ತೇನೆಂದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಜಿಲ್ಲಾ ಮಾಧ್ಯಮ ವಕ್ತಾರ ಕೆ.ಮಹೇಶ್, ಒಬಿಸಿ ಘಟಕದ ಅಧ್ಯಕ್ಷ ಕೆ.ನಾಗೇಶ್ ಸೇರಿ ಇನ್ನಿತರರು ಉಪಸ್ಥಿತರಿದ್ದರು.

## ರಂಗಭೂಮಿ ಉಳಿವಿಗೆ ಪಣ ತೊಡಿ: ಕೆರೆಹಳ್ಳಿ ದೊರೆಸ್ವಾಮಿ

ಮೈಸೂರು: ರಂಗಭೂಮಿ ಕಲೆ ಉಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದು ರಂಗ ನಿರ್ದೇಶಕ ಕೆರೆಹಳ್ಳಿ ಬಿ.ದೊರೆಸ್ವಾಮಿ ಹೇಳಿದರು.

ಇಲ್ಲಿನ ಆಲನಹಳ್ಳಿ ಬಡಾವಣೆಯ ವಿನಾಯಕನ ದೇವಸ್ಥಾನದಲ್ಲಿ ಎನ್. ಆರ್.ವಲಯದ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ನಡೆಯುತ್ತಿರುವ ಮಕ್ಕಳ ಬೇಸಿಗೆ ಶಿಬಿರದಲ್ಲಿ ವೀರಶೈವ ಸಮಾನ ಮನಸ್ಕರ ಸ್ನೇಹ ಬಳಗದಿಂದ ಆಯೋಜಿಸಿದ್ದ ರಂಗಭೂಮಿ ಮಹತ್ವ, ಹಾಡುಗಾರಿಕೆ, ಅಭಿನಯ ವಿಷಯ ಕುರಿತು ಮಾತನಾಡಿದರು.

ಕಲೆ ಎಲ್ಲರನ್ನೂ ಕೈ ಬಿಸಿ ಕರೆಯುತ್ತದೆ. ಆದರೆ, ಕೆಲವರನ್ನ ಮಾತ್ರ ಆಯ್ಕೆ ಮಾಡುತ್ತದೆ. ಬದುಕಲ್ಲಿ ಕಲೆ ಅಳವಡಿಸಿಕೊಂಡರೆ ದುಶ್ಚಟಕ್ಕೆ ಬಲಿಯಾಗದೆ ನಡೆಯಬಹುದು. ಮಕ್ಕಳಲ್ಲಿ ರಂಗಭೂಮಿ ಕಲೆ, ಹಾಡುಗಾರಿಕೆ, ಅಭಿನಯ, ವಾಕ್ ಚಾತುರ್ಯ ಹಾಗೂ ಶ್ರದ್ಧೆ ಆಸಕ್ತಿ ಹೇಗಿರಬೇಕು ಎಂಬುದರ ಅರಿವು ಮೂಡಿಸಲು ಶಿಬಿರ ಪ್ರಯತ್ನಿಸುತ್ತಿದೆ. ಈ ಕ್ಷೇತ್ರದ ಉಳಿವಿಗೆ ಎಲ್ಲರ ಸಹಕಾರ ಅಗತ್ಯ ಎಂದರು.

ರಂಗಭೂಮಿ ನಿರ್ದೇಶಕ ಬೀರಿಹುಂಡಿ ಗೋವಿಂದರಾಜು, ರಂಗಕ್ಷೇತ್ರದ ಚಿಕ್ಕಹಳ್ಳಿ ಪುಟ್ಟಣ್ಣ, ಶಿವಬಸಪ್ಪ, ಸಕಹಳ್ಳಿ ಮಹದೇವಸ್ವಾಮಿ, ಹೊಸಕೋಟೆ ನಂದೀಶ್, ಕೆರೆಹಳ್ಳಿ ಲೋಹಿತ್, ಬಾಗಳಿ ಮಹೇಶ್, ಹೊಸಕೋಟೆ ಪ್ರಭುಸ್ವಾಮಿ, ಹೊಸಕೋಟೆ ಸುಂದ್ರಪ್ಪ, ಯೋಗ ಕ್ಷೇತ್ರದ ವಿಠಲ್ ರಾಜಣ್ಣ, ಸಂತೋಷ್, ಹನುಮಂತ್ ಇದ್ದರು.



## ಸಂಘ ಪರಿವಾರ ಎಂದಿಗೂ ಮೀಸಲಾತಿ ವಿರೋಧಿಸಿಲ್ಲ

ಹೈದರಾಬಾದ್: ಸಂಘ ಪರಿವಾರವು ಎಂದಿಗೂ ಮೀಸಲಾತಿಯನ್ನು ವಿರೋಧಿಸಿಲ್ಲ ಎಂದುಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ಶಿಕ್ಷಣ ಸಂಸ್ಥೆಯೊಂದರ ಕಾರ್ಯಕ್ರಮದಲ್ಲಿ



ಮಾತನಾಡಿದಅವರು, ಮೀಸಲಾತಿಎಲ್ಲಿಯವರೆಗೂಅಗತ್ಯವಿದೆಯೋಅಲ್ಲಿಯವರೆಗೆ ವಿಸ್ತರಿಸಬೇಕುಎಂಬುದು ಸಂಘದ ಅಭಿಪ್ರಾಯವಾಗಿದೆ ಎಂದಿದ್ದಾರೆ. ಮೀಸಲಾತಿ ವಿಚಾರದಲ್ಲಿ ಬಿಜೆಪಿ ಮತ್ತುಕಾಂಗ್ರೆಸ್ ನಡುವೆ ಮಾತಿನ ಚಕಮಕಿ ನಡೆಯುತ್ತಿದೆ.ಈ ಹಿನ್ನೆಲೆಯಲ್ಲಿ ಭಾಗವತ್‌ತಮ್ಮ ಹೇಳಿಕೆ ನೀಡಿದ್ದಾರೆ.ಸಮಾಜದಲ್ಲಿಅಗೋಚರವಾಗಿದ್ದರೂತಾರತಮ್ಯವಿದೆ ಎಂದಿದ್ದಾರೆ. ಸಮಾಜದಲ್ಲಿತಾರತಮ್ಯ ಇರುವವರೆಗೂ ಮೀಸಲಾತಿ ಮುಂದುವರಿಯಬೇಕು ಎಂದುಆರ್‌ಎಸ್‌ಎಸ್ ಮುಖ್ಯಸ್ಥ ಭಾಗವತ್ ಕಳೆದ ವರ್ಷ ನಾಗ್ಪುರದಲ್ಲಿ ಹೇಳಿದ್ದರು.ಆ ಹೇಳಿಕೆಯನ್ನು ಈಗ ಪುನರುಚ್ಚರಿಸಿದ್ದಾರೆ.

### ಜಿಲ್ಲಾ ಯುವ ಬರಹಗಾರರ ಬಳಗದ ಅಧ್ಯಕ್ಷ ಸತೀಶ್ ಜವರೇಗೌಡ ಅಭಿಪ್ರಾಯ

# ಸಾಹಿತ್ಯಕ್ಕೆ ತಾಯ್ತನದ ಗುಣವಿದೆ



**ಪಾಂಡವಪುರ :** ಸಾಹಿತ್ಯಕ್ಕೆ ತಾಯ್ತನದ ಗುಣವಿದ್ದು, ಮಾನವತೆ ಮತ್ತು ಸಮತೆಯ ಮೂಲಕ ಇಡೀ ಜಗತ್ತನ್ನು ಜೋಪಾನವಾಗಿ ಕಾಯುತ್ತಿದೆ ಎಂದು ಜಿಲ್ಲಾ ಯುವ ಬರಹಗಾರರ ಬಳಗದ ಅಧ್ಯಕ್ಷ ಹಾಗೂ ಸಾಹಿತಿ ಟಿ. ಸತೀಶ್ ಜವರೇಗೌಡ ಅಭಿಪ್ರಾಯಪಟ್ಟರು.

ಪಟ್ಟಣದ ವಿಜಯ ಶಿಕ್ಷಣ ಸಂಸ್ಥೆಗಳು ಡಾ. ಕೃಷ್ಣಕುಮಾರ್ ಸಭಾಂಗಣದಲ್ಲಿ ವಿದ್ಯಾ ಪ್ರಚಾರ ಸಂಘ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ವತಿಯಿಂದ ನಡೆದ ಗಾಂಧಿ ವ್ಯಕ್ತಿ ವಿಚಾರಗಳ ಪ್ರಸ್ತುತತೆ ಮತ್ತು ಯಶೋಧರಮ್ಮ ದಾಸಪ್ಪ ಸಂಸ್ಮರಣೆ ಕಾರ್ಯಕ್ರಮದಲ್ಲಿ ಕವಯತ್ರಿ ಸುಜಾತ ಕೃಷ್ಣ ಅವರ 'ಸ್ತ್ರೀ ಅಂದರೆ ಅಷ್ಟೇ ಸಾಕು' ಕವನ ಸಂಕಲನ ಕುರಿತು ಮಾತನಾಡಿದರು.

ಇಂದು ಕನ್ನಡದಲ್ಲಿ ಮಹಿಳಾ ಸಾಹಿತ್ಯ ಸಮೃದ್ಧವಾಗಿ ಬೆಳೆದಿದೆ. 'ಅಡುಗೆ ಮನೆಯ ಸಾಹಿತ್ಯ' ಎಂಬ ಹಣೆಪಟ್ಟಿ ಕಿತ್ತೆಸೆದು ಹೊಸ ಮತ್ತು ವೈವಿಧ್ಯಮಯ ಸಂವೇದನೆಗಳ ಮೂಲಕ ಕನ್ನಡ ಸಾಹಿತ್ಯವನ್ನು ಶಕ್ತವಾಗಿಸಿದ್ದಾರೆ. ಇಂತಹ ಮಹಿಳಾ ಸಾಹಿತ್ಯದಲ್ಲಿ ತಾಯ್ತನದ ಗುಣವಿರುವುದು ವಿಶೇಷ ಎಂದರು.ಕವಿಗೆ ಅನುಭವಗಳಿದ್ದರೆ ಸಾಲದು. ಈ ಅನುಭವಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವ ವಿಶೇಷ ಪ್ರತಿಭೆಯೂ ಇರಬೇಕು. ಹಾಗೆಯೇ ವರ್ತಮಾನದ ತಲ್ಲಣಗಳಿಗೆ, ಸಂಕಣಗಳಿಗೆ ಮುಖಾಮುಖಿಯಾಗಿ ಸಾಹಿತ್ಯ ರಚಿಸಬೇಕು. ಸಾಮಾಜಿಕ ರೋಗಗಳಾದ ಕೋಮುವಾದ, ಜಾತೀಯತೆ, ಭ್ರಷ್ಟಾಚಾರ, ಅತ್ಯಾಚಾರದ ವಿರುದ್ಧ ಸದಾ ದನಿಯೆತ್ತಬೇಕು ಎಂದು ಕರೆ ನೀಡಿದರು.

ಸುಜಾತ ಅವರ 'ಸ್ತ್ರೀ ಅಂದರೆ ಅಷ್ಟೇ ಸಾಕು' ಕೃತಿಯಲ್ಲಿ ಬದುಕಿನ ಹಲವು ಆಯಾಮಗಳನ್ನು ಹಿಡಿದಿಡಲಾಗಿದೆ. ಸಮಾಜದ ಸಮಸ್ಯೆಗಳು, ಪ್ರೀತಿ, ವಿರಹ, ಹಬ್ಬ, ರೈತ, ಪ್ರಕೃತಿ, ಬರ ಇತ್ಯಾದಿ ವಿಚಾರಗಳ ಕುರಿತು ಕವಿತೆಗಳ ರಚಿಸಿದ್ದಾರೆ. ಇಲ್ಲಿನ ಕವಿತೆಗಳು ಬದುಕು ಮತ್ತು ಸಮಾಜಕ್ಕೆ ಕನ್ನಡಿ ಹಿಡಿಯುತ್ತವೆ ಎಂದು ವಿಶ್ಲೇಷಿಸಿದರು.

ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್. ನಾಗರಾಜು ಉದ್ಘಾಟಿಸಿದರು. ಮೈಸೂರಿನ ಹೆಚ್.ಸಿ. ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆಯ ಅಧ್ಯಕ್ಷೆ ಸರೋಜಮ್ಮ ತುಳಸೀದಾಸ್ ಕವನ ಸಂಕಲನ ಲೋಕಾರ್ಪಣೆ ಮಾಡಿದರು. ವಿದ್ಯಾ ಪ್ರಚಾರಕಸಂಘದ ಕಾರ್ಯದರ್ಶಿ ಕೆ.ವಿ. ಬಸವರಾಜು ಅಧ್ಯಕ್ಷತೆ ವಹಿಸಿದ್ದರು. ಬೆಂಗಳೂರಿನ ಗಾಂಧಿ ಭವನದ ಗೌರವ ಕಾರ್ಯದರ್ಶಿ ಎಂ.ಸಿ. ನರೇಂದ್ರ, ಗಾಂಧಿವಾದಿ ಪ್ರೊ.ಜಿ.ಬಿ. ಶಿವರಾಜ್, ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ. ಕೃಷ್ಣಮೂರ್ತಿ, ಕೃತಿಕಾರ್ತಿ ಸುಜಾತ ಕೃಷ್ಣ ಉಪಸ್ಥಿತರಿದ್ದರು.

# ಸಹಾನುಭೂತಿ ಅಗತ್ಯ; ಡಾ.ಕೆ.ಎಂ.ಮಾದಪ್ಪ




ಮೈಸೂರು: ನರ್ಸಿಂಗ್ ವೃತ್ತಿಯ ಸಹಾನುಭೂತಿ ಮತ್ತು ಮಾನವೀಯ ಗುಣಗಳಿಲ್ಲದೆ ಮುಂದುವರೆಯುವುದು ಅಸಾಧ್ಯ. ಅಲ್ಲಿನ ಸವಾಲುಗಳನ್ನು ಎದುರಿಸಿ ಮುಂದುವರೆಯಬೇಕು ಎಂದು ಸಿಗ್ಮಾ ಫೌಂಡೇಷನ್ ಟ್ರಸ್ಟಿ ಡಾ.ಕೆ. ಎಂ.ಮಾದಪ್ಪ ತಿಳಿಸಿದರು.

ಸಿಗ್ಮಾ ನರ್ಸಿಂಗ್ ಹಾಗೂ ಅಲೈಡ್ ಆರೋಗ್ಯ ವಿಜ್ಞಾನ ಕಾಲೇಜು ಆಯೋಜಿಸಿದ್ದ ಪದವಿ ದಿನ ಮತ್ತು ಜ್ಯೋತಿ ಬೆಳಗಿಸುವ ಹಾಗೂ ಪ್ರತಿಜ್ಞೆ ಸ್ವೀಕಾರ ಕಾರ್ಯಕ್ರಮದಲ್ಲಿ ಮಾತನಾಡಿದರು

ಆರೋಗ್ಯ ರಕ್ಷಣೆಯಲ್ಲಿ ಶುಶ್ರೂಷಕಿಯರ ಪಾತ್ರ ಪ್ರಮುಖವಾದದ್ದು. ಸಂಸ್ಥೆಯ ಬೆಳವಣಿಗೆಯಲ್ಲಿ ಅವರ ಕೆಲಸಗಳೇ ಎದ್ದು ಕಾಣುತ್ತವೆ. ಜನರಿಗೆ ನೇರವಾಗಿ ಸಿಗುವುದರಿಂದ ನಿಮ್ಮ ಸೇವೆ ಹಾಗೂ ಪ್ರಾಮಾಣಿಕ ಕೆಲಸದಿಂದ ಅವರಲ್ಲಿ ಹೊಸ ಹುರುಪು ತರಬಹುದು. ಇತರೆ ವೃತ್ತಿಗಳಿಗಿಂತ ಭಿನ್ನವಾಗಿರುವ ನರ್ಸಿಂಗ್ ವೃತ್ತಿಯಲ್ಲಿ ಜನರಿಗೆ ಸೇವೆ ನೀಡಲು ಮುಂದಾಗಬೇಕು ಎಂದರು.

ಕಲಿಕೆ ಮುಗಿದರೆ ಜವಾಬ್ದಾರಿ ಮುಗಿಯುತ್ತದೆಂಬ ಭಾವನೆ ಬೇಡ. ಆ ಬಳಿಕವೇ ನಿಜವಾದ ಸವಾಲು ಆರಂಭವಾಗುವುದು. ವೃತ್ತಿಯ ಬಗ್ಗೆಬದ್ಧತೆಇರಿಸಿನಿಷ್ಠೆಹಾಗೂಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸಿದಾಗ ಸಂಬಂಧಿಸಿದ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಲು ಸಾಧ್ಯ. ನಗುಮುಖದ ಸೇವೆಯು ಈ ವೃತ್ತಿಯ ಪ್ರಮುಖ ಲಕ್ಷಣಗಳಲ್ಲಿ ಒಂದು. ನಿಮ್ಮ ಮಾತಿನ ಶೈಲಿ ಹಾಗೂ ಸೇವಾ ಕಾರ್ಯವು ಅವರ ಆರೋಗ್ಯ ಸುಧಾರಿಸುವಂತೆ ಮಾಡುತ್ತದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಆರ್. ಮಂಜುನಾಥ್ ಮಾತನಾಡಿ, ಇಲ್ಲಿ ಶಿಕ್ಷಣದೊಂದಿಗೆ ಶಿಸ್ತಿಗೂ ಮಹತ್ವ ನೀಡಲಾಗುತ್ತದೆ. ಅವರು ಸ್ವೀಕರಿಸುವ ಪರತಿಜ್ಞಾ ವಿಧಿಯ ಆಶಯವನ್ನು ಪಾಲಿಸಿದರೆ ವೃತ್ತಿಪರತೆ ಎತ್ತಿ ಹಿಡಿಯಲು ಸಾಧ್ಯ. ನರ್ಸಿಂಗ್ ಉದ್ಯೋಗದಲ್ಲಿ ನೀವು ಬದುಕು ರೂಪಿಸಿಕೊಳ್ಳುವುದಲ್ಲದೆ ಇತರರ ಜೀವ ಕಾಪಾಡುವ ಕಾರ್ಯವನ್ನೂ ಮಾಡಬಹುದು ಎಂದು ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ. ಕೆ.ರಮೇಶ್, ಮಂಡ್ಯ ಜಿಲ್ಲೆಯ ಶ್ರೀನಿವಾಸಪುರದ ಸ್ಯಾಂಜೋ ಆಸ್ಪತ್ರೆಯ ಆಡಳಿತಾಧಿಕಾರಿ ಜಾಸ್ಮಿನ್ ಮಾತನಾಡಿದರು.

# ಸಂಜೆ ಟಿಪ್ಸ್




## ರೇಡಿಯೊ ಸಿಟಿ, ಜಿಯೊಟಿವಿಯಲ್ಲಿ ಪ್ರಸಾರದ ಮೂಲಕ ಮನರಂಜನೆಯ ಮರು ವ್ಯಾಖ್ಯಾನ

ಉಜ್ವಲ ಸಂಗೀತ ಮತ್ತು ಆಕರ್ಷಕ ಕಾರ್ಯಕ್ರಮಗಳನ್ನು ಹೊಂದಿರುವ ರೇಡಿಯೊಸಿಟಿ ಜಿಯೊ ಟಿವಿಗೆ ಪ್ರವೇಶಿಸಿದೆ. ಈ ಮುಂಚೂಣಿಯ ಸಹಯೋಗವು ರೇಡಿಯೊ ಸಿಟಿಗೆ ಮಹತ್ವದ ಮೈಲಿಗಲ್ಲಾಗಿದ್ದು ಆರ್.ಸಿ. ಸ್ಟುಡಿಯೊ ಹೆಸರಿನಲ್ಲಿ ವಿಡಿಯೋ ಚಾನೆಲ್ ಪ್ರಾರಂಭಿಸಿದ ಮೊದಲ ರೇಡಿಯೊ ಸ್ಟೇಷನ್ ಆಗಿದೆ. ಜಿಯೊ ಟಿ.ವಿ.ಗೆ ಪ್ರವೇಶದಿಂದ ರೇಡಿಯೊ ಸಿಟಿ ವ್ಯಾಪ್ತಿಯು ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿದ್ದು ಜಾಹೀರಾತುದಾರರಿಗೆ ರಾಷ್ಟ್ರವ್ಯಾಪಿ ವೀಕ್ಷಕರೊಂದಿಗೆ ತೊಡಗಿಕೊಳ್ಳುವ ಮಿತಿಯಿರದ ಅವಕಾಶಗಳನ್ನು ನೀಡುತ್ತದೆ. ಈ ಸಹಯೋಗದ ಮೂಲಕ ರೇಡಿಯೊ ಸಿಟಿ ದೇಶಾದ್ಯಂತ ಇರುವ ಜಿಯೊಟಿವಿಯ ಅಪಾರ ವೀಕ್ಷಕರನ್ನು ತಲುಪಲು ಶಕ್ತವಾಗಲಿದೆ. ಜಿಯೊಟಿವಿ ಮೊಬೈಲ್ ಆಪ್ 200ಕ್ಕೂ ಹೆಚ್ಚು ಪ್ರಸಾರಕರಿಂದ 16ಕ್ಕೂ ಹೆಚ್ಚು ಭಾಷೆಗಳಲ್ಲಿ 12ಪ್ರಕಾರಗಳಲ್ಲಿ 1,000ಕ್ಕೂ ಹೆಚ್ಚು ಚಾನೆಲ್ ಗಳನ್ನು ಹೊಂದಿದೆ.

ಈ ಪ್ರಾರಂಭದ ಮೂಲಕ ರೇಡಿಯೊ ಸಿಟಿ ಯುವ, ಡಿಜಿಟಲಿ ಸನ್ನದ್ಧ ತಲೆಮಾರನ್ನು ತಲುಪಲಿದ್ದು ಅವರ ಸ್ಕ್ರೀನ್ ಆಕರ್ಷಣೆಯಿಂದ ರೇಡಿಯೊದತ್ತ ಆಸಕ್ತಿ ಹೆಚ್ಚಿಸಲಿದೆ. ಹೊಸ ಡಿಜಿಟಲ್ ಪ್ಲಾಟ್ ಫಾರಂ ಬಳಸಿಕೊಳ್ಳುವ ಮೂಲಕ ರೇಡಿಯೊ ಸಿಟಿ ಜೆನ್ ಝೀ ಅವರ ನಂಬಿಕೆಗಳನ್ನು ಬಿಂಬಿಸುವ ಮಹತ್ತರ ಕಂಟೆಂಟ್ ನೀಡಲಿದೆ. ಆರ್.ಸಿ. ಸ್ಟುಡಿಯೊ ಜಿಯೊಫೈಬರ್ ಮತ್ತು ಏರ್ ಫೈಬರ್ ಭಾಗವಾಗಿ ಜಿಯೊಟಿ.ವಿ+ ಮೂಲಕ ಕೂಡಾ ಲಭ್ಯವಿರುತ್ತದೆ.

ಈ ಕುರಿತು ರೇಡಿಯೊ ಸಿಟಿಯ ಸಿಇಒ ಆಶಿತ್ ಕುಕಿಯನ್, ''ಆವಿಷ್ಕಾರ ಮತ್ತು ವಿಸ್ತರಣೆಯ ಈ ಉತ್ಸಾಹಕರ ಸಂದರ್ಭದಲ್ಲಿ ನಮ್ಮ ಮುಂಚೂಣಿಯ ಚಾನೆಲ್ ಆರ್.ಸಿ.ಸ್ಟುಡಿಯೊವನ್ನು ಜಿಯೊಟಿ.ವಿ. ಮತ್ತು ಜಿಯೊ ಟಿ.ವಿ.+ನಲ್ಲಿ ಪ್ರಾರಂಭಿಸಲು ನಾನು ಬಹಳ ಸಂತೋಷ ಹೊಂದಿದ್ದೇನೆ. ಈ ಪ್ರಾರಂಭವು ನಮ್ಮ ಪ್ರಯಾಣದಲ್ಲಿ ಐತಿಹಾಸಿಕ ಘಟ್ಟವಾಗಿದ್ದು 'ರೇಡಿಜಿಟಲೈಸೇಷನ್'ನಲ್ಲಿ ನಮ್ಮ ಬ್ರಾಂಡ್ ವಿಕಾಸ ಮತ್ತು ಬದ್ಧತೆಯನ್ನು ಪ್ರತಿಫಲಿಸುತ್ತದೆ ಎಂದರು.

## ವೆಜ್ ಬಿರಿಯಾನಿ

### ಪಾಕ ಶಾಲೆ



### ಬೇಕಾಗಿರುವ ಪದಾರ್ಥ

ಕ್ಯಾರೆಟ್-2, ಬೀನ್ಸ್ -10, ಆಲೂಗಡ್ಡೆ-2, ಹಸಿಮೆಣಸು-4, ಮೊಸರು 1 ಕಪ್, ಪನ್ನೀರು-1/4 ಕಪ್, ಉಪ್ಪು, ರುಚಿಗೆ ತಕ್ಕಷ್ಟು, ಗರಂ ಮಸಾಲ-1 ಟೀ ಸ್ಪೂನ್, ಖಾರದ ಪುಡಿ-1 ಚಮಚ, ಧನಿಯಾ ಪುಡಿ-2 ಚಮಚ, ಬಿರಿಯಾನಿ ಮಸಾಲ-3 ಚಮಚ, ಚಿಟಕೆ ಅರಿಶಿನ, ಉಪ್ಪು-4 ಟೇಬಲ್ ಸ್ಪೂನ್, ಜೀರಿಗೆ-1 ಟೀ ಸ್ಪೂನ್, ಚಕ್ಕೆ-ಸಣ್ಣ ತುಂಡು, ಲವಂಗ-2, ಏಲಕ್ಕಿ-2, ಈರುಳ್ಳಿ-1 ಸಣ್ಣಗೆ ಹೆಚ್ಚಿಟ್ಟುಕೊಂಡಿದ್ದು, ಶುಂಠಿ, ಬೆಳ್ಳುಳ್ಳಿ ಪೇಸ್ಟ್-1 ಚಮಚ, ಪುದೀನಾ ಸ್ವಲ್ಪ, ಕೊತ್ತಂಬರಿಸೊಪ್ಪು ಸ್ವಲ್ಪ, ಅಕ್ಕಿ-2 ಕಪ್.

### ಮಾಡುವ ವಿಧಾನ

ಮೊದಲಿಗೆ ತರಕಾರಿಗಳನ್ನು ತೊಳೆದು ಸಣ್ಣಗೆ ಕತ್ತರಿಸಿಕೊಳ್ಳಿ. ನಂತರ ಪನ್ನಿರ್ ಅನ್ನು ಹೆಚ್ಚಿಟ್ಟುಕೊಳ್ಳಿ. ಒಂದು ಬೌಲ್ ಗೆ ½ ಕಪ್ ಮೊಸರು, ಖಾರದ ಪುಡಿ, ಗರಂ ಮಸಾಲ, ಬಿರಿಯಾನಿ ಪುಡಿ, ಸ್ವಲ್ಪ ಉಪ್ಪು, ಅರಿಶಿನ, ಜೀರಿಗೆ, ಧನಿಯಾ ಪುಡಿ 2 ಹಸಿಮೆಣಸು, ಸ್ವಲ್ಪ ಪುದೀನಾ, ಸ್ವಲ್ಪ ಕೊತ್ತಂಬರಿ ಸೊಪ್ಪು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿಕೊಳ್ಳಿ. ನಂತರ ಇದಕ್ಕೆ ತರಕಾರಿ, ಪನ್ನೀರ್ ಹಾಕಿ ಮಿಕ್ಸ್ ಮಾಡಿ ½ ಗಂಟೆಗಳ ಕಾಲ ಹಾಗೇಯೇ ಬಿಡಿ. ಅಕ್ಕಿಯನ್ನು ತೊಳೆದು ಅರ್ಧ ಗಂಟೆಗಳ ಕಾಲ ನೆನೆಸಿಡಿ. ನಂತರ ಕುಕ್ಕರ್ ಗೆ ತುಪ್ಪ ಹಾಕಿ ಅದು ಬಿಸಿಯಾಗುತ್ತಲೆ, ಚಕ್ಕೆ, ಲವಂಗ, ಏಲಕ್ಕಿ ಹಾಕಿ. ನಂತರ ಈರುಳ್ಳಿ ಸೇರಿಸಿ ಫ್ರೈ ಮಾಡಿಕೊಳ್ಳಿ. ಶುಂಠಿ ಬೆಳ್ಳುಳ್ಳಿ ಸೇರಿಸಿ ಹಸಿ ವಾಸನೆ ಹೋಗುವವರೆಗೆ ಹುರಿದುಕೊಳ್ಳಿ. ಮ್ಯಾರಿನೆಟ್ ಮಾಡಿಟ್ಟುಕೊಂಡ ತರಕಾರಿಯನ್ನು ಕುಕ್ಕರ್ ಗೆ ಸೇರಿಸಿ 5 ನಿಮಿಷಗಳ ಕಾಲ ಫ್ರೈ ಮಾಡಿ. ನಂತರ ಉಳಿದ ½ ಕಪ್ ಮೊಸರು ಸೇರಿಸಿ ಮಿಕ್ಸ್ ಮಾಡಿ. 4 ಲೋಟ ನೀರು ಸೇರಿಸಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕುದಿಸಿ. ಅಕ್ಕಿಯನ್ನು ಸೇರಿಸಿ 2 ವಿಷಲ್ ಕೂಗಿಸಿಕೊಂಡು ಗ್ಯಾಸ್ ಆಫ್ ಮಾಡಿದರೆ ರುಚಿಕರವಾದ ವೆಜ್ ಬಿರಿಯಾನಿ ಸವಿಯಲು ಸಿದ್ಧ.

## ಸಲ್ಮಾನ್ ಖಾನ್ ಬಗ್ಗೆ ರಾಖಿ ಸಾವಂತ್ ಅಚ್ಚರಿಯ ಹೇಳಿಕೆ





ಕಳೆದ 2 ವಾರಗಳಿಂದ ಸಲ್ಮಾನ್ ಖಾನ್ ಭಾರೀ ಸುದ್ದಿಯಲ್ಲಿದ್ದಾರೆ. ಏಪ್ರಿಲ್ 14 ರಂದು ಮುಂಬೈನ ಬಾಂದ್ರಾ ಪ್ರದೇಶದಲ್ಲಿ ಸಲ್ಮಾನ್ ಖಾನ್ ಅವರ ಗ್ಯಾಲಕ್ಸಿ ಅಪಾರ್ಟ್ಮೆಂಟ್ ಹೊರಗೆ ಗುಂಡಿನ ದಾಳಿ ನಡೆದಿತ್ತು. ಇದು ಎಲ್ಲರನ್ನೂ ತಲ್ಲಣಗೊಳಿಸಿತ್ತು. ಲಾರೆನ್ಸ್ ಬಿಷ್ಣೋಯ್ ಅವರ ಸಹೋದರ ಅನ್ಮೋಲ್ ಬಿಷ್ಣೋಯ್ ಅವರು ಆನ್ಲೈನ್ ಪೋಸ್ಟ್ ನಲ್ಲಿ ದಾಳಿಯ ಹೊಣೆ ಹೊತ್ತುಕೊಂಡಿದ್ದಾರೆ. ಘಟನೆಯನ್ನು 'ಟ್ರೇಲರ್' ಎಂದು ಕರೆದು ಸಲ್ಮಾನ್ ಖಾನ್ಗೆ ಬೆದರಿಕೆ ಹಾಕಿದ್ದಾರೆ. ಸಲ್ಮಾನ್ ಮನೆಯ ಹೊರಗೆ ನಡೆದ ಗುಂಡಿನ ದಾಳಿಯಿಂದ ರಾಖಿ ಸಾವಂತ್ ಬೇಸರಗೊಂಡಿದ್ದಾರೆ. ಸಲ್ಲು ಭದ್ರತೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೇ ಮನೆಯ ಬಾಲ್ಕನಿಗೆ ಬರದಂತೆ ಸಲ್ಮಾನ್ ಖಾನ್ ಅವರಿಗೆ ಸಲಹೆ ನೀಡಿದ್ದಾರೆ. ರಾಖಿ ಸಾವಂತ್ ಬಹಳ ದಿನಗಳಿಂದ ದುಬೈನಲ್ಲಿ ನೆಲೆಸಿದ್ದು ಇತ್ತೀಚೆಗಷ್ಟೇ ಮುಂಬೈಗೆ ವಾಪಸಾಗಿದ್ದರು. ಸಲ್ಮಾನ್ ಖಾನ್ ಮನೆಯ ಹೊರಗೆ ನಡೆದ ಗುಂಡಿನ ದಾಳಿಯ ಬಗ್ಗೆ ರಾಖಿ ಸಾವಂತ್ ಕಳವಳ ವ್ಯಕ್ತಪಡಿಸಿದ್ದಾರೆ. ಇದು ತುಂಬಾ ದುಃಖಕರ ಸಂಗತಿ ಎಂದು ಹೇಳಿದ್ರು. ಸಲ್ಮಾನ್ ಭಾಯ್ಗೆ ಎಂದಿಗೂ ಬಾಲ್ಕನಿಯಲ್ಲಿ ಬಂದು ನಿಲ್ಲಬೇಡಿ ಎಂದು ನಾನು ಕೇಳಿಕೊಳ್ತೇನೆ. ನೀವು ಈದ್ ಮತ್ತು ಹಬ್ಬಗಳ ಸಮಯದಲ್ಲಿ ಬರುತ್ತೀರಾ? ಆದ್ರೆ ಇನ್ಮುಂದೆ ಬೇಡ, ನಿಮಗೆ ಕೈ ಮುಗಿದು ಕೇಳಿಕೊಳ್ತೇನೆ ಬಾಲ್ಕಾನಿಗೆ ಬರಬೇಡಿ ಎಂದು ರಾಖಿ ಸಾವಂತ್ ಹೇಳಿದ್ರು. ಮಾಧ್ಯಮಗಳ ಜೊತೆ ಮಾತಾಡಿದ ರಾಖಿ ಸಾವಂತ್, ಶಾರುಖ್ ಖಾನ್ ತಮ್ಮ ಮನೆಯ ಛಾವಣಿ ಮೇಲೆ ಕಾಣಿಸಿಕೊಳ್ತಾರೆ. ಸಲ್ಮಾನ್ ಖಾನ್ ಪ್ರತಿ ಈದ್ ಗೆ ಬಾಲ್ಕನಿಗೆ ಬರುತ್ತಾರೆ ಎಂಬುದು ಈಗ ಎಲ್ಲರಿಗೂ ತಿಳಿದಿದೆ. ಇನ್ಮುಂದೆ ಸಲ್ಲು ಭಾಯ್ ಬಾಲ್ಕಾನಿಗೆ ಬರಬೇಡಿ, ಕೆಲವರು ಸಂಚು ರೂಪಿಸುತ್ತಿದ್ದಾರೆ ಎಂದ್ರು. ಸಲ್ಮಾನ್ ಖಾನ್ ಮನೆ ಮೇಲೆ ಗುಂಡಿನ ದಾಳಿ ವಿಚಾರ ತಿಳಿದು ನಾನು ಅಳುತ್ತಿದ್ದೆ ಎಂದು ರಾಖಿ ಹೇಳಿದ್ದಾರೆ.

**ಸಲ್ಮಾನ್ ಖಾನ್ ಅವರನ್ನು ಕೊಹಿನೂರ್ ಗೆ ಹೋಲಿಕೆ ಮಾಡಿದ ರಾಖಿ!:** ರಾಖಿ ಸಾವಂತ್, ನಮ್ಮ ದೇಶದಲ್ಲಿ ಕೊಹಿನೂರ್ ಗಿಂತ ಸಲ್ಮಾನ್ ಖಾನ್ ಹೆಚ್ಚು ಮುಖ್ಯ ಎಂದು ನಾನು ಭಾವಿಸುತ್ತೇನೆ. ಅವರು ನಮ್ಮ ದಂತಕಥೆ. ಕೊಹಿನೂರ್ ತಂದರೆ ಏನು ಸಿಗುತ್ತದೆ? ಸಲ್ಮಾನ್ ಖಾನ್ ಅವರ ಗ್ಯಾಲಕ್ಸಿ ಅಪಾರ್ಟ್ಮೆಂಟ್ ಮತ್ತು ಸುತ್ತಮುತ್ತ ಭದ್ರತೆ ಮತ್ತು ಪೊಲೀಸ್ ಕಣ್ಗಾವಲು ಹೆಚ್ಚಿಸಬೇಕಿದೆ ಎಂದು ರಾಖಿ ಸಾವಂತ್ ಹೇಳಿದ್ರು.

ಬಾಲಿವುಡ್ ಬ್ಯಾಡ್ ಬಾಯ್ ಸಲ್ಮಾನ್ ಖಾನ್ ಮನೆ ಹೊರಗೆ ಗುಂಡಿನ ದಾಳಿ ನಡೆದಿದೆ. ಇಬ್ಬರು ಬೈಕ್ ಸವಾರರು ಸಲ್ಮಾನ್ ಮನೆ ಹೊರಗೆ ಗುಂಡು ಹಾರಿಸಿ ಪರಾರಿಯಾಗಿದ್ದಾರೆ. ಸನ್ಮಾನ್ ಖಾನ್ಗೆ ಆಗಾಗ ಕೊಲೆ ಬೆದರಿಕೆಗಳು ಬಂದಿದೆ. ಈವರೆಗೆ 5 ಬಾರಿ ಸಲ್ಮಾನ್ ಖಾನ್ಗೆ ಕೊಲೆ ಬೆದರಿಕೆ ಹಾಕಲಾಗಿದೆ.

## ವಿಟಮಿನ್ ಡಿ ಕೊರತೆಯಿಂದ ಕ್ಯಾನ್ಸರ್ ಹೆಚ್ಚಳ

### ಹೆಲ್ತ್ ಟಿಪ್ಸ್




ವಿಟಮಿನ್ ಡಿ ಕೊರತೆಯು ಪ್ರಪಂಚದಾದ್ಯಂತದ ಜನರು ಹೊಂದಿರುವ ಸಾಮಾನ್ಯ ಪೋಷಕಾಂಶಗಳ ಕೊರತೆಯಾಗಿದೆ. ಇದು ಸಾಮಾನ್ಯವಾಗಿ 65 ವರ್ಷಕ್ಕಿಂತ ಮೇಲ್ಪಟ್ಟವರ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಆದರೆ ಇದು ಯಾವ ವಯಸ್ಸಿನಲ್ಲಿ ಯಾರಿಗಾದರೂ ಸಂಭವಿಸಬಹುದು ಎಂದು ವೈದ್ಯರು ಹೇಳುತ್ತಾರೆ.

ವಿಟಮಿನ್ ಡಿ ಕೊರತೆಯು ವಿಶ್ವದ ಜನಸಂಖ್ಯೆಯ ಶೇಕಡಾ 13ರಷ್ಟು ಜನರ ಮೇಲೆ ಪರಿಣಾಮ ಬೀರುತ್ತದೆ ಎಂದು ಅಂದಾಜಿಸಲಾಗಿದೆ. ಇತ್ತೀಚಿನ ಅಧ್ಯಯನಗಳಿಂದ, ಈ ವಿಟಮಿನ್ ಕೊರತೆಯು ಅಂಡಾಶಯ, ಸ್ತನ, ಕೊಲೊನ್ ಮತ್ತು ಮಲ್ಟಿಪಲ್ ಮೈಲೋಮಾಗಳನ್ನು ಒಳಗೊಂಡಿರುವ ಹಲವಾರು ರೀತಿಯ ಕ್ಯಾನ್ಸರ್ ಅಪಾಯವನ್ನು ಹೆಚ್ಚಿಸುತ್ತದೆ ಎಂದು ತಿಳಿದುಬಂದಿದೆ.

ವಿಟಮಿನ್ ಡಿ, ಪ್ರಮುಖ ಕೊಬ್ಬು ಕರಗುವ ವಿಟಮಿನ್ ಆಗಿರುವುದರಿಂದ, ಇದು ದೇಹದ ಸುಗಮ ಕಾರ್ಯನಿರ್ವಹಣೆಗೆ ಅಗತ್ಯವಿರುವ ಕ್ಯಾಲ್ಸಿಯಂ ಅನ್ನು ಹೀರಿಕೊಳ್ಳಲು ಸಹಾಯ ಮಾಡುತ್ತದೆ. ವಿಟಮಿನ್ ಡಿ ಕೊರತೆಯು ಮೂಳೆ ಮತ್ತು ಕೀಲು ನೋವು, ಸ್ನಾಯು ಸೆಳೆತ, ಆಯಾಸ, ಮೂಡ್ ಸ್ವಿಂಗ್ಸ್ ಮೊದಲಾದ ಸಮಸ್ಯೆಗನ್ನು ಉಂಟು ಮಾಡುತ್ತದೆ.

ವಿಟಮಿನ್ ಡಿ 3 ಮತ್ತು ಕ್ಯಾಲ್ಸಿಯಂ ಸೇವನೆಯು ಋತುಬಂಧದ ನಂತರ ಆರೋಗ್ಯವಂತ ಮಹಿಳೆಯರಲ್ಲಿ ಕ್ಯಾನ್ಸರ್ ಬರುವ ಸಾಧ್ಯತೆಯನ್ನು ಹೆಚ್ಚು ಮಾಡುತ್ತದೆ ಎಂದು ಸಂಶೋಧನೆ ಹೇಳಿದೆ. ಹೊಟ್ಟೆಯ ಕ್ಯಾನ್ಸರ್, ಪ್ರಾಸ್ಟೇಟ್ ಕ್ಯಾನ್ಸರ್ ಮತ್ತು ಅನ್ನನಾಳದ ಕ್ಯಾನ್ಸರ್ ಸೇರಿದಂತೆ ಹಲವಾರು ರೀತಿಯ ಕ್ಯಾನ್ಸರ್ಗಳಿಗೆ ವಿಟಮಿನ್ ಡಿಯ ಕೊರತೆ ಕಾರಣವಾಗುತ್ತದೆ ಎಂದು ಕೆಲವು ಇತರ ಅಧ್ಯಯನಗಳು ಸೂಚಿಸಿವೆ.

ತಜ್ಞರ ಪ್ರಕಾರ, ಕ್ಯಾನ್ಸರ್ ಕೋಶಗಳ ಕ್ಷಿಪ್ರ ವಿಭಜನೆಯನ್ನು ತಡೆಯುವಲ್ಲಿ ವಿಟಮಿನ್ ಡಿ ಪ್ರಮುಖ ಪಾತ್ರ ವಹಿಸುತ್ತದೆ, ಇದರಿಂದಾಗಿ ಅವುಗಳ ಬೆಳವಣಿಗೆಯನ್ನು ನಿಧಾನಗೊಳಿಸುತ್ತದೆ. ಅಲ್ಲದೆ, ಇದು ಕ್ಯಾನ್ಸರ್ ಹರಡುವಿಕೆ ಮತ್ತು ಹೊಸ ಕೋಶಗಳ ಬೆಳವಣಿಗೆಯನ್ನು ತಗ್ಗಿಸುತ್ತದೆ.

ಸೂರ್ಯನ ಬೆಳಕಿನಲ್ಲಿ ಸಮಯವನ್ನು ಕಳೆಯುವ ಮೂಲಕ ದೇಹಕ್ಕೆ ವಿಟಮಿನ್ ಡಿ ಪಡೆಯಬಹುದು. ಅಣಬೆಗಳನ್ನು ಒಳಗೊಂಡಿರುವ ಕೆಲವು ಆಹಾರಗಳನ್ನು ಸೇವಿಸುವ ಮೂಲಕ ಈ ವಿಟಮಿನ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ಪಡೆಯಬಹುದು. ಮೀನು ಸೇರಿದಂತೆ ಸಮುದ್ರಾಹಾರಗಳಲ್ಲಿ ವಿಟಮಿನ್ ಡಿ ಅಧಿಕವಾಗಿರುತ್ತದೆ. ಮೊಟ್ಟೆಯ ಹಳದಿ ಲೋಳೆಯು ವಿಟಮಿನ್ ಡಿ ಯ ಅತ್ಯುತ್ತಮ ಮೂಲಗಳಲ್ಲಿ ಒಂದಾಗಿದೆ.

## ತ್ವಚೆಯ ಸೌಂದರ್ಯಕ್ಕೆ ಸಲಹೆ

### ಬ್ಯೂಟಿ ಟಿಪ್ಸ್



ಇತ್ತೀಚಿನ ದಿನಗಳಲ್ಲಿ ವಾಯು ಮಾಲಿನ್ಯ ಹೆಚ್ಚಾಗಿದೆ. ಧೂಳಿನಿಂದಾಗಿ ಚರ್ಮಕ್ಕೆ ಸಂಬಂಧಿಸಿದ ಒಂದೊಂದೇ ಸಮಸ್ಯೆ ಕಾಡಲು ಶುರುವಾಗುತ್ತದೆ. ಸುಂದರ ಚರ್ಮವುಳ್ಳ ಮುಖ ಪಡೆಯಲು ಪ್ರತಿಯೊಬ್ಬರೂ ಮಾರುಕಟ್ಟೆಯಲ್ಲಿ ಸಿಗುವ ಮೇಕಪ್ ಸಾಮಗ್ರಿಗಳ ಮೊರೆ ಹೋಗ್ತಾರೆ. ಆದ್ರೆ ಪ್ರಯೋಜನ ಶೂನ್ಯ. ಧೂಳಿನ ನಡುವೆಯೂ ಸುಂದರ ಲುಕ್ ಪಡೆಯುವ ಆಸೆ ನಿಮಗಿದ್ದರೆ ನಿಮ್ಮ ಮೇಕಪ್ ಪಟ್ಟಿಯಲ್ಲಿ ಕರ್ಪೂರ ಹಾಗೂ ಕೊಬ್ಬರಿ ಎಣ್ಣೆಯನ್ನು ಸೇರಿಸಿ. ಕರ್ಪೂರ ಹಾಗೂ ತೆಂಗಿನ ಎಣ್ಣೆಯನ್ನು ಮಿಕ್ಸ್ ಮಾಡಿ ಮುಖಕ್ಕೆ ಹಚ್ಚುವುದರಿಂದ ಮೊಡವೆ ಕಡಿಮೆಯಾಗುತ್ತದೆ. ಇದ್ರಿಂದ ಮುಖ ಸ್ವಚ್ಛವಾಗಿ ಕಾಣುತ್ತದೆ. ಬಿಸಿ ನೀರಿಗೆ ಕರ್ಪೂರ ಸೇರಿಸಿ ಇದನ್ನು ಕಾಲಿನ ಹಿಮ್ಮಡಿಗಳಿಗೆ ಹಚ್ಚಿಕೊಳ್ಳುವುದರಿಂದ ಒಡೆದ ಪಾದದ ನೋವು ಕಡಿಮೆಯಾಗುತ್ತದೆ. ಕರ್ಪೂರದ ಎಣ್ಣೆಯನ್ನು ತಲೆಗೆ ಹಚ್ಚಿಕೊಳ್ಳುವುದರಿಂದ ಕೂದಲು ಉದುರುವುದು ಕಡಿಮೆಯಾಗುತ್ತದೆ. ಕೂದಲು ಬಲಗೊಳ್ಳತ್ತದೆ. ಮೊಸರು, ಮೊಟ್ಟೆ ಮಿಶ್ರಣಕ್ಕೆ ಕರ್ಪೂರದ ಎಣ್ಣೆ ಹಾಕಿ. ಇದನ್ನು ಕೂದಲಿಗೆ ಹಚ್ಚಿಕೊಳ್ಳಿ. ಮಿಶ್ರಣ ಒಣಗಿದ ನಂತ್ರ ತೊಳೆಯಿರಿ.

100 ಗ್ರಾಂ ತೆಂಗಿನ ಎಣ್ಣೆಗೆ ಚಿಟಕಿ ಕರ್ಪೂರವನ್ನು ಹಾಕಿ ಮಿಕ್ಸ್ ಮಾಡಿ. ಸ್ನಾನವಾದ ನಂತ್ರ ಇದನ್ನು ದೇಹಕ್ಕೆ ಹಚ್ಚಿಕೊಳ್ಳಿ. ಚರ್ಮ ಸಂಬಂಧಿ ಸಮಸ್ಯೆಗಳು ಕಡಿಮೆಯಾಗುತ್ತವೆ.ಮೊಡವೆ ನಂತ್ರ ಕೆಲವರಿಗೆ ಕಪ್ಪು ಕಲೆ ಹಾಗೆ ಉಳಿದುಕೊಳ್ಳುತ್ತದೆ. ಅಂತವರು ಕೂಡ ತೆಂಗಿನ ಎಣ್ಣೆ ಜೊತೆ ಕರ್ಪೂರ ಮಿಕ್ಸ್ ಮಾಡಿ ಹಚ್ಚಿಕೊಳ್ಳಬೇಕು. ಸುಟ್ಟ ಅಥವಾ ಇನ್ನಾವುದೋ ಕಾರಣದಿಂದ ಕೆಲವರ ಚರ್ಮದ ಮೇಲೆ ಕಲೆ ಉಳಿದಿರುತ್ತದೆ. ಅದು ನೋಡಲು ಕೆಟ್ಟದಾಗಿ ಕಾಣುತ್ತದೆ. ಅಂತ ಕಲೆ ಇದ್ದಲ್ಲಿ ಕರ್ಪೂರವನ್ನು ನೀರಿನಲ್ಲಿ ಒದ್ದೆ ಮಾಡಿ ಅದನ್ನು ಕಲೆಯ ಜಾಗಕ್ಕೆ ಹಚ್ಚುತ್ತ ಬಂದರೆ ಕಲೆ ಮಾಯವಾಗುತ್ತದೆ.

## ಮನೋಲ್ಲಾಸ ನೀಡುವ ಕಲಾಲೋಕ - ಹೆಜ್ಜೆ-ಗೆಜ್ಜೆಗಳ ಉಲಿ



ಇದು ಸುಮಾರು ಮೂವತ್ತು ವರ್ಷಗಳ ಹಿಂದಿನ ಮಾತು. ಬೀದಿಯಲ್ಲಿ ಯಾವುದೋ ಮೆರವಣಿಗೆ. ಡುಂ ಟಕ ಡುಂ ಟಕ ಲಯಬದ್ಧ ತಮಟೆಯ ಸದ್ದು.... ವಾದ್ಯಗಳ ನಾದಸ್ವರ. ನನ್ನ ಮೂರುವರ್ಷದ ಮಗ ಎದ್ದನೋ ಬಿದ್ದನೋ ಎನ್ನುವ ಹಾಗೆ ರಸ್ತೆಗೆ ಓಡಿದ. ನಾನೂ ಅವನ ಹಿಂದೆ ಓಟ. ಗುಂಪು ಜನಜಾತ್ರೆ. ಯಾವುದೋ ಉತ್ಸವ ಇರಬೇಕು. ಪಟಾಲಮ್ಮನೋ, ಮಾರಮ್ಮನೋ, ಚೌಡಮ್ಮನೋ...ಅಲಂಕೃತ ಮೂರ್ತಿ ಪಲ್ಲಕ್ಕಿಯ ಮೇಲೆ. ಮೆರವಣಿಗೆಯ ಮುಂದೆ ಕುದುರೆ ಕೀಲುಗೊಂಬೆಗಳ ಮೇಲೆ ರಾಜಾ-ರಾಣಿಯರ ಸವಾರಿ ಕುಣಿತ. ನನ್ನ ಮಗ ಆವೇಶಿತನಾಗಿ ಆ ಗುಂಪಿನಲ್ಲಿ ತೂರಿ ತಾಳಬದ್ಧವಾಗಿ ಹೆಜ್ಜೆ ಹಾಕಿ ಕುಣಿಯುತ್ತಿದ್ದ. ನೃತ್ಯದ ಸೆಳೆತ ಅವನನ್ನು ಆವರಿಸಿತ್ತು. ಎಂಥವರಿಗೂ ಖುಷಿಯಾದಾಗ ಉಲ್ಲಾಸದಿಂದ 'ಥಕ ಥೈ' ಎಂದು ಕುಣಿದುಬಿಡುತ್ತಾರಂತೆ. ಅದು ಅಪೀಮಿದ್ದಂತೆ. ಬಹುಶಃ ನೃತ್ಯ ಆವರಿಸುವ ಹೊತ್ತು-ಗೊತ್ತು, ಸಮಯ-ಸಂದರ್ಭ ಯಾವುದೂ ಗೊತ್ತಾಗಲ್ಲ. ಒಟ್ಟಿನಲ್ಲಿ ಖುಷಿಯ ಅಭಿವ್ಯಕ್ತಿ 'ಕುಣಿತ' ಅರ್ಥಾತ್ ಈ 'ನೃತ್ಯ'. ಇದು ಕೆಲವರಿಗೆ ಹುಚ್ಚು ಹಿಡಿಸಿಬಿಡತ್ತೆ. ಕುಣಿತ ಎನ್ನುವುದಕ್ಕಿಂತ 'ನಾಟ್ಯ' ಎನ್ನುವುದು ಹೆಚ್ಚು ಶಿಷ್ಟ. ಭರತಮುನಿ ಸಾವಿರಾರು ವರ್ಷಗಳ ಹಿಂದೆ ನೃತ್ಯ ಪ್ರಕಾರಕ್ಕೆ ಒಂದು ಶಾಸ್ತ್ರದ ಚೌಕಟ್ಟು ಹಾಕಿ, ಅದರ ರೀತಿ-ನೀತಿಗಳಿಗೆ ಪಾರಿಭಾಷಿಕ ಆಂಗಿಕ- ಹಸ್ತಮುದ್ರೆ, ಅಡವು-ಅಭಿನಯಗಳ ಸ್ವರೂಪ, ನಿಯಮಗಳ ಜೋಡಣೆಯನ್ನು ಬಿಗಿಯಾಗಿ ರೂಪಿಸಿದ್ದಕ್ಕೆ ಸಾಕ್ಷಿ ಅವನು ರಚಿಸಿದ 'ನಾಟ್ಯ ಶಾಸ್ತ್ರ' ಗ್ರಂಥ. ಇಂದಿಗೂ ಹಲವಾರು ರೂಪಾಂತರಗಳ ಪ್ರಭೇದಗಳಲ್ಲಿ ಬೇರುಬಿಟ್ಟಿರುವ ದೈವೀಕ ಆಯಾಮದ ಭರತನ 'ನಾಟ್ಯ'' ಶಾಸ್ತ್ರ' ಗ್ರಂಥವೇ ಎಲ್ಲ ನೃತ್ಯಪ್ರಕಾರಗಳಿಗೂ ಮೂಲ ಎನ್ನಲಾಗುತ್ತಿದೆ. ದೇವಾಲಯಗಳಲ್ಲಿ 'ನೃತ್ಯಸೇವೆ' ಮಾಡುವ ಪದ್ಧತಿಯಿಂದ ಹಿಡಿದು, ರಾಜಾಸ್ಥಾನಗಳಲ್ಲಿ ರಾಜನರ್ತಕಿಯರು ಮಾಡುತ್ತಿದ್ದ ನರ್ತನಗಳು ಹಾಗೂ ಇಂದಿನ ದಿನಮಾನಗಳಲ್ಲಿ ಶಾಸ್ತ್ರೋಕ್ತವಾಗಿ ನೃತ್ಯ ಕಲಿತ ಕಲಾವಿದರು ಪ್ರೇಕ್ಷಕರ ಮುಂದೆ ಪ್ರದರ್ಶನ ನೀಡುವ ಪರಿಪಾಠದಿಂದ ಮೊದಲ್ಗೊಂಡು - ಮೊದಲಹೆಜ್ಜೆಯ ನಾಟ್ಯ ಸಮರ್ಪಣೆ 'ರಂಗಪ್ರವೇಶ'ದವರೆಗೂ ಇದರ ವ್ಯಾಪ್ತಿ ವಿಸ್ತರಿಸಿದೆ. ನೃತ್ಯಕ್ಕೆ ತನ್ನದೇ ಆದ ಅಸ್ಮಿತೆ ಇದೆ. ದೈವೀಕ ಆಯಾಮದೊಡನೆ ಗಾಂಭೀರ್ಯ ತಳಕು ಹಾಕಿಕೊಂಡಿದ್ದು, ಭಯ-ಭಕ್ತಿ- ಆಸಕ್ತಿ-ಪರಿಶ್ರಮಗಳಿಂದ ಆವೃತವಾಗಿದೆ ಎನ್ನಬಹುದು. ತಾನೇ ತಾನಾಗಿ ಸ್ಫುರಿಸುವ ಹೃದಯಾಂತರಾಳದ ಬಯಕೆಯಿಂದಲೋ, ಮನೆಯವರ ಒತ್ತಡ- ಒತ್ತಾಸೆಗೋ, ಮತ್ಯಾವುದೋ ಸುಪ್ತ ಕಾರಣಕ್ಕೋ ಕಲಾವಿದರು ನೃತ್ಯ ಕಲಿಯಲಾರಂಭಿಸಿದ ಹಿನ್ನಲೆ-ಪಯಣಗಳು ಸೃಷ್ಟಿಯಾಗಿರಬಹುದು. ಹೀಗಾಗಿ ಕಾಲಾಂತರದಲ್ಲಿ ನಮ್ಮಲ್ಲಿ ಅಸಂಖ್ಯಾತ ನೃತ್ಯ ಕಲಾವಿದರ ಉದ್ಭವ-ಬೆಳವಣಿಗೆ-ಕಲಾವಂತಿಕೆಯ ಪ್ರಸರಣಕ್ಕೆ ನಾನಾ ಕಾರಣಗಳಿರಬಹುದು. ಅದಮ್ಯ ನಾಟ್ಯಪ್ರೀತಿಯ ಬಗ್ಗೆ ಅನೇಕ ಕಥೆಗಳನ್ನು ಕೇಳಿದ್ದೇನೆ. ಒರಿಸ್ಸಾ ರಾಜ್ಯದ ಒಬ್ಬ ಪ್ರತಿಭಾವಂತ ಹುಡುಗ ಸಿಕ್ಕ ಸಿಕ್ಕ ಕಡೆ ಕುಣಿಯುತ್ತಿದ್ದವನು ಶಾಸ್ತ್ರೋಕ್ತವಾಗಿ ನೃತ್ಯ ಕಲಿಯಲೇ ಬೇಕೆಂದಾಗ ಅವನ ಹೆತ್ತವರು ಖಡಾಖಂಡಿತವಾಗಿ ಅವನಾಸೆಯನ್ನು ಕತ್ತರಿಸಿ ಹಾಕಿದರು. ಕಡೆಗೆ ಎಂಟರ ಬಾಲಕ ನೇಣು ಕುಣಿಕೆಯನ್ನು ಕುತ್ತಿಗೆಗೆ ಬಿಗಿದುಕೊಂಡಾಗ, ಹೌಹಾರಿದ ಹೆತ್ತವರು, ಅವನ ನಿಜ ಅಭೀಪ್ಸೆಯನ್ನು ಮನಗಂಡು ಕೂಡಲೇ ಅವನನ್ನು ನೃತ್ಯಗುರುಗಳಿಗೆ ಒಪ್ಪಿಸಿದರಂತೆ. ಆತನಿಂದು ಪ್ರಸಿದ್ಧ ಒಡಿಸ್ಸೀ ನೃತ್ಯ ಕಲಾವಿದ. ಇನ್ನೊಬ್ಬ ಬಡಹುಡುಗ ಮನೆಯವರ ಸಹಕಾರ-ಬೆಂಬಲವಿಲ್ಲದಿದ್ದರೂ 'ನೃತ್ಯಕ್ಕಾಗಿ ಜೀವ ಬಿಟ್ಟೇನು' ಎಂದು ಸಂಕಲ್ಪ ಮಾಡಿ ಬೆಳಗಿನ ನಾಲ್ಕರ ಜಾವಕ್ಕೇ ಮನೆಬಿಟ್ಟು ಪ್ರತಿದಿನ ಇಪ್ಪತ್ತು ಕಿಲೋಮೀಟರ್ ಗಟ್ಟಲೆ ಬರಿಗಾಲಲ್ಲಿ ನಡೆದುಕೊಂಡು ಬಂದು, ಸಿಟಿಯ ಬಡಾವಣೆಯಲ್ಲಿದ್ದ ಡ್ಯಾನ್ಸ್ ಟೀಚರ್ ಮನೆ ತಲುಪಿ, ಅವರ ಮನೆಚಾಕರಿ ಮಾಡಿ ನೃತ್ಯ ಕಲಿತ ಉದಾಹರಣೆಗಳಿವೆ. ಕೆಲ ಕಾಲ ಮಗಳಿಗೆ ನೃತ್ಯ ಕಲಿಸಿ, ರಂಗಪ್ರವೇಶದ ಹಂತ ಬಂದಾಗ ಮನೆಯವರು ಖರ್ಚಿಗೆ ಹೆದರಿ ಒಲ್ಲೆನೆಂದಾಗ ಆ ಹುಡುಗಿ, ತಾನು ಕಲಿತ ಅಲ್ಪ ಸ್ವಲ್ಪ ನೃತ್ಯವಿದ್ಯೆಯನ್ನು ಪುಟ್ಟಮಕ್ಕಳಿಗೆ ಕಲಿಸಿ, ಹಣ ಕೂಡಿ ಹಾಕಿ ಮುಂದೆಂದೋ ತನ್ನ 'ರಂಗಪ್ರವೇಶ' ದ ಸಂಕಲ್ಪ ನೆರವೇರಿಸಿಕೊಂಡ ಸ್ಫೂರ್ತಿದಾಯಕ ಕಥೆಗಳಿವೆ. ಪ್ರಖ್ಯಾತ ನಟಿ ಸುಧಾ ಚಂದ್ರನ್ ಅಪಘಾತದಲ್ಲಿ ಒಂದು ಕಾಲನ್ನು ಕಳೆದುಕೊಂಡರೂ ಛಲ ಬಿಡದೆ ತನ್ನ ಕಲಾಪ್ರೀತಿಯಿಂದ ಅದೆಷ್ಟು ಪ್ರದರ್ಶನಗಳನ್ನು ಕೊಡಲಿಲ್ಲ? ತೊಂಭತ್ತು ದಾಟಿದ ಇಳಿವಯಸ್ಸಿನಲ್ಲಿ ಖ್ಯಾತ ಅಭಿನೇತ್ರಿ-ಕಲಾವಿದೆ ವೈಜಯಂತಿ ಮಾಲ ಇಂದಿಗೂ ನೃತ್ಯವನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಇದಕ್ಕಿಂತ ಅದ್ಭುತ ನಾಟ್ಯಶಕ್ತಿಗೆ ಇರುವ ದೃಷ್ಟಾಂತಗಳು ಬೇಕೇ? ಭರತನಾಟ್ಯ ಕ್ಷೇತ್ರದಲ್ಲಿ ನವಕ್ರಾಂತಿ-ಹೊಸ ಆಯಾಮಗಳ ಬೆರಗನ್ನು ತೋರಿರುವ 'ನವ ನವೋನ್ಮೇಷಶಾಲಿನಿ' ಪ್ರತಿಭಾವಂತೆಯಾದ ಡಾ. ಪದ್ಮಾ ಸುಬ್ರಹ್ಮಣ್ಯಮ್ ಅವರ ಸೃಜನಾತ್ಮಕ ಸಾಧನೆಗಳು ಚರಿತ್ರೆಯಲ್ಲಿ ದಾಖಲಾಗುವುದಿಲ್ಲವೇ? ಹೀಗೆ ವಿವಿಧ ನಾಟ್ಯಪ್ರಕಾರ-ಶೈಲಿಗಳಲ್ಲಿ ಜಗತ್ಪ್ರಸಿದ್ಧರಾಗಿರುವ ಅದೆಷ್ಟು ಜನ ನಮ್ಮ ನಾಡಿನ ನೃತ್ಯ ಕಲಾವಿದರು ಇಡೀ ವಿಶ್ವದ ಗಮನವನ್ನು ಸೆಳೆದಿಲ್ಲ? ಹೌದು- ನೃತ್ಯ ಒಂದು ಬೆರಗಿನ ಲೋಕ-ಮೆರುಗಿನ ಜಗತ್ತು !!.... ಸೂಜಿಗಲ್ಲಿನಂತೆ ಸೆಳೆವ ಗಂಧರ್ವಲೋಕ. ಎಷ್ಟು ಜನ ಕಲಾವಿದರಿಗಿಲ್ಲ ತಾವೊಬ್ಬ ನಾಟ್ಯಾಗಸದ ತಾರೆಯಾಗಬೇಕೆಂಬ ಕನಸು!! ನೆರೆದ ಕಲಾರಸಿಕರ ಮುಂದೆ ನರ್ತಿಸಿದಾಗ, ಮನರಂಜಿಸಿದಾಗ ಧನ್ಯತೆಯ ಸಂಭ್ರಮ-ಬೀಗು. ಕರತಾಡನದ ಮೆಚ್ಚುಗೆಗೆ ಗಾಳಿಯಲ್ಲೇ ತೇಲುತ್ತಿರುವ ಅನಿರ್ವಚನೀಯ ಅನುಭವ-ಅನುಭೂತಿ. ದೈವೀಕ ಸೆಲೆಯ ನೃತ್ಯಪ್ರದರ್ಶನ ಬಹುತೇಕ ಕಲಾಕೋವಿದರ ಜೀವನ ಗಮ್ಯ!! ಇಂದು ನಮ್ಮಲ್ಲಿ ಸಹಸ್ರಾರು ಸಂಖ್ಯೆಯ ನೃತ್ಯ ಕಲಾವಿದರಿದ್ದಾರೆ. ಪರಿಪಕ್ವ, ನುರಿತ ಖ್ಯಾತ ನೃತ್ಯಗುರು-ಕಲಾವಿದರಿಂದ ಹಿಡಿದು, ಮಧ್ಯಮ -ಸಾಮಾನ್ಯಮಟ್ಟದ ನರ್ತಕರು-ಚಿಗುರು-ಎಳಸು ಪ್ರತಿಭೆಗಳವರೆಗೆ ಎಲ್ಲರೂ ತಮ್ಮ ಪಾಡಿಗೆ ತಾವು ನೃತ್ಯಕಾಯಕದಲ್ಲಿ ತೊಡಗಿಕೊಂಡಿದ್ದಾರೆ. ನೃತ್ಯವೇ ಅವರ ಉಸಿರಾಗಿದೆ ಎಂದರೂ ಅತಿಶಯೋಕ್ತಿಯಲ್ಲ. ಹಲವೊಮ್ಮೆ ಇದು ನೃತ್ಯೋದಮವೂ ಅನಿಸಬಹುದು. ಪ್ರಸ್ತುತ ಯಾಂತ್ರಿಕ ಬದುಕಿನ ಓಟದ, ಸ್ಪರ್ಧಾಜೀವನದಲ್ಲಿ 'ನೃತ್ಯ' ನೆಮ್ಮದಿಯ ಒಂದು ತಂಗುದಾಣ-ಉಲ್ಲಾಸ-ಸಂತಸ ಚಿಮ್ಮಿಸುವ ಊಟೆ ಎಂಬುದನ್ನು ಒಪ್ಪಬಹುದೇನೋ? ಬೆಂಗಳೂರಿನಂಥ ಮಹಾನಗರದಲ್ಲಿ ಪ್ರತಿದಿನವೂ ಒಂದಲ್ಲ ಒಂದು ಕಡೆ ನೃತ್ಯ ಚಟುವಟಿಕೆಗಳು, ಕೆಲವರಿಗೆ ಸಾರ್ಥಕತೆ -ಹೆಮ್ಮೆಯ ನಿತ್ಯನೋಟ. ಅದರಲ್ಲೂ 'ಅಂತರರಾಷ್ಟ್ರೀಯ ನೃತ್ಯ ದಿನ' ದಂದು ಹಿರಿ-ಕಿರಿಯರ ಭರಪೂರ ನೃತ್ಯಪ್ರದರ್ಶನಗಳು, ಅಮಿತ ಪ್ರೋತ್ಸಾಹದ ಹೊಳೆ, ಧನಾತ್ಮಕ ಬೆಳವಣಿಗೆಯ ಕಲಾಲೋಕಕ್ಕೊಂದು ಹೊನ್ನಿನ ಪ್ರಭಾವಳಿ.

ವೈ.ಕೆ.ಸಂಧ್ಯಾ ಶರ್ಮ

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ-9964739507
www.jyotishyavaastu.com

**ಮೇಷ:** ಹಣಕಾಸಿನ ವಿಷಯದಲ್ಲಿ ಎಚ್ಚರ, ಜಮೀನು ವಿಷಯಗಳು ಇತ್ಯರ್ಥ, ಉನ್ನತ ವ್ಯಾಸಂಗಕ್ಕೆ ದೂರ ಪ್ರಯಾಣ.

**ವೃಷಭ:** ಶುಭ ಸಮಾರಂಭಗಳಿಗೆ ಹೆಚ್ಚಿನ ಖರ್ಚು, ನಾನಾ ಮೂಲಗಳಿಂದ ವರಮಾನ, ಆರೋಗ್ಯದಲ್ಲಿ ವ್ಯತ್ಯಾಸ, ವಿದೇಶಿ ವ್ಯವಹಾರಗಳಿಂದ ಲಾಭ.

**ಮಿಥುನ :** ಸ್ತ್ರೀಯರಿಗೆ ತೊಂದರೆ, ಉನ್ನತ ವಹಿವಾಟುದಾರರಿಗೆ ಅಧಿಕ ಲಾಭ, ಸಾಮಾಜಿಕ ಕ್ಷೇತ್ರಗಳಲ್ಲಿ ಮನ್ನಣೆ.

**ಕಟಕ:** ಅನಗತ್ಯ ತಿರುಗಾಟ, ಆರ್ಥಿಕ ಪರಿಸ್ಥಿತಿ ಏರುಪೇರು, ಸ್ನೇಹಿತರಿಂದ ಸಹಾಯ, ಪರರ ಧನಪ್ರಾಪ್ತಿ.

**ಸಿಂಹ:** ಇಷ್ಟ ಕಾರ್ಯಸಿದ್ಧಿ, ಮಿತ್ರರಿಂದ ವಿರೋಧ, ಅಮೂಲ್ಯ ವಸ್ತುಗಳನ್ನು ಖರೀದಿಸುವಿರಿ, ಎಲ್ಲಾ ಕಡೆಯಿಂದ ಒತ್ತಡ ಹೆಚ್ಚಾಗುವುದು.

**ಕನ್ಯಾ:** ಭೂ ಸಂಬಂಧ ಕೆಲಸದವರಿಗೆ ಲಾಭ, ದಾಂಪತ್ಯದಲ್ಲಿ ನೆಮ್ಮದಿ ಶಾಂತಿ, ಅನಾವಶ್ಯಕ ಖರ್ಚು ಕಡಿಮೆ ಮಾಡಿ, ಮಕ್ಕಳಿಂದ ಸಂತಸ.

**ತುಲಾ:** ಹಿರಿಯರ ಹಿತ ನುಡಿ, ವ್ಯವಹಾರಗಳನ್ನ ತಾಳ್ಮೆಯಿಂದ ನಿಭಾಯಿಸಿ, ರಾಜಕೀಯ ವ್ಯಕ್ತಿಗಳಿಗೆ ಸುಸಮಯ.

**ವೃಶ್ಚಿಕ:** ಯಾರನ್ನು ಹೆಚ್ಚಾಗಿ ನಂಬಬೇಡಿ, ವಾಸಗೃಹದಲ್ಲಿ ತೊಂದರೆ, ಅಶಾಂತಿ, ಸಂತಾನ ಪ್ರಾಪ್ತಿ, ಪ್ರಿಯ ಜನರ ಭೇಟಿ.

**ಧನಸ್ಸು:** ವಿರೋಧಿಗಳಿಂದ ದೂರವಿರಿ, ಸಾಮಾಜಿಕ ಕ್ಷೇತ್ರಗಳಲ್ಲಿ ಮನ್ನಣೆ, ನಿಂತು ಹೋದ ಕೆಲಸಗಳಿಗೆ ಮರುಚಾಲನೆ.

**ಮಕರ:** ಕಾರ್ಯಕ್ಷೇತ್ರದಲ್ಲಿ ಉತ್ತಮ ಪ್ರಗತಿ, ಅನಗತ್ಯ ಅಲೆದಾಟ, ಅಲ್ಪ ಕಾರ್ಯಸಿದ್ಧಿ, ಅಲಂಕಾರಿಕ ವಸ್ತುಗಳಿಗೆ ಖರ್ಚು.

**ಕುಂಭ:** ನಿಮ್ಮ ಪ್ರಯತ್ನಗಳಿಗೆಲ್ಲ ಉತ್ತಮ ಫಲ, ಖರ್ಚಿನ ಬಗ್ಗೆ ನಿಯಂತ್ರಣವಿರಲಿ, ಗುರಿ ಸಾಧನೆ, ದೂರ ಪ್ರಯಾಣ.

**ಮೀನ:** ಸ್ನೇಹಿತರಿಂದ ಬೆಂಬಲ, ಪಾಲುದಾರರೊಡನೆ ಚರ್ಚೆ ಸಾಧ್ಯತೆ, ಕೌಟುಂಬಿಕ ಜೀವನದಲ್ಲಿ ಸುಖ ಶಾಂತಿ.

## ಅಂತರರಾಷ್ಟ್ರೀಯ ನೃತ್ಯ ದಿನ




ಏಪ್ರಿಲ್ 29 ಅಂತರಾಷ್ಟ್ರೀಯ ನೃತ್ಯ ದಿನವಾಗಿದೆ, ಆದ್ದರಿಂದ ನಿಮ್ಮ ನೃತ್ಯ ಬೂಟುಗಳನ್ನು ಹಾಕಿಕೊಳ್ಳಿ ಮತ್ತು ಹೆಜ್ಜೆ ಹಾಕಲು ಸಿದ್ಧರಾಗಿ. ನೃತ್ಯವು ಸಾರ್ವತ್ರಿಕವಾಗಿದೆ - ಪ್ರಪಂಚದಾದ್ಯಂತದ ಪ್ರತಿಯೊಂದು ಸಮಾಜದಲ್ಲಿ ನೇಯ್ದಿದೆ. ಮನುಷ್ಯರು ಕೇವಲ ನೃತ್ಯವನ್ನು ಪ್ರೀತಿಸುತ್ತಾರೆ. ನಾವು ಡ್ಯಾನ್ಸ್ ಫ್ಲೋರ್ನಲ್ಲಿರುವವರಾಗಿರಲಿ ಅಥವಾ ಇತರರ ವೃತ್ತಿಪರ ಪ್ರದರ್ಶನವನ್ನು ನೋಡುತ್ತಿರಲಿ ಅದು ನಮ್ಮನ್ನು ಒಟ್ಟಿಗೆ ತರುತ್ತದೆ. ನೃತ್ಯವು ಆಹ್ಲಾದಕರ ಮತ್ತು ಪ್ರಭಾವಶಾಲಿಯಾಗಿದೆ.

ಲಿಂಡಿ ಹಾಪ್, ಜಿಟ್ಟರ್ಬಗ್, ಫ್ರೀಸ್ಟೈಲ್, ಟ್ಯಾಂಗೋ, ಬ್ಯಾಲೆ ಮತ್ತು ಹೆಚ್ಚಿನವು, ನಮ್ಮ ದೇಹವನ್ನು ಗ್ರೂವ್ ಮಾಡುವ ಮತ್ತು ತೂಗಾಡುವ ಕಲೆಯನ್ನು ಏಪ್ರಿಲ್ 29 ರಂದು ಅಂತರರಾಷ್ಟ್ರೀಯ ನೃತ್ಯ ದಿನದಂದು ಆಚರಿಸಲಾಗುತ್ತದೆ. ಇಂಟರ್ನ್ಯಾಷನಲ್ ಥಿಯೇಟರ್ ಇನ್ಸ್ಟಿಟ್ಯೂಟ್ ನ ನೃತ್ಯ ಸಮಿತಿಯು 1982 ರಲ್ಲಿ ಪ್ರಪಂಚದಾದ್ಯಂತದ ನೃತ್ಯಗಾರರ ಅದ್ಭುತ ವೈವಿಧ್ಯತೆ ಮತ್ತು ಪ್ರತಿಭೆಯನ್ನು ಎತ್ತಿ ಹಿಡಿಯಲು ಏಪ್ರಿಲ್ 29 ಅನ್ನು ಅಂತರರಾಷ್ಟ್ರೀಯ ನೃತ್ಯ ದಿನವಾಗಿ ಸ್ಥಾಪಿಸಿತು. ಈ ದಿನಾಂಕವನ್ನು ಆಯ್ಕೆಮಾಡಲಾಗಿದೆ ಏಕೆಂದರೆ ಇದು ಆಧುನಿಕ ಬ್ಯಾಲೆಯ ಸೃಷ್ಟಿಕರ್ತ ಜೀನ್-ಜಾರ್ಜಸ್ ನೊವೆರ್ರೆ (1727-1810) ಅವರ ಜನ್ಮದಿನವನ್ನು ಸೂಚಿಸುತ್ತದೆ.

ಇಂಟರ್ನ್ಯಾಶನಲ್ ಥಿಯೇಟರ್ ಇನ್ಸ್ಟಿಟ್ಯೂಟ್ ಈ ರಜಾದಿನವನ್ನು ಪ್ರಪಂಚದಾದ್ಯಂತ ನೃತ್ಯವನ್ನು ಉತ್ತೇಜಿಸಲು, ನೃತ್ಯದ ಮೌಲ್ಯದ ಬಗ್ಗೆ ಜನರಿಗೆ ಅರಿವು ಮೂಡಿಸಲು ಮತ್ತು ನೃತ್ಯ ಸಮುದಾಯವು ತಮ್ಮ ಕೆಲಸವನ್ನು ವ್ಯಾಪಕ ಪ್ರಮಾಣದಲ್ಲಿ ಉತ್ತೇಜಿಸಲು ಅನುವು ಮಾಡಿಕೊಡುತ್ತದೆ. ಸರ್ಕಾರಗಳು ಮತ್ತು ಅಭಿಪ್ರಾಯ ನಾಯಕರು ಅದರ ಎಲ್ಲಾ ಪ್ರಕಾರಗಳಲ್ಲಿ ನೃತ್ಯದ ಮೌಲ್ಯ ಮತ್ತು ಪ್ರಾಮುಖ್ಯತೆಯನ್ನು ಹೆಚ್ಚು ಅರಿತುಕೊಳ್ಳಬೇಕು ಮತ್ತು ಅದನ್ನು ಬೆಂಬಲಿಸಬೇಕು ಎಂಬುದು ಆಶಯ. ಇದೆಲ್ಲದರ ಮೇಲೆ, ನಾವು ನೃತ್ಯವನ್ನು ಆನಂದಿಸಲು ಮತ್ತು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳಲು ಅಂತರರಾಷ್ಟ್ರೀಯ ನೃತ್ಯ ದಿನವನ್ನು ರಚಿಸಲಾಗಿದೆ. ಪ್ರತಿ ವರ್ಷ ಖಖಿಖ ಅಧಿಕೃತ ರಜಾ ಸಂದೇಶವನ್ನು ಬರೆಯಲು ಅನುಕರಣೀಯ ನೃತ್ಯ ಸಂಯೋಜಕ ಅಥವಾ ನರ್ತಕಿಯನ್ನು ಆಯ್ಕೆ ಮಾಡುತ್ತದೆ. ಅವರ ವೆಬ್ಸೈಟ್ ಅವರ ವಾರ್ಷಿಕ ಗಾಲಾ ಮತ್ತು ಪ್ರಪಂಚದಾದ್ಯಂತದ ಇತರ ಜಾಹೀರಾತು ಘಟನೆಗಳ ಸ್ಥಳವನ್ನು ಪಟ್ಟಿ ಮಾಡುತ್ತದೆ.ನೃತ್ಯದ ಪುರಾವೆಗಳು 9,000 ವರ್ಷಗಳ ಹಿಂದೆ ಕಂಡುಬಂದಿವೆ ಮತ್ತು ಇದು ಪ್ರಪಂಚದಾದ್ಯಂತದ ವಿದ್ಯಮಾನವಾಗಿ ಬೆಳೆದಿದೆ. ಈ ರಜಾದಿನವು ಹೊಸ ಶೈಲಿಗಳನ್ನು ಕಲಿಯುವಾಗ ಜನರು ತಮ್ಮ ನೆಚ್ಚಿನ ಪ್ರಕಾರದ ನೃತ್ಯವನ್ನು ಆಚರಿಸಲು ಪ್ರೋತ್ಸಾಹಿಸುತ್ತದೆ.

ಸಂಜೆ ಮುಗಿಲು
ಸೋಮವಾರ
29.4.2024
7

# ಶ್ರೀಲಂಕಾದಲ್ಲಿ ಸೀತಾಮಾತೆ ದೇಗುಲ ಪ್ರತಿಷ್ಠಾಪನೆ: ಭಾರತದಿಂದ ನೀರು ರವಾನೆ



**ಶ್ರೀಲಂಕಾ:** ಶ್ರೀಲಂಕಾದಲ್ಲಿ ಸೀತಾಮಾತೆ ದೇಗುಲ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ಈ ದೇಗುಲಕ್ಕೆ ಭಾರತದ ಸರಯೂ ನದಿಯಿಂದ ಪವಿತ್ರ ನೀರನ್ನು ರವಾನೆ ಮಾಡಲಾಗಿದೆ.

ಸೀತಾ ದೇವಿಗೆ ಸಮರ್ಪಿತವಾಗಿರುವ ಸೀತಾ ಅಮ್ಮನ ದೇವಾಲಯದ ಪವಿತ್ರ ಕಾರ್ಯಕ್ರಮಕ್ಕಾಗಿ ಶ್ರೀಲಂಕಾಕ್ಕೆ ಪವಿತ್ರ ಸರಯೂ ನದಿ ನೀರನ್ನು ಕಳುಹಿಸುವ ಪ್ರಕ್ರಿಯೆಯನ್ನು ಭಾರತ ಪ್ರಾರಂಭಿಸಿದೆ.

ಮೇ 19 ರಂದು ಸೀತಾ ಅಮ್ಮನವರ ದೇವಸ್ಥಾನದ ಮಹಾಮಸ್ತಕಾಭಿಷೇಕ ಕಾರ್ಯಕ್ರಮ ನಡೆಯಲಿದ್ದು, ಶ್ರೀಲಂಕಾದ ಪ್ರತಿನಿಧಿಗಳು ಉತ್ತರ ಪ್ರದೇಶ ಸರ್ಕಾರಕ್ಕೆ ಬರೆದ ಪತ್ರದ ನಂತರ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಧಾರ್ಮಿಕ ಸಮಾರಂಭಗಳಿಗೆ ಸರಯೂ ನದಿ ನೀರು ಮತ್ತು ದೇವಾಲಯದಲ್ಲಿ ಸೀತಾ ದೇವಿಯ ವಿಗ್ರಹವನ್ನು ಪ್ರತಿಷ್ಠಾಪಿಸಲು ವಿನಂತಿಸಲಾಗಿದೆ. ಉತ್ತರ ಪ್ರದೇಶ ಸರ್ಕಾರದ ನಿರ್ದೇಶನದ ಮೇರೆಗೆ ಪ್ರವಾಸೋದ್ಯಮ ಇಲಾಖೆಗೆ ಪವಿತ್ರ ಜಲವನ್ನು ಸಾಗಿಸುವ ಜವಾಬ್ದಾರಿಯನ್ನು ನೀಡಲಾಗಿದೆ.

ಇನ್ನು ಶ್ರೀಲಂಕಾ ಮತ್ತು ಉತ್ತರ ಪ್ರದೇಶ ಸರ್ಕಾರದ ಕಾರ್ಯವನ್ನು ಅಯೋಧ್ಯ ರಾಮಜನ್ಮಭೂಮಿ ಟ್ರಸ್ಟ್ ಶ್ಲಾಘಿಸಿದ್ದು, ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಬಲಪಡಿಸುವಲ್ಲಿ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಬೆಳೆಸುವಲ್ಲಿ ಇದರ ಮಹತ್ವ ಅಧಿಕವಾಗಿದೆ.

ಈ ಬಗ್ಗೆ ಮಾತನಾಡಿರುವ ಅಯೋಧ್ಯಾ ತೀರ್ಥ ವಿಕಾಸ ಪರಿಷತ್ನ ಸಿಇಒ ಸಂತೋಷ್ ಕುಮಾರ್ ಶರ್ಮಾ ಅವರು, 'ಶ್ರೀಲಂಕಾದಲ್ಲಿ ಸೀತಾ ಅಮ್ಮನ ದೇವಾಲಯವನ್ನು ನಿರ್ಮಿಸಲಾಗುತ್ತಿದೆ. ದೇವಾಲಯದ ಪ್ರತಿನಿಧಿಯು ಉತ್ತರ ಪ್ರದೇಶ ಸರ್ಕಾರದಿಂದ ಸರಯೂ ನದಿ ನೀರನ್ನು ಕೇಳಿದ್ದಾರೆ. ನಾವು ಪವಿತ್ರ ನೀರನ್ನು ಕಲಶದಲ್ಲಿ ಇಟ್ಟು ರವಾನಿಸುತ್ತೇವೆ. ಮೇ 19 ರಂದು ಧಾರ್ಮಿಕ ಕ್ರಿಯೆಗಳು ನಡೆಯಲಿದ್ದು, ಈ ಕ್ರಿಯೆಗಳಿಗೆ ಇದೇ ಪವಿತ್ರ ಜಲವನ್ನು ಬಳಕೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

# ಮೋದಿ ಮದುವೆ ಮನೆಯಲ್ಲಿ ಕೂತ ಮಾವ ಇದ್ದಂತೆ: ಪ್ರಿಯಾಂಕಾ

**ಗಾಂಧಿನಗರ:** ''ಪ್ರಧಾನಿ ಮೋದಿಯವರು ಮದುವೆ ಮನೆಯಲ್ಲಿ ಕೂತ ಮಾವ ಇದ್ದಂತೆ. ಈ ಮಾವ ಮೂಲೆಯಲ್ಲಿ ಕುಳಿತು ಏನೇನೋ ಹೇಳುತ್ತಿರುತ್ತಾರೆ. ಅದೇ ರೀತಿ, ಮೋದಿ ಕೂಡ ಸುಳ್ಳುಗಳನ್ನು ಹೇಳುತ್ತಾ ತಿರುಗಾಡುತ್ತಿದ್ದಾರೆ. ಅವರನ್ನು ಯಾರೂ ನಂಬುವುದಿಲ್ಲ'. ಹೀಗೆಂದು ಹೇಳಿರುವುದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ವಾದ್ರಾ.



ಶನಿವಾರ ಗುಜರಾತ್ನಲ್ಲಿ ಪ್ರಚಾರ ರ್ಯಾಲಿಯಲ್ಲಿ ಮಾತನಾಡಿದ ಅವರು, ''ಪಿತ್ರಾರ್ಜಿತ ತೆರಿಗೆ ಕಾನೂನು, ಸಂಪತ್ತು ಹಂಚಿಕೆಯಂಥ ಲಾಜಿಕ್ ಇಲ್ಲದ ಸುಳ್ಳುಗಳನ್ನು ಮೋದಿ ಹೇಳುತ್ತಾರೆ. ಮದುವೆ ಮನೆಯಲ್ಲಿರುವ ಮಾವ ಬಂದು ನಿಮ್ಮ ಬಳಿ, ''ಒಂದು ರಾಜಕೀಯ ಪಕ್ಷವು ಎಕ್ಸ್ ರೇ ಯಂತ್ರವನ್ನು ನಿಮ್ಮ ಮನೆಗೆ ತಂದು ಎಲ್ಲ ಉಳಿತಾಯದ ಹಣವನ್ನು, ಮಂಗಳಸೂತ್ರ, ಬಂಗಾರವನ್ನು ಸ್ಕ್ಯಾನ್ ಮಾಡಿ, ಕಸಿದುಕೊಂಡು ಬೇರೆಯವರಿಗೆ ನೀಡಲಿದೆ' ಎಂದು ಹೇಳಿದರೆ ನೀವು ನಂಬುತ್ತೀರಾ? ಮೋದಿಯವರೂ ಅದನ್ನೇ ಮಾಡುತ್ತಿದ್ದಾರೆ' ಎಂದಿದ್ದಾರೆ. ಇದೇ ವೇಳೆ, ಸಂವಿಧಾನವನ್ನು ಬದಲಿಸುವುದಿಲ್ಲ ಎಂದು ಬಿಜೆಪಿ ನಾಯಕರು ತಾತ್ಕಾಲಿಕವಾಗಿ ನಟನೆ ಮಾಡುತ್ತಿರಬಹುದು. ಆದರೆ ಅಧಿಕಾರಕ್ಕೆ ಮರಳಿದ ಬಳಿಕ ಸಂವಿಧಾನವನ್ನು ಬದಲಿಸಲಿದ್ದಾರೆ ಎಂದು ಪ್ರಿಯಾಂಕಾ ಹೇಳಿದ್ದಾರೆ.

## ಉದ್ಯೋಗ ಕಿತ್ತುಕೊಳ್ಳಲಿದೆ ಕೃತಕ ಬುದ್ಧಿಮತ್ತೆ : ಟಿಸಿಎಸ್ ಸಿಇಒ ಕೆ ಕೃತಿವಾಸನ್

**ನವದೆಹಲಿ:** ಮುಂದೊಂದು ದಿನ ಇಡೀ ಏಷ್ಯಾದಾದ್ಯಂತ ಕಾಲ್ ಸೆಂಟರ್ಗಳು ಬಂದ್ ಆಗಲು ಕೃತಕ ಬುದ್ಧಿಮತ್ತೆ ಕಾರಣವಾಗುತ್ತದೆ ಎಂದು ಟಿಸಿಎಸ್ ಸಿಇಒ ಕೆ ಕೃತಿವಾಸನ್ ಹೇಳಿದ್ದಾರೆ. ಫೈನಾನ್ಷಿಯಲ್ ಟೈಮ್ಸ್ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿರುವ ಅವರು, ಸುಧಾರಿತ ಕೃತಕ ಬುದ್ಧಿಮತ್ತೆಯು ಉದ್ಯೋಗ ಕಡಿತದ ಮೇಲೆ ಪ್ರಭಾವ ಬೀರಲಿದೆ. ಇಂದು



ಎಲ್ಲ ದೇಶಗಳು ಕೃತಕ ಬುದ್ಧಿಮತ್ತೆಯನ್ನು ಹೆಚ್ಚೆಚ್ಚು ಬಳಸಿಕೊಳ್ಳುತ್ತಿವೆ. ಇದು ಉದ್ಯೋಗ ಕಡಿತವಾಗಲು ಕಾರಣವಾಗುತ್ತಿವೆ. ಕಾಲ್ ಸೆಂಟರ್ಗಳ ಮೇಲೆ ಎಐ ದುಷ್ಪರಿಣಾಮ ಬೀರಲಿವೆ. ಮುಂದಿನ ಒಂದು ವರ್ಷದ ಅವಧಿಯಲ್ಲಿ ಕಾಲ್ ಸೆಂಟರ್ಗಳು ಬಾಗಿಲು ಮುಚ್ಚಲಿವೆ ಎಂದು ನುಡಿದಿದ್ದಾರೆ. ಇನ್ನು ಇತ್ತೀಚಿಗೆ ಮಾಧ್ಯಮಗಳಿಗೆ ಮಾತನಾಡಿದ್ದ ಲಿಂಕ್ಡ್ ಇನ್ನ ಮುಖ್ಯ ಉತ್ಪನ್ನ ಅಧಿಕಾರಿ ಟೊಮರ್ ಕೋಹೆನ್ ಅವರು ಭಾರತದಲ್ಲಿನ ಅರ್ಧಕ್ಕಿಂತ ಹೆಚ್ಚು ಉದ್ಯೋಗಗಳ ಮೇಲೆ ಕೃತಕ ಬುದ್ಧಿಮತ್ತೆ (ಎಐ) ಪ್ರಭಾವ ಬೀರಲಿದೆ ಎಂದು ಹೇಳಿದ್ದರು. ಭಾರತೀಯ ವೃತ್ತಿಪರರು ಜಾಗತಿಕವಾಗಿ ಎಲ್ಲರಿಗಿಂತಲೂ ಹೆಚ್ಚಾಗಿ ಕೃತಕ ಬುದ್ಧಿಮತ್ತೆ ಕೌಶಲ್ಯಗಳನ್ನು ಬಳಸುತ್ತಾರೆ. ಲಿಂಕ್ಡ್ಇನ್ನಲ್ಲಿ ಕೃತಕ ಬುದ್ಧಿಮತ್ತೆ ಸಂಬಂಧಿತ ಉದ್ಯೋಗದ ಉಲ್ಲೇಖಗಳು 21 ಪಟ್ಟು ಹೆಚ್ಚಾಗಿವೆ. ಹೆಚ್ಚು ಕೃತಕ ಬುದ್ಧಿಮತ್ತೆ ಪ್ರತಿಭೆಯನ್ನು ಹೊಂದಿರುವ ಅಗ್ರ ಐದು ದೇಶಗಳಲ್ಲಿ ಭಾರತವು ಸೇರಿದೆ, ಎಂದು ಎಕನಾಮಿಕ್ ಟೈಮ್ಸ್ಗೆ ನೀಡಿದ ವಿಶೇಷ ಸಂದರ್ಶನದಲ್ಲಿ ಟೊಮರ್ ಕೋಹೆನ್ ಹೇಳಿದ್ದರು.

# ಟ್ರೋಲ್‌ಗಳಿಗೆ 'ಯುಪಿ ಬೋರ್ಡ್ ಟಾಪರ್' ಪ್ರತಿಕ್ರಿಯೆ



**ನವದೆಹಲಿ:** ಈ ವರ್ಷದ ಉತ್ತರ ಪ್ರದೇಶದ 10 ನೇ ತರಗತಿ ಬೋರ್ಡ್ ಪರೀಕ್ಷೆಯಲ್ಲಿ ಶೇಕಡಾ 98.5 ರಷ್ಟು ಅಂಕಗಳೊಂದಿಗೆ ಅಗ್ರಸ್ಥಾನ ಪಡೆದ ಪ್ರಾಚಿ ನಿಗಮ್, ತನ್ನ ಮುಖದ ಕೂದಲಿಗಾಗಿ ತನ್ನನ್ನು ಗುರಿಯಾಗಿಸಿಕೊಂಡಿರುವ ಆನ್ಲೈನ್ ಟ್ರೋಲಿಗರ ವಿರುದ್ಧ ಮಾತನಾಡಿದ್ದಾರೆ.

ತನ್ನ ನೋಟಕ್ಕಿಂತ ತನ್ನ ಶೈಕ್ಷಣಿಕ ಸಾಧನೆಗಳು ಮುಖ್ಯವೆಂದು ಅವಳು ಹೇಳಿದ್ದಾಳೆ.

ಜನರು ನನ್ನನ್ನು ಟ್ರೋಲ್ ಮಾಡುತ್ತಿರುವುದನ್ನು ನೋಡಿದಾಗ, ಅದು ನನಗೆ ಹೆಚ್ಚು ತೊಂದರೆ ನೀಡಲಿಲ್ಲ. ನನ್ನ ಅಂಕಗಳು ಮುಖ್ಯ, ನನ್ನ ಮುಖದ ಕೂದಲಿನಲ್ಲ ಎಂದು ಪ್ರಾಚಿ ಹೇಳಿದರು, ಅವರ ನೋಟದ ಬಗ್ಗೆ ನಕಾರಾತ್ಮಕ ಕಾಮೆಂಟ್ಗಳಿಂದ ಪ್ರಭಾವಿತರಾಗಲಿಲ್ಲ.

ಆನ್ಲೈನ್ ಟ್ರೋಲಿಂಗ್ ಮತ್ತು ತನ್ನ ನೋಟದ ಟೀಕೆಗಳ ಸಮಯದಲ್ಲಿ ತನ್ನೊಂದಿಗೆ ನಿಂತವರಿಗೆ ಪ್ರಾಚಿ ಕೃತಜ್ಞತೆ ಸಲ್ಲಿಸಿದರು.

ಯುಪಿ ಬೋರ್ಡ್ ಪರೀಕ್ಷೆಯಲ್ಲಿ ಅಗ್ರಸ್ಥಾನಿಯಾಗಿ ನನ್ನ ಚಿತ್ರವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಾಗ, ಕೆಲವರು ನನ್ನನ್ನು ಟ್ರೋಲ್ ಮಾಡಿದರು. ಅದೇ ಸಮಯದಲ್ಲಿ, ನನ್ನನ್ನು ಬೆಂಬಲಿಸಿದ ಜನರು ಇದ್ದರು. ನಾನು ಅವರೆಲ್ಲರಿಗೂ ಧನ್ಯವಾದ ಹೇಳಲು ಬಯಸುತ್ತೇನೆ ಎಂದು ಅವರು ಹೇಳಿದರು.

ನನ್ನ ಮುಖದ ಕೂದಲಿನ ಬಗ್ಗೆ ವಿಲಕ್ಷಣವಾಗಿ ಭಾವಿಸುವವರು ಟ್ರೋಲಿಂಗ್ ಮುಂದುವರಿಸಬಹುದು, ಅದು ಯಾವುದೇ ವ್ಯತ್ಯಾಸವನ್ನುಂಟು ಮಾಡುವುದಿಲ್ಲ ಎಂದು ಪ್ರಾಚಿ ಟೀಕೆಗಳಿಂದ ವಿಚಲಿತರಾಗಲಿಲ್ಲ ಎಂದಿದ್ದಾರೆ.

# ಪಿತ್ರಾರ್ಜಿತ ತೆರಿಗೆ ವಿಧಿಸುವುದಿಲ್ಲ ಪ್ರಧಾನಿ ಮೋದಿ ಸ್ಪಷ್ಟನೆ



**ನವದೆಹಲಿ:** ದಾಖಲೆಯ ಮೂರನೇ ಅವಧಿಗೆ ಮತ್ತೆ ಆಯ್ಕೆಯಾದರೆ ಆನುವಂಶಿಕ ತೆರಿಗೆಯನ್ನ ಪರಿಚಯಿಸುವ ಸಾಧ್ಯತೆಯನ್ನ ಪ್ರಧಾನಿ ನರೇಂದ್ರ ಮೋದಿ ತಳ್ಳಿಹಾಕಿದರು.

ಖಾಸಗಿ ವಾಹಿನಿಯೊಂದರ ಸಂದರ್ಶನದಲ್ಲಿ ಕಾಂಗ್ರೆಸ್ ಮುಖಂಡ ಸ್ಯಾಮ್ ಪಿತ್ರೋಡಾ ಅವರ ಇತ್ತೀಚಿನ ಹೇಳಿಕೆಗಳ ಬಗ್ಗೆ ಚರ್ಚಿಸಲಾಯಿತು.

ಸಂಪತ್ತಿನ ಮರುಹಂಚಿಕೆ ಮೂಲಕ ಅಸಮಾನತೆಯನ್ನು ಕಡಿಮೆ ಮಾಡಲು ಭಾರತದಲ್ಲಿ ಯುಎಸ್ ಮಾದರಿಯ ಆನುವಂಶಿಕ ತೆರಿಗೆಯ ಅಗತ್ಯವನ್ನು ಯುಎಸ್ ಮೂಲದ ಕಾಂಗ್ರೆಸ್ನ ವಿದೇಶಿ ವಿಭಾಗದ ಅಧ್ಯಕ್ಷರು ಪ್ರತಿಪಾದಿಸಿದ್ದರು.

ರಾಜಸ್ಥಾನದಲ್ಲಿ ಇತ್ತೀಚೆಗೆ ನಡೆದ ಚುನಾವಣಾ ರ್ಯಾಲಿಯಲ್ಲಿ ಮೋದಿ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿ, ಸಂಪತ್ತನ್ನ ಮರುಹಂಚಿಕೆ ಮಾಡುವ ಯೋಜನೆಯು ಯಾರು ಎಷ್ಟು ಹಣ ಮತ್ತು ಚಿನ್ನವನ್ನು ಹೊಂದಿದ್ದಾರೆಂದು ಕಂಡುಹಿಡಿಯಲು ಮತ್ತು ಅದನ್ನು ಮುಸ್ಲಿಮರು ಮತ್ತು ಒಳನುಸುಳುಕೋರರಿಗೆ ವಿತರಿಸುವ ತಂತ್ರವಾಗಿದೆ ಎಂದು ಆರೋಪಿಸಿದರು.

## ಪಾಕ್ ಉಪಪ್ರಧಾನಿಯಾಗಿ ವಿದೇಶಾಂಗ ಸಚಿವ ಇಶಾಕ್ ಧರ್ ನೇಮಕ



**ಇಸ್ಲಾಮಾಬಾದ್:** ಪಾಕಿಸ್ತಾನದ ಉಪಪ್ರಧಾನಿಯಾಗಿ ವಿದೇಶಾಂಗ ಸಚಿವ ಇಶಾಕ್ ಧರ್ ಅವರನ್ನು ಪ್ರಧಾನಿ ಶಹಬಾಝ್ ಶರೀಫ್ ಅವರು ರವಿವಾರ ನೇಮಕಗೊಳಿಸಿದ್ದಾರೆ. ಸಂಪುಟ ಸಭೆಯ ಬಿಡುಗಡೆಗೊಳಿಸಿದ ಅಧಿಸೂಚನೆಯ ಮೂಲಕ ಈ ನಿರ್ಧಾರವನ್ನು ಪ್ರಕಟಿಸಲಾಗಿದೆ. ಈ ಹಠಾತ್ ನೇಮಕವನ್ನು ಸರಕಾರ ನಾಯಕತ್ವ ಶ್ರೇಣಿಯೊಳಗಿನ ವ್ಯೂಹಾತ್ಮಕ ನಡೆಯಾಗಿದೆಯಂದು ಪಾಕ್ ಮಾಧ್ಯಮಗಳು ಬಣ್ಣಿಸಿವೆ. ಪಾಕಿಸ್ತಾನ ಮುಸ್ಲಿಂ ಲೀಗ್ (ಪಿಎಂಎಲ್-ಎನ್)ನ ನಾಯಕನಾದ ಇಶಾಕ್ ಧರ್ ಪ್ರಸಕ್ತ ಪಾಕ್ ವಿದೇಶಾಂಗ ಸಚಿವನಾಗಿರುವ ಕಾರ್ಯನಿರ್ವಹಿಸುತ್ತಿದ್ದಾರೆ. ಅವರನ್ನು ಸಾಮಾನ್ಯ ಹಿತಾಸಕ್ತಿಗಳ ಮಂಡಳಿ(ಸಿಸಿಐ)ಗೂ ಸೇರ್ಪಡೆಗೊಳಿಸಲಾಗಿದೆ. ಸಿಸಿಐ ಪಾಕಿಸ್ತಾನದ ಪ್ರಮುಖ ನೀತಿ ನಿರ್ಧಾರಕ ಸಂಸ್ಥೆಯಾಗಿದ್ದು, ಗಣನೀಯವಾದ ಅಧಿಕಾರವನ್ನು ಹೊಂದಿದೆ.ಮಾರ್ಚ್ ತಿಂಗಳ ಆರಂಭದಲ್ಲಿ ಪ್ರಧಾನಿ ಶಹಬಾಝ್ ಶರೀಫ್ ಅವರು ಸಾಮಾನ್ಯ ಹಿತಾಸಕ್ತಿಗಳ ಮಂಡಳಿ (ಸಿಸಿಐ)ಯನ್ನು ಪುನಾರಚನೆಗೊಳಿಸಿದ್ದರು. ವಿತ್ತ ಸಚಿವರ ಬದಲಿಗೆ ವಿದೇಶಾಂಗ ಸಚಿವರನ್ನು ಅದರಲ್ಲಿ ಸೇರ್ಪಡೆಗೊಳಿಸಿದ್ದರು. ರಕ್ಷಣಾ ಸಚಿವ ಖ್ವಾಝಾ ಆಸೀಫ್ ಹಾಗೂ ಕೇಸರಿ ಸಚಿವ ಅಮೀರ್ ಮುಖಾಂ ಅವರನ್ನೂ ಸಮಿತಿಗೆ ಸೇರ್ಪಡೆಗೊಳಿಸಲಾಗಿದೆಯೆಂದು ಅಧಿಸೂಚನೆ ತಿಳಿಸಿದೆ.

# ಭೋಜ್ಪುರಿ ಜನಪ್ರಿಯ ನಟಿ ಅಮೃತಾ ಪಾಂಡೆ ಆತ್ಮಹತ್ಯೆ



ಪಟ್ನಾ: ಭೋಜ್ಪುರಿ ಚಿತ್ರರಂಗದ ಅತ್ಯಂತ ಜನಪ್ರಿಯ ನಟಿ ಅಮೃತಾ ಪಾಂಡೆ ಶನಿವಾರ ಬಿಹಾರದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಭಾಗಲ್ಪುರದ ಅಪಾರ್ಟ್ಮೆಂಟ್ನಲ್ಲಿ ಅವರ ಶವ ಪತ್ತೆಯಾಗಿದೆ. ಜೋಗ್ಸರ್ ಪೊಲೀಸ್ ಠಾಣೆ ವ್ಯಾಪ್ತಿಯ ದಿವ್ಯಧರ್ಮ ಅಪಾರ್ಟ್ಮೆಂಟ್ನಲ್ಲಿ ಸೀಲಿಂಗ್ ಫ್ಯಾನ್ಗೆ ಕಟ್ಟಿದ ಸೀರೆಯಲ್ಲಿ ನೇಣು ಬಿಗಿದು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸ್ಥಳದಲ್ಲಿ ಯಾವುದೇ ಡೆತ್ನೋಟ್ ಪತ್ತೆಯಾಗಿಲ್ಲ ಎಂದು ಮೂಲಗಳು ಹೇಳಿವೆ. ಆದರೆ ಆತ್ಮಹತ್ಯೆಗೆ ಮುನ್ನ ಅವರು ವಾಟ್ಸಾಪ್ನ ಸ್ಟೇಟಸ್ನಲ್ಲಿ ಕೆಲವೊಂದು ವಿಚಾರಗಳನ್ನು ತಿಳಿಸಿದ್ದರು ಎನ್ನಲಾಗಿದ್ದು, ಈ ನಿಟ್ಟಿನಲ್ಲಿ ತನಿಖೆ ನಡೆಯುತ್ತಿದೆ.ಅಮೃತಾ ಪಾಂಡೆ ಅವರು ತಮ್ಮ ಪತಿಯೊಂದಿಗೆ ಮುಂಬೈಯಲ್ಲಿ ವಾಸವಾಗಿದ್ದಾರೆ. ಕೆಲವು ದಿನಗಳ ಹಿಂದೆ ಸಂಬಂಧಿಕರೊಬ್ಬರು ವಿವಾಹ ಸಮಾರಂಭದಲ್ಲಿ ಭಾಗಿಯಾಗಲು ಅವರು ಬಿಹಾರದ ಭಾಗಲ್ಪುರಕ್ಕೆ ಆಗಮಿಸಿದ್ದರು. ಬಳಿಕ ಕೆಲವು ದಿನ ಇಲ್ಲಿಯೇ ಉಳಿಯಲು ನಿರ್ಧರಿಸಿದ್ದರು. ಶನಿವಾರ ತಡರಾತ್ರಿಯವರೆಗೆ ಎಚ್ಚರವಾಗಿದ್ದ ಅವರು ತನ್ನ ವಾಟ್ಸಾಪ್ ಸ್ಟೇಟಸ್ನಲ್ಲಿ ರಹಸ್ಯ ಟಿಪ್ಪಣಿಯನ್ನು ಪೋಸ್ಟ್ ಮಾಡಿದ್ದರು. ಸದ್ಯ ಅಧಿಕಾರಿಗಳು ಇದರ ಸುತ್ತ ತನಿಖೆ ನಡೆಸಲು ಮುಂದಾಗಿದ್ದಾರೆ. ಸ್ಟೇಟಸ್ನಲ್ಲಿ ಅವರು ಏನು ಬರೆದಿದ್ದರು ಎನ್ನುವ ವಿಚಾರವೇ ಸದ್ಯ ಕುತೂಹಲ ಕೆರಳಿಸಿದೆ. ಅದರಲ್ಲಿ ಅವರು, 'ಅವಳ ಜೀವನ 2 ದೋಣಿಗಳಲ್ಲಿ ಸಾಗುತ್ತಿದೆ. ನನ್ನ ಜೀವನವನ್ನು ಕೊನೆಗೊಳಿಸುವ ಮೂಲಕ ನಾನು ಅವಳ ದಾರಿಯನ್ನು ಸುಗಮಗೊಳಿಸುತ್ತೇನೆ? ಎಂದು ಬರೆದುಕೊಂಡಿದ್ದರು. ಹೀಗಾಗಿ ಅಮೃತಾ ಪಾಂಡೆ ಅವರ ಸ್ಟೇಟಸ್ ಹಲವು ಅನುಮಾನಕ್ಕೆ ಕಾರಣವಾಗಿದೆ. ಪತಿಯ ಇನ್ನೊಂದು ಸಂಬಂಧದಿಂದ ಮನನೊಂದು ಅಮೃತಾ ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎನ್ನುವ ಮಾತೂ ಕೇಳಿ ಬಂದಿದೆ.

## ಪ.ಬಂಗಾಳದಲ್ಲಿ ಬಿಜೆಪಿ ನಾಯಕಿ ಮೇಲೆ ಮಾರಣಾಂತಿಕ ಹಲ್ಲೆ

**ನವದೆಹಲಿ:** ಕೋಲ್ಕತ್ತಾದಲ್ಲಿ ಶನಿವಾರ ಸಂಜೆ ತೃಣಮೂಲ ಕಾಂಗ್ರೆಸ್ ಗೂಂಡಾಗಳಿಂದ ಬಂಗಾಳದ ಬಿಜೆಪಿ ನಾಯಕಿ ಸರಸ್ವತಿ ಸರ್ಕಾರ್ ಅವರ ಮೇಲೆ ಹಲ್ಲೆಯಾಗಿದೆ. ಹಲ್ಲೆಯಿಂದಾಗಿ ಸರಸ್ವತಿ ಅವರ ತಲೆಗೆ ತೀವ್ರ ಗಾಯವಾಗಿದೆ. ಈ ಘಟನೆಯನ್ನು ಬಿಜೆಪಿ ತೀವ್ರವಾಗಿ ಖಂಡಿಸಿದೆ. ಪಶ್ಚಿಮ ಬಂಗಾಳದ ಬಿಜೆಪಿಯ ಉಸ್ತುವಾರಿ ಅಮಿತ್ ಮಾಳವಿಯಾ ಟ್ವೀಟ್ ಮಾಡಿ, ಪಶ್ಚಿಮ ಬಂಗಾಳದಲ್ಲಿ ಯಾವುದೇ ಮಹಿಳೆ ಸುರಕ್ಷಿತವಾಗಿಲ್ಲ ಎಂದು ಕಿಡಿ ಕಾರಿದ್ದಾರೆ. ಕಳೆದ ರಾತ್ರಿ, ಟಿಎಂಸಿ ಗೂಂಡಾಗಳು ಬಿಜೆಪಿಯ ಕಸ್ಬಾ ಮಂಡಲ್ ಅಧ್ಯಕ್ಷೆ (ದಕ್ಷಿಣ ಕೋಲ್ಕತ್ತಾದಲ್ಲಿ) ಸರಸ್ವತಿ ಸರ್ಕಾರ್ ಅವರನ್ನು ಗುರಿಯಾಗಿಸಿ ಹಲ್ಲೆ ನಡೆಸಿದ್ದಾರೆ. ಕೊಲ್ಕತ್ತಾ ಯಾವ ಮಹಿಳೆಗೂ ಸುರಕ್ಷಿತವಾಗಿಲ್ಲ. ಸಂದೇಶ್ಖಾಲಿ ಪರಿಸ್ಥಿತಿ ಕೂಡ ತೀರಾ ಹದಗೆಟ್ಟಿದೆ. ಬಂಗಾಳದ ಜನರು ಈ ದುಷ್ಕೃತ್ಯಗಳಿಗೆ ತಕ್ಕ ಪಾಠ ಹೇಳುತ್ತಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ.



# ಇರಾಕ್‌ನ ಟಿಕ್ ಟಾಕ್ ಸ್ಟಾರ್ ಓಂ ಫಹಾದ್ ದುಷ್ಕರ್ಮಿಗಳ ಗುಂಡಿಗೆ ಬಲಿ



**ಬಾಗ್ದಾದ್:** ಇರಾಕ್ನ ಟಿಕ್ ಟಾಕ್ ಸ್ಟಾರ್ ಓಂ ಫಹಾದ್ ರನ್ನು ಬಾಗ್ದಾದ್ನ ಜೊಯೌನಾ ಜಿಲ್ಲೆಯಲ್ಲಿ ತಡ ರಾತ್ರಿ ದುಷ್ಕರ್ಮಿಗಳ ಗುಂಡಿಗೆ ಬಲಿಯಾಗಿದ್ದಾರೆ.

ಎಸ್ಯುವಿ ಕಾರಿನಲ್ಲಿ ಕುಳಿತಿದ್ದ ಫಹಾದ್ ಮೇಲೆ ಕಪ್ಪು ಬಟ್ಟೆ ಧರಿಸಿ ಬೈಕಿನಲ್ಲಿ ಬಂದಿದ್ದ ದುಷ್ಕರ್ಮಿಗಳು ಏಕಾಏಕಿ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ಘಟನೆ ವಿಡಿಯೋ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಆಂತರಿಕ ವ್ಯವಹಾರಗಳ ಸಚಿವಾಲಯ ಈ ಭೀಕರ ಕೃತ್ಯದ ಬಗ್ಗೆ ಪ್ರತಿಕ್ರಿಯಿಸಿದ್ದು, ಸೂಕ್ತ ತನಿಖೆ ಕೈಗೊಳ್ಳುವುದಾಗಿ ತಿಳಿಸಿದೆ. ಫಹಾದ್ ಅವರ ಮೂಲ ಹೆಸರು ಘುಫ್ರಾನ್ ಸವಧಿಯಾಗಿದ್ದು, ಅವರು ಟಿಕ್ಟಾಕ್ನಲ್ಲಿ ಪಾಪ್ ಸಂಗೀತಗಳಿಗೆ ಡಾನ್ಸ್ ಮಾಡಿರುವ ವಿಡಿಯೋಗಳನ್ನು ಶೇರ್ ಮಾಡುತ್ತಿದ್ದರು. ಅವರು ಸೋಶಿಯಲ್ ಮೀಡಿಯಾದಲ್ಲಿ 5 ಲಕ್ಷ ಫಾಲೋವರ್ಸ್ ಅನ್ನು ಹೊಂದಿದ್ದರು. ಇದೀಗ ಅವರ ಬರ್ಬರ ಹತ್ಯೆಗೆ ನಿಖರ ಕಾರಣ ಏನೆಂಬುದು ತಿಳಿದುಬಂದಿಲ್ಲ. ಪೊಲೀಸರ ತನಿಖೆ ಮುಂದುವರೆದಿದೆ.

ಇವರು 2023ರಲ್ಲಿ ಮಾಡಿದ್ದ ಅಶ್ಲೀಲ ವಿಡಿಯೋಗಳು ಭಾರೀ ಸದ್ದು ಮಾಡಿದ್ದು, ಆ ವಿಡಿಯೋಗಳು 1 ಮಿಲಿಯನ್ನೂ ಅಧಿಕ ವ್ಯೂಸ್ ಪಡೆದಿದ್ದವು. ಇದಾದ ಬಳಿಕ ಆಕೆಯ ಬಂಧನವಾಗಿದ್ದು, ಕೋರ್ಟ್ ಆರು ತಿಂಗಳ ಜೈಲು ಶಿಕ್ಷೆಯನ್ನೂ ವಿಧಿಸಿತ್ತು ಎಂಬ ಮಾಹಿತಿ ತಿಳಿದು ಬಂದಿದೆ.

# ಬಾಂಗ್ಲಾದಲ್ಲಿ ಉಷ್ಣಮಾರುತ ಉಲ್ಬಣದ ನಡುವೆಯೂ ಶಾಲಾ ಕಾಲೇಜುಗಳು ಪುನಾರಂಭ

**ಢಾಕಾ:** ತೀವ್ರವಾದ ಬಿಸಿಲತಾ ಮುಂದುವರಿದಿದ್ದರೂ, ಬಾಂಗ್ಲಾದೇಶದಲ್ಲಿ ರವಿವಾರ ಶಾಲಾತರಗತಿಗಳು ಪುನಾರಂಭಗೊಂಡಿದ್ದು,ಲಕ್ಷಾಂತರ ವಿದ್ಯಾರ್ಥಿಗಳು ಶಾಲೆಗಳಿಗೆ ಮರಳಿದ್ದಾರೆ. ತೀವ್ರ ಉಷ್ಣ ಮಾರುತದ ಹಿನ್ನೆಲೆಯಲ್ಲಿ ಕಳೆದ ವಾರ ಬಾಂಗ್ಲಾದ್ಯಂತ ಶಾಲಾ,ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ರಾಜಧಾನಿ ಢಾಕದಲ್ಲಿ ಕಳೆದ ವಾರ ಗರಿಷ್ಠ ತಾಪಮಾನ 4.5 ಡಿಗ್ರಿ ಸೆಲ್ಸಿಯಸ್ (7.2-9 ಡಿಗಿ ಫ್ಯಾರನ್ಹೀಟ್) ಆಗಿದ್ದು, ಇದು ಈ ಅವಧಿಯಲ್ಲಿ ಕಳೆದ 30 ವರ್ಷಗಳಲ್ಲೇ ಅತ್ಯಂತ ಗರಿಷ್ಠ ತಾಪಮಾನವಾಗಿದೆ. ದೇಶದಲ್ಲಿ ಉಷ್ಣಮಾರುತದ ಪರಿಸ್ಥಿತಿ ಇನ್ನೂ ಹಲವಾರು ದಿನಗಳ ಕಾಲ ಮುಂದುವರಿಯಲಿದೆ ಎಂದು ವರದಿ ಮಾಡಿದೆ. ಬಾಂಗ್ಲಾದ ನಾಲ್ಕನೇ ಮೂರು ಭಾಗದಷ್ಟು ಭೂಪ್ರದೇಶದ ಮೇಲೆ ಉಷ್ಣ ಮಾರುತ ತೀವ್ರವಾದ ಪರಿಣಾಮ ಬೀರಿದೆಯೆಂದು ಹವಾಮಾನ ತಜ್ಞ ಮುಹಮ್ಮದ್ ಅಬ್ದುಲ್ ಕಲಾಂ ಮಲ್ಲಿಕ್ ತಿಳಿಸಿದ್ದಾರೆ.



# ಭಾರತದ ಭೇಟಿ ರದ್ದುಗೊಳಿಸಿದ ಟೆಸ್ಲಾ ಮಾಲೀಕ ಎಲಾನ್ ಮಸ್ಕ್

**ಶಾಂಘೈ:** ಟೆಸ್ಲಾ ಮಾಲೀಕ ಎಲಾನ್ ಮಸ್ಕ್ ಭಾರತ ಭೇಟಿ ರದ್ದು ಮಾಡಿದ ಬೆನ್ನಲ್ಲೇ ಚೀನಾಕ್ಕೆ ಭೇಟಿ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇತ್ತೀಚೆಗೆ ಎಕ್ಸ್ನಲ್ಲಿ ಕೇಳಿ ಪ್ರಶ್ನೆಗೆ ಮಸ್ಕ್ ಪ್ರತಿಕ್ರಿಯೆ ನೀಡಿದ್ದು, ಶೀಘ್ರವೇ ಚೀನಾದ ಗ್ರಾಹಕರಿಗೆ ಎಫ್ ಎಸ್ಡಿ ಲಭ್ಯವಾಗಲಿದೆ ಎಂದು ಹೇಳಿದ್ದರು. ಆದರೆ ಚೀನಾ ಭೇಟಿ ಕುರಿತು ಟೆಸ್ಲಾ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಎಲೆಕ್ಟ್ರಿಕ್ ವಾಹನ ತಯಾರಿಕೆಯಲ್ಲಿ ಎರಡನೇ ಅತಿದೊಡ್ಡ ಮಾರುಕಟ್ಟೆಯಾದ ಚೀನಾದಲ್ಲಿ ಫುಲ್ ಸೆಲ್ಫ್ ಡ್ರೈವಿಂಗ್ ಸಾಫ್ಟ್ವೇರ್ ರೋಲ್ಔಟ್ ಕುರಿತು ಚರ್ಚಿಸಲು ಮಸ್ಕ್ ಅಲ್ಲಿನ ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇತ್ತೀಚೆಗೆ ಮಸ್ಕ್ ಭಾರತಕ್ಕೆ ಭೇಟಿ ನೀಡುವುದಾಗಿ ತಿಳಿಸಿದ್ದರು. ಆದರೆ ಕೆಲವು ದಿನಗಳ ನಂತರ ಕಂಪನಿಯ ಕರ್ತವ್ಯಗಳನ್ನು ನಿಭಾಯಿಸಬೇಕಾದ್ದರಿಂದ ಭಾರತಕ್ಕೆ ಭೇಟಿ ನೀಡಲು ಸಾಧ್ಯವಿಲ್ಲ ಎಂದು ಭೇಟಿಯನ್ನು ರದ್ದುಗೊಳಿಸಿದ್ದರು.



# ಬರೋಬ್ಬರಿ 602 ಕೋಟಿ ಮೌಲ್ಯದ ಡ್ರಗ್ಸ್ ಪತ್ತೆ! ಗುಜರಾತ್‌ನಲ್ಲಿ 14 ಪಾಕ್ ಪ್ರಜೆಗಳ ಬಂಧನ

ಗಾಂಧಿನಗರ: ಗುಜರಾತ್ ಕರಾವಳಿಯಲ್ಲಿ ಬರೋಬ್ಬರಿ 602 ಕೋಟಿ ಮೌಲ್ಯದ ಮಾದಕ ವಸ್ತುಗಳು ಪತ್ತೆಯಾಗಿದ್ದು, 14 ಮಂದಿ ಪಾಕಿಸ್ತಾನದ ಪ್ರಜೆಗಳನ್ನು ಬಂಧಿಸಲಾಗಿದೆ. ಭಯೋತ್ಪಾದನಾ ನಿಗ್ರಹ ದಳ ಮತ್ತು ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ 14 ಪಾಕಿಸ್ತಾನಿ ಪ್ರಜೆಗಳನ್ನು ಅರೆಸ್ಟ್ ಮಾಡಲಾಗಿದೆ.

ಅವರ ಬಳಿ 602 ಕೋಟಿ ಮೌಲ್ಯದ 86 ಕೆಜಿಗಳಷ್ಟು ನಿಷಿದ್ಧ ಮಾದಕ ದ್ರವ್ಯಗಳು ಇರುವುದು ಪತ್ತೆಯಾಗಿದೆ.

ಕಾರ್ಯಾಚರಣೆಯ ವೇಳೆ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ ಪಾಕಿಸ್ತಾನಿ ಪ್ರಜೆಗಳು, ಎಟಿಎಸ್ ಅಧಿಕಾರಿಗಳ ಮೇಲೆ ದೋಣಿಯನ್ನು ಚಲಾಯಿಸಲು ಪ್ರಯತ್ನಿಸಿದರು. ಗುಂಡಿನ ದಾಳಿಯೂ ನಡೆದಿದೆ. ಭದ್ರತಾ ಏಜೆನ್ಸಿಗಳು ಕಳೆದ ಎರಡು ದಿನಗಳಿಂದ ಅಂತರಾಷ್ಟ್ರೀಯ ಸಮುದ್ರ ಗಡಿಯ ಬಳಿ ಅಂದರೆ ಭಾರತದ ಪ್ರಾದೇಶಿಕ ಜಲ ವ್ಯಾಪ್ತಿಯಲ್ಲಿ ಶೋಧ ಕಾರ್ಯಾಚರಣೆಯನ್ನು ನಡೆಸುತ್ತಿದ್ದವು. ಗುಜರಾತ್ ಮತ್ತು ರಾಜಸ್ಥಾನದಲ್ಲಿ 'ಮಿಯಾಂವ್ ಮಿಯಾಂವ್' ಎಂದು ಜನಪ್ರಿಯವಾಗಿ ಕರೆಯಲ್ಪಡುವ ನಿಷೇಧಿತ ಡ್ರಗ್ ಮೆಫೆಡ್ರೋನ್ ತಯಾರಿಸುವ ಮೂರು ಲ್ಯಾಬ್ಗಳನ್ನು ಎನ್ಸಿಬಿ ಭೇದಿಸಿ, ಈ ವಿಷಯಕ್ಕೆ ಸಂಬಂಧಿಸಿದಂತೆ ಏಳು ಜನರನ್ನು ಬಂಧಿಸಿದ ಒಂದು ದಿನದ ನಂತರ ಈ ಪ್ರಕರಣ ಸಂಭವಿಸಿದೆ. ಡ್ರಗ್ಸ್ ವಿರೋಧಿ ಸಂಸ್ಥೆ ಸುಮಾರು 300 ಕೋಟಿ ಮೌಲ್ಯದ ಮಾದಕ ದ್ರವ್ಯಗಳನ್ನು ವಶಪಡಿಸಿಕೊಂಡಿದೆ.



ಸೋಮವಾರ 29.4.2024

ಸಂಜೆ ಮುಗಿಲು

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಸಮಂತಾ ಹುಟ್ಟುಹಬ್ಬಕ್ಕೆ ವಿಜಯ್ ದೇವರಕೊಂಡ ಲವ್ಲಿ ವಿಶ್ಸ್



ಟಾಲಿವುಡ್ ನಟಿ ಸಮಂತಾ ತಮ್ಮ ಹುಟ್ಟುಹಬ್ಬದ ಸೆಲೆಬ್ರೇಶನ್ ಮೂಡ್ ನಲ್ಲಿದ್ದಾರೆ. ತೆಲುಗಿನ ಕ್ಯಾಪ್ ಬ್ಯೂಟಿ ಸ್ಯಾಮ್‌ಗೆ ಹಲವು ನಟ-ನಟಿಯರು ಬರ್ತ್‌ಡೇಗೆ ವಿಶೇಷವಾಗಿ ಶುಭಕೋರಿದ್ದಾರೆ. ಇದೀಗ ವಿಜಯ್ ದೇವರಕೊಂಡ ತಮ್ಮ ಸಹ ನಟಿ ಸಮಂತಾಗೆ ಸ್ವೀಟ್ ಆಗಿ ವಿಶ್ ಮಾಡಿದ್ದಾರೆ.

ಹ್ಯಾಪಿ ಬರ್ತ್‌ಡೇ ಸಾಮಿ, ಸದಾ ಖುಷಿಯಾಗಿರಿ ಮತ್ತು ಆರೋಗ್ಯವಾಗಿರಿ ಎಂದು ವಿಜಯ್ ವಿಶೇಷವಾಗಿ ನಟಿಗೆ ಶುಭಕೋರಿದ್ದಾರೆ. 'ಖುಷಿ' ಸಿನಿಮಾ ಪ್ರೀ- ರಿಲೀಸ್ ಕಾರ್ಯಕ್ರಮದಲ್ಲಿ ಸಮಂತಾ ಜೊತೆ ಆತ್ಮೀಯವಾಗಿದ್ದ ಫೋಟೋಗಳನ್ನು ಶೇರ್ ಮಾಡಿ ಶುಭಹಾರೈಸಿದ್ದಾರೆ. ವಿಜಯ್ ಪೋಸ್ಟ್‌ಗೆ ಸ್ಯಾಮ್ ಕೂಡ ರಿಯಾಕ್ಟ್ ಮಾಡಿ, ಧನ್ಯವಾದ ತಿಳಿಸಿದ್ದಾರೆ.

ಅಂದಹಾಗೆ, ವಿವಾದ, ಅನಾರೋಗ್ಯ, ಯಶಸ್ಸು ಎಲ್ಲವೂ ಅನುಭವಿಸಿರುವ ಜೀವ ಸಮಂತಾ.ನಾಗಚೈತನ್ಯ ಜೊತೆಗಿನ ದಾಂಪತ್ಯಕ್ಕೆ ಅಂತ್ಯ ಹಾಡಿದ ಮೇಲೆ ಸಮಂತಾ ಸಾಕಷ್ಟು ಟೀಕೆಗಳಿಗೆ ಗುರಿಯಾಗಿದ್ದರು.ಎಲ್ಲಾ ವಿಚಾರಕ್ಕೂ ಸಮಂತಾ ಕಡೆಯೇ ಬೆಟ್ಟು ಮಾಡಿ ತೋರಿಸುತ್ತಿದ್ದರು.ಸಹವಾಸವೇ ಬೇಡ ಅಂತ ವೃತ್ತಿರಂಗದಲ್ಲಿ ಬ್ಯುಸಿಯಾದರು.'ಪುಷ್ಪ' ಚಿತ್ರದಲ್ಲಿ ಸೊಂಟ ಬಳುಕಿಸಿದ ಮೇಲೆ ಸಮಂತಾ ಲಕ್ ಬದಲಾಯ್ತು.

ಆದರೆ ಯಶೋದ ಮತ್ತು ಖುಷಿ ಸಿನಿಮಾ ಆದ್ಮೇಲೆ ಬಿಗ್ ಸ್ಕ್ರೀನ್ ಮೇಲೆ ಕಾಣಿಸಿಕೊಂಡಿರಲಿಲ್ಲ. ಎರಡೂ ಹೀನಾಯವಾಗಿ ಸೋತ ಚಿತ್ರಗಳು. ಸೋಲಿನ ಹೊಡೆತಕ್ಕೆ ಅನಾರೋಗ್ಯದ ಆಘಾತ ಎರಡನ್ನೂ ಸಹಿಕೊಳ್ಳೋಕೆ ಸ್ಯಾಮ್‌ಗೆ 8 ತಿಂಗಳು ಹಿಡಿಯಿತು.ಇದೀಗ ಮತ್ತೆ ಕೆಲಸಕ್ಕೆ ಮರಳಿದ್ದಾರೆ. ವರುಣ್ ಧವನ್‌ಗೆ ನಾಯಕಿಯಾಗಿ ಬಾಲಿವುಡ್ ಗೆ ಪಾದಾರ್ಪಣೆ ಮಾಡಿದ್ದಾರೆ. ಹನಿ ಬನಿ ಮೂಲಕ ನಟಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

# ತಮಟೆ ಹಿಡಿದು ಹಳ್ಳಿ ಹುಡುಗಿಯಾಗಿ ಮಿಂಚಿದ ರೀಷ್ಮಾ ನಾಣಯ್ಯ




ಕೊಡಗಿನ ಬೆಡಗಿ ರೀಷ್ಮಾ ನಾಣಯ್ಯಗೆ ನಿನ್ನೆ ಹುಟ್ಟುಹಬ್ಬದ ಸಂಭ್ರಮವಾಗಿದ್ದು, ಚಿತ್ರತಂಡದಿಂದ ಫ್ಯಾನ್ಸ್‌ಗೆ ಸರ್ಪ್ರೈಸ್ ಸಿಕ್ಕಿದೆ. ತಮಟೆ ಹಿಡಿದು ಹಳ್ಳಿ ಹುಡುಗಿಯ ಗೆಟಪ್‌ನಲ್ಲಿರುವ ರೀಷ್ಮಾ ಪೋಸ್ಟರ್ ಅನ್ನು ಚಿತ್ರತಂಡ ರಿವೀಲ್ ಮಾಡಿದ್ದಾರೆ.ಈ ಮೂಲಕ ಚಿತ್ರದ ರೀಷ್ಮಾ ಪಾತ್ರದ ಲುಕ್ ಅನ್ನು ಪರಿಚಯಿಸಿದ್ದಾರೆ.




ಕೆಂಪು ಬಣ್ಣದ ಲಂಗ ದಾವಣಿಯಲ್ಲಿ ನಟಿ ಮುದ್ದಾಗಿ ಕಾಣಿಸಿಕೊಂಡಿದ್ದಾರೆ. ತಮಟೆ ಹಿಡಿದು ಹೊಡೆಯುತ್ತಿರುವ ಪೋಸ್‌ನಲ್ಲಿ ನಟಿ ರಗಡ್ ಆಗಿ ಕಾಣಿಸಿಕೊಂಡಿದ್ದಾರೆ. ಉದ್ದನೆಯ ಜಡೆ ಪೋಸ್ಟರ್‌ನಲ್ಲಿ ಎದ್ದು ಕಾಣುತ್ತಿದೆ. ನಟಿಯ ಹಳ್ಳಿ ಅವತಾರ ಪ್ರೇಕ್ಷಕರ ಗಮನ ಸೆಳೆದಿದೆ.

'ಕೆಡಿ' ಸಿನಿಮಾದಲ್ಲಿ ಧ್ರುವ ಸರ್ಜಾಗೆ ನಾಯಕಿಯಾಗಿ ರೀಷ್ಮಾ ನಟಿಸಿದ್ದಾರೆ.ನಿರ್ದೇಶಕ ಪ್ರೇಮ್ ಈ ಸಿನಿಮಾಗೆ ಆಕ್ಷನ್ ಕಟ್ ಹೇಳಿದ್ದಾರೆ.ಚಿತ್ರದಲ್ಲಿ ಶಿಲ್ಪಾ ಶೆಟ್ಟಿ, ರವಿಚಂದ್ರನ್, ರಮೇಶ್ ಅರವಿಂದ್, ಸಂಜಯ್ ದತ್ ಸೇರಿದಂತೆ ಹಲವರು ನಟಿಸಿದ್ದಾರೆ.

ಸದ್ಯ 'ಕೆಡಿ' ಮತ್ತು ಉಪೇಂದ್ರ ನಟನೆಯ 'ಯುಐ' ಚಿತ್ರದ ರಿಲೀಸ್‌ಗಾಗಿ ನಟಿ ಎದುರು ನೋಡ್ತಿದ್ದಾರೆ.ಈ ಎರಡು ಸಿನಿಮಾಗಳ ಮೇಲೆ ಫ್ಯಾನ್ಸ್‌ಗೆ ಭಾರೀ ನಿರೀಕ್ಷೆಯಿದೆ.

# ಪರಭಾಷೆಯಲ್ಲಿ ಕನ್ನಡತಿ ರುಕ್ಮಿಣಿ ವಸಂತ್‌ಗೆ ಭಾರೀ ಬೇಡಿಕೆ



ಬೆಂಗಳೂರಿನ ಬೆಡಗಿ ರುಕ್ಮಿಣಿ ವಸಂತ್‌ಗೆ ಚಿತ್ರರಂಗದಲ್ಲಿ ಅದೃಷ್ಟ ಕೈಹಿಡಿದಿದೆ. 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾ ಬಹುಭಾಷೆಗಳಲ್ಲಿ ರಿಲೀಸ್ ಆಗಿ ಪ್ರಿಯಾ ಪಾತ್ರ ಎಲ್ಲರ ಗಮನ ಸೆಳೆದಿತ್ತು.ಈಗ ಕನ್ನಡದ ಜೊತೆಗೆ ತೆಲುಗು ಮತ್ತು ತಮಿಳಿನಲ್ಲಿ ನಟಿಗೆ ಬೇಡಿಕೆ ಹೆಚ್ಚಾಗಿದೆ. ಸಾಲು ಸಾಲು ಸಿನಿಮಾಗಳಲ್ಲಿ ನಟಿ ಬ್ಯುಸಿಯಾಗಿದ್ದಾರೆ.

'ಬೀರ್‌ಬಲ್' ಸಿನಿಮಾದ ಮೂಲಕ ಚಿತ್ರರಂಗಕ್ಕೆ ರುಕ್ಮಿಣಿ ಎಂಟ್ರಿ ಕೊಟ್ಟರು. ಬಳಿಕ ರಕ್ಷಿತ್ ಶೆಟ್ಟಿಗೆ ನಾಯಕಿಯಾಗಿ ಮನೋಜ್ಞವಾಗಿ ನಟಿಸಿದ್ದರು. ಈಗ ಪರಭಾಷೆಯಲ್ಲಿ ಆಫರ್ ಸಿಕ್ಕರೂ ಕೂಡ ಕನ್ನಡ ಚಿತ್ರಗಳಿಗೆ ನಟಿ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದಾರೆ.

ಸದ್ಯ ಶ್ರೀಮುರಳಿ ನಟನೆಗ ಬಘೀರ ಸಿನಿಮಾದಲ್ಲಿ ರುಕ್ಮಿಣಿ ನಾಯಕಿಯಾಗಿದ್ದು, ಚಿತ್ರದ ಶೂಟಿಂಗ್‌ನಲ್ಲಿ ಬ್ಯುಸಿಯಾಗಿದ್ದಾರೆ. ಶಿವಣ್ಣ ನಟನೆ 'ಭೈರತಿ ರಣ್‌ಗಲ್' ಚಿತ್ರದಲ್ಲಿ ನಟಿಸುತ್ತಿದ್ದಾರೆ.ಇದರ ಜೊತೆಗೆ ರಿಷಬ್ ಶೆಟ್ಟಿ ನಟನೆಯ 'ಕಾಂತಾರ' ಚಾಪ್ಟರ್ -1ರಲ್ಲಿ ರುಕ್ಮಿಣಿಗೆ ಅವಕಾಶ ಸಿಕ್ಕಿದೆ ಎನ್ನಲಾಗಿದೆ.

ತಮಿಳಿನ ನಟ ವಿಜಯ್ ಸೇತುಪತಿ ಜೊತೆ ಸಿನಿಮಾ ಮಾಡಿ ಮುಗಿಸಿದ್ದಾರೆ. ಸದ್ಯದಲ್ಲೇ ಆ ಸಿನಿಮಾದ ರಿಲೀಸ್ ಬಗ್ಗೆ ಮಾಹಿತಿ ಸಿಗಲಿದೆ. ಈ ಚಿತ್ರದಲ್ಲಿ ನಟಿ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ.

ಶಿವಕಾರ್ತಿಕೇಯನ್ ಮುಂದಿನ ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದು, ವಿಭಿನ್ನ ಪಾತ್ರಕ್ಕೆ ನಟಿ ಜೀವ ತುಂಬಿದ್ದಾರೆ. ತೆಲುಗಿನ ಕೆಲವು ಸಿನಿಮಾಗಳ ಮಾತುಕತೆ ಕೂಡ ಆಗಿದೆ. ಸದ್ಯದಲ್ಲೇ ಹೆಚ್ಚಿನ ಮಾಹಿತಿ ಹೊರಬೀಳಲಿದೆ.

# 16 ಅಂಕ ಗಳಿಸಿಯೂ ಪ್ಲೇಆಫ್ ಪ್ರವೇಶಿಸದ ರಾಜಸ್ಥಾನ್ ರಾಯಲ್ಸ್..!



ಈ ಬಾರಿಯ ಐಪಿಎಲ್‌ನಲ್ಲಿ ಆಡಿರುವ 9 ಪಂದ್ಯಗಳಲ್ಲಿ 8 ಜಯ ಸಾಧಿಸಿರುವ ರಾಜಸ್ಥಾನ್ ರಾಯಲ್ಸ್ ತಂಡವು ಅಂಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಇದಾಗ್ಯೂ ಸಂಜು ಸ್ಯಾಮ್ಸನ್ ಪಡೆ ಪ್ಲೇಆಫ್ ಪ್ರವೇಶವನ್ನು ಖಚಿತಪಡಿಸಿಕೊಂಡಿಲ್ಲ ಎಂಬುದು ವಿಶೇಷ.

ಅಂದರೆ ರಾಜಸ್ಥಾನ್ ರಾಯಲ್ಸ್ ತಂಡದ ಪ್ಲೇಆಫ್ ಗೆ ನೇರ ಅರ್ಹತೆ ಪಡೆಯಲು ಇನ್ನೆರಡು ಪಂದ್ಯಗಳನ್ನು ಗೆಲ್ಲಬೇಕಿದೆ. ಆರ್ ಸಿಬಿ ತಂಡವನ್ನು ಹೊರತುಪಡಿಸಿ ಉಳಿದೆಲ್ಲಾ ತಂಡಗಳಿಗೂ 16 ಅಂಕಗಳನ್ನು ಗಳಿಸುವ ಅವಕಾಶವಿದೆ. ಹೀಗಾಗಿ ಪ್ರಸ್ತುತ 16 ಅಂಕಗಳನ್ನು ಹೊಂದಿರುವ ಆರ್ ಆರ್ ತಂಡವು ಮುಂದಿನ ಪಂದ್ಯದಲ್ಲಿ ಗೆದ್ದು ಪ್ಲೇಆಫ್ ಪ್ರವೇಶಿಸುವನ್ನು ಬಹುತೇಕ ಖಚಿತಪಡಿಸಿಕೊಳ್ಳಬಹುದು.

ಹಾಗೆಯೇ ಮುಂದಿನ 5 ಪಂದ್ಯಗಳಲ್ಲಿ 2 ಮ್ಯಾಚ್ ಗಳನ್ನು ರಾಜಸ್ಥಾನ್ ರಾಯಲ್ಸ್ ತಂಡ ಗೆದ್ದರೆ ಪ್ಲೇಆಫ್ ಗೆ ಅಧಿಕೃತವಾಗಿ ಅರ್ಹತೆ ಪಡೆಯಲಿದೆ. ಹೀಗಾಗಿ ರಾಜಸ್ಥಾನ್ ರಾಯಲ್ಸ್ ತಂಡವು ಸನ್ ರೈಸರ್ಸ್ ಹೈದರಾಬಾದ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಗೆಲ್ಲುವ ಮೂಲಕ ಆರ್ ಆರ್ ಪ್ಲೇಆಫ್ ಗೆ ಪ್ರವೇಶಿಸುವ ವಿಶ್ವಾಸದಲ್ಲಿದೆ.

ಇನ್ನು 8 ಪಂದ್ಯಗಳಲ್ಲಿ 10 ಅಂಕ ಪಡೆದಿರುವ ಕೆಕೆಆರ್ ಮುಂದಿನ 6 ಪಂದ್ಯಗಳಲ್ಲಿ 5 ಜಯ ಸಾಧಿಸಿದರೆ ಒಟ್ಟು 20 ಅಂಕಗಳೊಂದಿಗೆ ಪ್ಲೇಆಫ್ ಗೆ ಪ್ರವೇಶಿಸಿಬಹುದು. ಹಾಗೆಯೇ 10 ಅಂಕಗಳನ್ನು ಹೊಂದಿರುವ ಸಿಎಸ್ ಕೆ ತಂಡ ಮುಂದಿನ 5 ಪಂದ್ಯಗಳಲ್ಲೂ ಜಯ ಸಾಧಿಸಿ 20 ಪಾಯಿಂಟ್ಸ್ ನೊಂದಿಗೆ ಪ್ಲೇಆಫ್ ಗೆ ಅರ್ಹತೆ ಗಿಟ್ಟಿಸಿಕೊಳ್ಳಬಹುದು. ಅದೇ ರೀತಿ ಸನ್ ರೈಸರ್ಸ್ ಹೈದರಾಬಾದ್ ಹಾಗೂ ಲಕ್ನೋ ಸೂಪರ್ ಜೈಂಟ್ಸ್ ತಂಡಗಳಿಗೂ ಮುಂದಿನ 5 ಪಂದ್ಯಗಳಲ್ಲಿ ಜಯ ಸಾಧಿಸಿ 20 ಅಂಕಗಳನ್ನು ಗಳಿಸಲು ಉತ್ತಮ ಅವಕಾಶವಿದೆ.

ಹೀಗಾಗಿ ಮುಂದಿನ ಪಂದ್ಯಗಳಲ್ಲಿ ಹೆಚ್ಚಿನ ಅಂಕಗಳೊಂದಿಗೆ ಪ್ಲೇಆಫ್ ಪ್ರವೇಶಿಸಲು ರಾಜಸ್ಥಾನ್ ರಾಯಲ್ಸ್, ಕೊಲ್ಕತ್ತಾ ನೈಟ್ ರೈಡರ್ಸ್, ಚೆನ್ನೈ ಸೂಪರ್ ಕಿಂಗ್ಸ್, ಸನ್ ರೈಸರ್ಸ್ ಹೈದರಾಬಾದ್ ಮತ್ತು ಲಕ್ನೋ ಸೂಪರ್ ಜೈಂಟ್ಸ್ ತಂಡಗಳ ನಡುವೆ ನೇರ ಪೈಪೋಟಿ ಇದೆ. ಈ ಪೈಪೋಟಿ ನಡುವೆ ಕೆಲ ತಂಡಗಳ ಲೆಕ್ಕಾಚಾರಗಳು ತಲೆಕೆಳಗಾದರೆ ಮಾತ್ರ ಉಳಿದ ಟೀಮ್ ಗಳು ಪ್ಲೇಆಫ್ ರೇಸ್ ನಲ್ಲಿ ಮುಂಚೂಣಿಗೆ ಬರಲಿದೆ.

# ವೋಟ್ ಮಾಡದ 'ಸತ್ತ ಪ್ರಜೆಗಳಿಗೆ ಶ್ರದ್ಧಾಂಜಲಿ'!

**ಬೆಂಗಳೂರು:** ರಾಜ್ಯದಲ್ಲಿ ಮೊದಲ ಹಂತದ ಲೋಕಸಭೆ ಚುನಾವಣೆ ಮುಗಿದಿದೆ. ಬೆಂಗಳೂರು ಸೇರಿದಂತೆ 14 ಕ್ಷೇತ್ರಗಳಿಗೆ ನಿನ್ನೆ ಮತದಾನ ನಡೆದಿದೆ.ಈ ಬಾರಿ 14 ಕ್ಷೇತ್ರಗಳಲ್ಲಿ ಶೇಕಡಾ 69.23ರಷ್ಟು ಮತದಾನ ನಡೆದಿದೆ.ಈ ಪೈಕಿ ಮಂಡ್ಯದಲ್ಲಿ ಅತೀ ಹೆಚ್ಚು ವೋಟಿಂಗ್ ಆಗಿದೆ.ಸಕ್ಕರೆ ನಾಡಲ್ಲಿ ಶೇಕಡಾ 81.48ರಷ್ಟು ಮಂದಿ ಬಿಸಿಲನನ್ನೂ ಲೆಕ್ಕಿಸದೇ, ಮನೆಯಿಂದ ಹೊರಬಂದು ವೋಟ್ ಮಾಡಿದ್ದಾರೆ. ಬಹುತೇಕ ಎಲ್ಲಾ ಕ್ಷೇತ್ರಗಳಲ್ಲೂ ಶೇಕಡಾ 70ಕ್ಕಿಂತ ಹೆಚ್ಚು ಮತದಾನವಾಗಿದೆ. ಆದರೆ ಬೆಂಗಳೂರಿನಲ್ಲೇ ಅತೀ ಕಡಿಮೆ ವೋಟಿಂಗ್ ದಾಖಲಾಗಿದ್ದು, ಬೆಂಗಳೂರಿಗರ ಬೇಜವಾಬ್ದಾರಿಗೆ ರಾಜ್ಯಾದ್ಯಂತ ಆಕ್ರೋಶ ವ್ಯಕ್ತವಾಗಿದೆ.ಇದೀಗ ಬೆಂಗಳೂರಿನಲ್ಲಿ ವೋಟ್ ಮಾಡದವರಿಗೆ ಶ್ರದ್ಧಾಂಜಲಿ ಸಲ್ಲಿಸುವ ಬ್ಯಾನರ್‌ಗಳು ರಾರಾಜಿಸುತ್ತಿವೆ.




**ಬೆಂಗಳೂರಿನಲ್ಲಿ ಅತೀ ಕಡಿಮೆ ಮತದಾನ!:** ಶುಕ್ರವಾರ ಮೊದಲ ಹಂತದ ಚುನಾವಣೆಯಲ್ಲಿ ಬೆಂಗಳೂರಿನಲ್ಲೇ ಅತೀ ಕಡಿಮೆ ಮತದಾನ ದಾಖಲಾಗಿದೆ.ಬೆಂಗಳೂರು ಗ್ರಾಮಾಂತರದಲ್ಲಿ ಶೇಕಡಾ 67.28 ವೋಟಿಂಗ್ ದಾಖಲಾಗಿದ್ದರೆ, ಬೆಂಗಳೂರು ಕೇಂದ್ರದಲ್ಲಿ 52.81ರಷ್ಟು ವೋಟಿಂಗ್, ಬೆಂಗಳೂರು ಉತ್ತರದಲ್ಲಿ 54.42ರಷ್ಟು ಮತದಾನ ದಾಖಲಾಗಿದೆ.ಇದು 14 ಕ್ಷೇತ್ರಗಳ ಪೈಕಿ ಅತ್ಯಂತ ಕಡಿಮೆ ಮತದಾನವಾಗಿದೆ.

**ವಲಸಿಗರ ಮೇಲೆ ಬೆಂಗಳೂರಿಗರು ಗರಂ:** ರಾಜಧಾನಿ ಬೆಂಗಳೂರು ವಲಸೆ ನಿವಾಸಿಗಳ ವಿರುದ್ಧ ಇಲ್ಲಿನ ನಾಗರಿಕರು ಕಿಡಿಕಾರಿದ್ದಾರೆ. ಪ್ರತೀ ಸಲದ ಚುನಾವಣೆಯಂತೆ ಈ ಬಾರಿ ಚುನಾವಣೆಗೂ ಬೆಂಗಳೂರಿನ ವಲಸಿಗರು ಕೈಕೊಟ್ಟಿದ್ದಾರೆ. ಬೆಂಗಳೂರಿನ ಮತದಾರರ ಪಟ್ಟಿಯಲ್ಲಿ ಹೆಸರಿದ್ದೂ, ಇಲ್ಲಿ ಮತದಾನ ಮಾಡುವ ಹಕ್ಕಿದ್ರೂ ವೋಟ್ ಮಾಡದಿದ್ದಕ್ಕೆ ಆಕ್ರೋಶ ವ್ಯಕ್ತವಾಗಿದೆ.

ಬೆಂಗಳೂರಿನಲ್ಲಿದ್ದೂ, ಬೆಂಗಳೂರಿನಲ್ಲಿ ಮತದಾನದ ಹಕ್ಕಿದ್ದರೂ ವೋಟ್ ಮಾಡದವರಿಗೆ ಶ್ರದ್ಧಾಂಜಲಿ ಸಲ್ಲಿಸಿ, ಫ್ಲೆಕ್ಸ್, ಬ್ಯಾನರ್‌ಗಳನ್ನು ಹಾಕಲಾಗಿದೆ.ಬದುಕಿದ್ದು ಸತ್ತಂತೆ ವರ್ತಿಸಿ ಮತದಾನ ಮಾಡದಿರೋದಕ್ಕೆ ಬೇಸರ ವ್ಯಕ್ತವಾಗಿದೆ.

ಮತಹಾಕದವರಗೆ ಬೀದಿ ಬೀದಿಯಲ್ಲಿ ಬ್ಯಾನರ್ ಹಾಕಿ ಶ್ರದ್ಧಾಂಜಲಿ ಅರ್ಪಣೆ ಮಾಡಲಾಗಿದೆ. ಮತದಾನಕ್ಕಾಗಿ ಚುನಾವಣಾ ಆಯೋಗ ಬೀದಿ ಬೀದಿ ಪ್ರಚಾರ ಮಾಡಿದ್ರೂ ವೋಟ್ ಮಾಡದೆ ನಿರ್ಲಕ್ಷ್ಯ ತೋರಿದ, ಬದುಕಿದ್ದರೂ ಸತ್ತಂತೆ ವರ್ತಿಸಿದ ಸತ್ತ ಪ್ರಜೆಗಳಿಗೆ ನಮ್ಮ ಶ್ರದ್ಧಾಂಜಲಿ ಅಂತ ಬ್ಯಾನರ್ ಹಾಕಲಾಗಿದೆ.

**ಮತದಾನ ಮಾಡದವರ ವಿರುದ್ಧ ಆಕ್ರೋಶ:** ನಗರದ ಎಲ್ಲಾ ಮೂಲಭೂತ ಸೌಕರ್ಯಗಳನ್ನ ಕಲ್ಸಿದ್ರೂ ಮತದಾನದ ಮೌಲ್ಯ ಗೊತ್ತಿಲ್ಲದೇ ನಿರ್ಲಕ್ಷ್ಯ ಮಾಡಲಾಗಿದೆ ಎಂಬ ಆಕ್ರೋಶ ವ್ಯಕ್ತವಾಗಿದೆ.ಹೀಗಾಗಿ ನಗರದ ಹಲವು ಕಡೆ ಸತ್ ಪ್ರಜೆಗಳು ಎಂದು ಪೋಸ್ಟರ್ ಹಾಕಲಾಗಿದೆ. ಬದುಕಿದ್ದು ಸತ್ತಂತೆ ವರ್ತಿಸಿದವರ ವಿರುದ್ಧ ನಾಗರಿಕರು ಅಸಮಾಧಾನ ಹೊರ ಹಾಕಿದ್ದಾರೆ.ನಿಮಗಿದೋ ಭಾವಪೂರ್ಣ ಶ್ರದ್ಧಾಂಜಲಿ ಎಂದು ಬ್ಯಾನರ್ ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ವೋಟ್ ಮಾಡದ ನಟಿ ರಮ್ಯಾ, ರಶ್ಮಿಕಾ:** ಶುಕ್ರವಾರ ಬಹುತೇಕ ಎಲ್ಲಾ ನಟ, ನಟಿಯರು, ಚಿತ್ರರಂಗದವರು ಮತಗಟ್ಟೆಗೆ ಬಂದು ವೋಟ್ ಮಾಡಿದ್ದಾರೆ. ಆದರೆ ಚಿತ್ರನಟಿ ರಮ್ಯಾ ಹಾಗೂ ರಶ್ಮಿಕಾ ಮಂದಣ್ಣ ಮಾತ್ರ ವೋಟ್ ಮಾಡಿಲ್ಲ. ಮಂಡ್ಯದಲ್ಲಿ ರಮ್ಯಾ ವೋಟ್ ಇದ್ದು, ರಶ್ಮಿಕಾ ವೋಟ್ ಕೊಡಗಿನ ವಿರಾಜಪೇಟೆಯಲ್ಲಿ ಇತ್ತು.

**ವೋಟ್ ಹಾಕದವರ ಹೆಸರನ್ನೇ ಡಿಲೀಟ್ ಮಾಡಿ:** ಯಾರು ಮತ ಹಾಕಲು ಬರೋದಿಲ್ವೋ ಅವರ ಹೆಸರನ್ನು ಡಿಲೀಟ್ ಮಾಡಿ.ನಾವು ಯಾಕೆ ಅವರ ಬಗ್ಗೆ ಮಾತಾಡೋಣ.ಮತ ಚಲಾಯಿಸಿದವರ ಬಗ್ಗೆ ಮಾತಾಡಿ ಎಂದು ಹಿರಿಯ ನಟ ಅನಂತ್ ನಾಗ್ ತರಾಟೆಗೆ ತೆಗೆದುಕೊಂಡ್ರು.4-5 ಚುನಾವಣೆಯಿಂದ ಇದೇ ನಡೀತಿದೆ, ಯಾರು ಬರಲ್ಲ ಅವರನ್ನ ಮರೆತು ಬಿಡಿ. ದೇಶಕ್ಕಾಗಿ ಗಡಿಯಲ್ಲಿ ಸೈನಕರು ಪ್ರಾಣತ್ಯಾಗ ಮಾಡ್ತಾರೆ. ಆದ್ರೆ ನಮ್ಮ ಜನ 5 ವರ್ಷಕ್ಕೊಮ್ಮೆ ಮನೆಯಿಂದ ಹೊರಗೆ ಬಂದು ವೋಟು ಹಾಕೋದಿಲ್ಲ ಅಂದ್ರೆ, ಅಂತವರನ್ನು ಲಿಸ್ಟ್‌ನಿಂದಲೇ ಡಿಲೀಟ್‌ಮಾಡಿ ಎಂದು ಅನಂತ್‌ನಾಗ್ ಕಿಡಿಕಾರಿದರು.

# ಪ್ಲೇಆಫ್ ಪ್ರವೇಶಿಸಲು ಆರ್‌ಸಿಬಿ ತಂಡಕ್ಕಿದೆ ಉತ್ತಮ ಅವಕಾಶ

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್ 17 ರಲ್ಲಿ ಸೋಲುಗಳಿಂದ ಕಂಗೆಟ್ಟಿದ್ದ ತಂಡವು ಇದೀಗ ಬ್ಯಾಕ್ ಟು ಬ್ಯಾಕ್ ಗೆಲುವು ದಾಖಲಿಸಿದೆ. ಮೊದಲಾರ್ಧದ 7 ಪಂದ್ಯಗಳಲ್ಲಿ ಕೇವಲ 1 ಜಯ ಸಾಧಿಸಿದ್ದ ಆರ್ ಸಿಬಿ, ದ್ವಿತೀಯಾರ್ಧದಲ್ಲಿ 2 ಗೆಲುವು ಸಾಧಿಸಿದೆ. ಈ ಮೂಲಕ ಒಟ್ಟು 6 ಅಂಕಗಳನ್ನು ಕಲೆಹಾಕಿದೆ.

ಈ 6 ಅಂಕಗಳೊಂದಿಗೆ ಆರ್ ಸಿಬಿ ತಂಡದ ಪ್ಲೇಆಫ್ ಆಸೆ ಕೂಡ ಜೀವಂತವಾಗಿದೆ. ಅಂದರೆ ಮುಂದಿನ 4 ಪಂದ್ಯಗಳಲ್ಲೂ ಭರ್ಜರಿ ಜಯ ಸಾಧಿಸಿದರೆ ಆರ್ ಸಿಬಿ ತಂಡಕ್ಕೆ ಪ್ಲೇಆಫ್ ಪ್ರವೇಶಿಸುವ ಅವಕಾಶ ಸಿಗಲಿದೆ. ಆದರೆ ಅದಕ್ಕೂ ಮುನ್ನ ಇತರೆ ತಂಡಗಳ ಫಲಿತಾಂಶಗಳನ್ನು ಎದುರು ನೋಡಬೇಕಾಗುತ್ತದೆ.

ಪ್ರಸ್ತುತ ಅಂಕ ಪಟ್ಟಿಯಲ್ಲಿ ಪಂಜಾಬ್ ಕಿಂಗ್ಸ್, ಮುಂಬೈ ಇಂಡಿಯನ್ಸ್ ಹಾಗೂ ಆರ್ ಸಿಬಿ 6 ಅಂಕಗಳನ್ನು ಹೊಂದಿದೆ. ಇನ್ನು ಗುಜರಾತ್ ಟೈಟಾನ್ಸ್ ತಂಡ 8 ಪಾಯಿಂಟ್ಸ್ ಪಡೆದುಕೊಂಡಿದೆ. ಇನ್ನುಳಿದಂತೆ ಕೆಕೆಆರ್, ಸಿಎಸ್ ಕೆ, ಎಲ್ ಎಸ್ ಜಿ,



ಎಸ್ ಆರ್ ಹೆಚ್, ಡೆಲ್ಲಿ ಕ್ಯಾಪಿಟಲ್ಸ್ ತಂಡ 10 ಅಂಕಗಳನ್ನು ಹೊಂದಿದೆ. ಅತ್ತ ರಾಜಸ್ಥಾನ್ ರಾಯಲ್ಸ್ 16 ಅಂಕಗಳೊಂದಿಗೆ ಪ್ಲೇಆಫ್ ಪ್ರವೇಶಿಸುವುದನ್ನು ಬಹುತೇಕ ಖಚಿತಪಡಿಸಿಕೊಂಡಿದೆ.

ಅಂದರೆ ಇಲ್ಲಿ ಆರ್ ಆರ್ ತಂಡದ ಗೆಲುವು ಮತ್ತು ಸೋಲು ಆರ್ ಸಿಬಿ ತಂಡವನ್ನು ಬಾಧಿಸುವುದಿಲ್ಲ. ಇದಾಗ್ಯೂ ರಾಜಸ್ಥಾನ್ ರಾಯಲ್ಸ್ 20 ಅಂಕಗಳನ್ನು ಪಡೆದರೆ ಆರ್ ಸಿಬಿಗೆ ಅನುಕೂಲವಾಗಲಿದೆ. ಹಾಗೆಯೇ ಎಸ್ ಆರ್ ಹೆಚ್ ಮುಂದಿನ ಪಂದ್ಯಗಳನ್ನು ಗೆದ್ದು 20 ಅಂಕಗಳನ್ನು ಪಡೆಯಬೇಕು. ಇನ್ನುಳಿದಂತೆ ಕೆಕೆಆರ್ 16 ಅಂಕಗಳನ್ನು ಪಡೆದರೆ ಆರ್ ಸಿಬಿ ತಂಡದ ಪ್ಲೇಆಫ್ ಹಾದಿ ಸುಗಮವಾಗಲಿದೆ.

ಆರ್‌ಆರ್, ಎಸ್‌ಆರ್‌ಹೆಚ್, ಕೆಕೆಆರ್ ಕ್ರಮವಾಗಿ 20, 20 ಮತ್ತು 16 ಅಂಕಗಳನ್ನು ಪಡೆಯುವುದರಿಂದ ಸಿಎಸ್ ಕೆ, ಎಲ್ ಎಸ್ ಜಿ, ಜಿಟಿ, ಮುಂಬೈ ಇಂಡಿಯನ್ಸ್, ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಪಂಜಾಬ್ ಕಿಂಗ್ಸ್ ತಂಡಗಳ ಅಂಕಗಳು 12 ರಲ್ಲೇ ಉಳಿಯಲಿದೆ. ಅಂದರೆ ಈ ತಂಡಗಳು ಆರಕ್ಕಿಂತ ಹೆಚ್ಚಿನ ಪಂದ್ಯಗಳನ್ನು ಗೆಲ್ಲಬಾರದು. ಒಂದು ವೇಳೆ 7 ಮ್ಯಾಚ್ ಗಳಲ್ಲಿ ಜಯ ಸಾಧಿಸಿದರೆ ನೆಟ್ ರನ್ ರೇಟ್ ಪರಿಗಣನೆಗೆ ಬರಲಿದೆ. ಇದೇ ವೇಳೆ ಆರ್ ಸಿಬಿ ತಂಡವು ಮುಂದಿನ ಎಲ್ಲಾ ಪಂದ್ಯಗಳಲ್ಲೂ ಭರ್ಜರಿ ಜಯ ಸಾಧಿಸಿ ಉತ್ತಮ ನೆಟ್ ರನ್ ರೇಟ್ ನೊಂದಿಗೆ ಒಟ್ಟು 14 ಅಂಕಗಳನ್ನು ಸಂಪಾದಿಸಬಹುದು. ಈ ಮೂಲಕ ಇತರೆ ತಂಡಗಳನ್ನು ಹಿಂದಿಕ್ಕಿ ಪ್ಲೇಆಫ್ ಪ್ರವೇಶಿಸುವ ಅವಕಾಶ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ದೊರೆಯಲಿದೆ. ಅದರಂತೆ ಆರ್ ಸಿಬಿ ತಂಡ ಈ ಬಾರಿ ಪ್ಲೇಆಫ್ ಹಂತಕ್ಕೇರಲಿದೆಯಾ ಕಾದು ನೋಡಬೇಕಿದೆ.

# ಪ್ರಜ್ವಲ್ ತಪ್ಪಿಸಿಕೊಂಡಿದ್ದರೆ ನನಗೆ ಸಂಬಂಧವಿಲ್ಲ

**ಬೆಂಗಳೂರು:** ಪ್ರಜ್ವಲ್ ರೇವಣ್ಣ ಅಶ್ಲೀಲ ವೀಡಿಯೋ ವೈರಲ್ ಪ್ರಕರಣದ ಕುರಿತು ಮಾಜಿ ಸಿಎಂ ಹೆಚ್‌ಡಿ ಕುಮಾರಸ್ವಾಮಿ ಪ್ರತಿಕ್ರಿಯೆ ನೀಡಿದ್ದು, ನಾನಾಗಲಿ, ಹೆಚ್‌ಡಿ ದೇವೇಗೌಡರಾಗಲಿ ಈ ರೀತಿಯ ಕೆಲಸ ಮಾಡಿಲ್ಲ. ಹೆಣ್ಣುಮಕ್ಕಳ ವಿಚಾರದಲ್ಲಿ ಗೌರವ ಕೊಟ್ಟು ಅವರ ಸಮಸ್ಯೆ ಬಗೆಹರಿಸಿ ಕಳುಹಿಸಿದ್ದೇವೆ ಎಂದು ಹೇಳಿದ್ದಾರೆ.

ಪ್ರಜ್ವಲ್ ರೇವಣ್ಣ ಕೇಸ್ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ಸಿಎಂ ಎಸ್‌ಐಟಿ ತನಿಖೆಗೆ ಆದೇಶ ನೀಡಿದ್ದಾರೆ ಎಂದು ಗಮನಿಸಿದ್ದೇನೆ. ಹಾಸನ ಚುನಾವಣಾ ಪ್ರಚಾರ ವೇಳೆ ಪ್ರಕರಣ ಆರಂಭವಾಗಿದೆ.ವಾಸ್ತವಾಂಶ ಹೊರಬರಲಿ. ತನಿಖೆ ಆದಮೇಲೆ ಸತ್ಯಾಸತ್ಯತೆ ಹೊರ ಬರಲಿದೆ. ನೆಲದ ಕಾನೂನಲ್ಲಿ ತಪ್ಪು ಮಾಡಿದವನು, ಉಪ್ಪು ತಿಂದವನು ನೀರು ಕುಡಿಯಲೇಬೇಕು.ನಾವು ತಪ್ಪು ಮಾಡಿದವರನ್ನು ಕ್ಷಮಿಸುವುದಿಲ್ಲ. ಹೀಗಾಗಿ ತನಿಖೆ ವರದಿ ಬರಲಿ. ಬಂದಮೇಲೆ ಮಾತನಾಡುತ್ತೇನೆ.



ಪ್ರಜ್ವಲ್ ರೇವಣ್ಣ ತಪ್ಪಿಸಿಕೊಂಡಿದ್ದರೆ ನನಗೆ ಸಂಬಂಧವಿಲ್ಲ. ಎಸ್‌ಐಟಿ ತನಿಖೆಗೆ ಆದೇಶಿಸಿದ್ದಾರೆ. ಎಸ್‌ಐಟಿ ಅಧಿಕಾರಿಗಳನ್ನು ನೇಮಿಸಿದ್ದಾರೆ. ವಿದೇಶಕ್ಕೆ ಹೋಗಿದ್ದರೆ ಕರೆದುಕೊಂಡು ಬರುವ ಜವಾಬ್ದಾರಿ ಅವರದ್ದು, ನಾನು ಉತ್ತರಿಸಲ್ಲ ಎಂದರು.

ಬರ ಪರಿಹಾರ ವಿಚಾರಕ್ಕೆ ಕಾಂಗ್ರೆಸ್ ಪ್ರತಿಭಟನೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸರ್ಕಾರ ಬರ ಪರಿಹಾರ ಕೇಳಿದ್ದು 18,000 ಕೋಟಿ ಅಲ್ಲ. ಸರ್ಕಾರ ಕೇಳಿದ್ದು 4,800 ಕೋಟಿ.ಎನ್‌ಡಿಆರ್‌ಎಫ್ ಆಕ್ಟ್ ಅಡಿಯಲ್ಲಿ ಇರೋದು ಕೊಟ್ಟರೆ ಸಾಕು ಅಂತ ಕೇಳಿದ್ದರು.ಇದು ಕೇಂದ್ರ ಸರ್ಕಾರದ ಮೇಲೆ ಪದೇ ಪದೇ ಗೂಬೆ ಕೂರಿಸೋ ಯತ್ನ ಮಾಡುತ್ತಿದೆ ಎಂದು ಕಿಡಿಕಾರಿದರು.

ನನಗಿರುವ ಮಾಹಿತಿ ಪ್ರಕಾರ 2004/2013 ರವರೆಗೆ ಎನ್‌ಡಿಆರ್‌ಎಫ್‌ನಿಂದ ಬರಗಾಲದ ಸಂದರ್ಭದಲ್ಲಿ ಕೊಟ್ಟಿದ್ದು ಬರೀ 8% ಮಾತ್ರ. ಮೋದಿ ಪ್ರಧಾನಿ ಆದಾಗಿನಿಂದ ಇಲ್ಲಿಯವರೆಗೆ 8 ವರ್ಷಕ್ಕೆ 38% ಕೊಟ್ಟಿದ್ದಾರೆ.ಇದು ನರೇಂದ್ರ ಮೋದಿ ಸರ್ಕಾರ ಕೊಟ್ಟಿರುವುದು.ಕಾಂಗ್ರೆಸ್ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡುತ್ತಿದ್ದಾರೆ.ಇವರ ಯೋಗ್ಯತೆಗೆ ಮೊದಲು ಕೊಡೋ ಹಣವನ್ನು ಜನರಿಗೆ ತಲುಪಿಸುವ ಕೆಲಸ ಮಾಡಬೇಕು ಎಂದು ವಾಗ್ದಾಳಿ ನಡೆಸಿದರು.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com